
ಕರ್ಮವೀರ

ಜನಪ್ರಿಯ ಸಚಿತ್ರ ವಾರಪತ್ರಿಕೆ - ಹುಬ್ಬಳ್ಳಿ.

೨೨ - ೮ - ೪೯

★

ಬೆಲೆ ಎರಡಾಣೆ



· ಹಿಪ್ಪರಗಿಯ ಮಲ್ಲಯ್ಯನ ಗುಡಿ

ಮುಖಪತ್ರದಲ್ಲಿ

ಹಿಪ್ಪರಗಿಯ ಮಲ್ಲಯ್ಯನ ಗುಡಿ

ವಿಜಾಪುರ ಜಿಲ್ಲೆಯ ದೇವರಹಿಪ್ಪರಗಿಯಲ್ಲಿರುವ ಮಲ್ಲಯ್ಯನ ಸುಂದರ ಗುಡಿಯ ಒಂದು ವೈಶಿಷ್ಟ್ಯವೆಂದರೆ ಅದರಲ್ಲಿ ಮೂರ್ತಿಯಾಗಲಿ ಲಿಂಗವಾಗಲಿ ಇಲ್ಲದ್ದು. ಹಾಗೆಂದು ಅದು ಹಾಳುಬಿದ್ದ ಗುಡಿಯಲ್ಲ. ಪೂಜೆ ಪುನಸ್ಕಾರಗಳು ಇಂದಿಗೂ ನಡೆಯುತ್ತಿವೆಯಲ್ಲದೆ ವರ್ಷಕ್ಕೊಮ್ಮೆ ದೊಡ್ಡ ಜಾತ್ರೆಯೂ ಸೇರುತ್ತದೆ. ಆದರೆ ಎಲ್ಲ ಪೂಜೆಯೂ ನಡೆಯುವುದು ಒಂದು ಗೋಡೆಗೆ ಯಾವುದೋ ಮುಸಲ್ಮಾನ ದಾಳಿಯ ಕಾಲದಲ್ಲಿ ಮೂರ್ತಿಭಂಜಕರಿಂದ ಗುಡಿಯನ್ನು ಕಾಪಾಡುವ ಸಲುವಾಗಿ ಮೂರ್ತಿಯನ್ನೊ ಲಿಂಗವನ್ನೊ ಮರೆಮಾಚಲು ಈ ಗೋಡೆಯನ್ನು ಕಟ್ಟಿರಬೇಕೆಂದು ಸಂಶೋಧಕರು ಊಹಿಸಿದ್ದಾರೆ. ಈಚೆಗೆ ಈ ದೃಷ್ಟಿಯಿಂದ ಗೋಡೆಯನ್ನು ಕಿತ್ತು ಮೂಲ ಬಿಂಬಕ್ಕೇ ಪೂಜೆ ನಡೆಸಬೇಕೆಂಬ ಕೆಲವರ ಪ್ರಯತ್ನಕ್ಕೆ ಭಕ್ತ ಜನರ ಬೆಂಬಲ ದೊರೆಯಲಿಲ್ಲ. ಅಶ್ವಿನ ಶು, ೧೨ ದಿನ ಅಲ್ಲಿ ನಡೆಯುವ ಉತ್ಸವದಲ್ಲಿ ನುಡಿಕಟ್ಟು (ಕಣಿ ಹೇಳುವದು) ನಡೆದು ಆಯಾ ವರ್ಷದ ಮಳೆ ಬೆಳೆಗಳೇ ಮೊದಲಾದವುಗಳ ಭವಿಷ್ಯವನ್ನು ಮಲ್ಲಯ್ಯನು ನುಡಿಸುತ್ತಿರುತ್ತಾನೆ. ಈ ಉತ್ಸವಕ್ಕೆ ಅದೇ ಊರಿನ ಇನ್ನೊಂದು ದೇವತೆಯಾದ ರಾವುತರಾಯನು ತನ್ನ ಗುಡಿಯಿಂದ ಅಶ್ವಾರೂಢನಾಗಿ ಮೆರವಣಿಗೆಯಲ್ಲಿ ಬರುತ್ತಿರುತ್ತಾನೆ.

ಚಿತ್ರ - ಶ್ರೀನಿವಾಸ ನಾಯಕ

ಕರ್ಮವೀರ

ಪ್ರತಿ ಸೋಮವಾರ ಹುಬ್ಬಳ್ಳಿಯಿಂದ ಹೊರಡುವ ವಾರಪತ್ರಿಕೆ

ಸಂಸ್ಥಾಪಕರು :

ಶ್ರೀ. ರಂ. ರಾ. ದಿವಾಕರ

ಸಂಪಾದಕರು :

ಶ್ರೀ. ಹ. ರಾ. ಪುರೋಹಿತ

ಹೊಸ ವರ್ಗಣಿ ವಿವರಗಳು :

೧ ವರ್ಷಕ್ಕೆ	ರೂ. ೬—೧೨—೦
೬ ತಿಂಗಳಿಗೆ	ರೂ. ೩—೮—೦
೩ ,,	ರೂ. ೨—೦—೦

ಬಿಡಿಸಂಚಿಕೆ : ೨ ಆಣೆ

ವ್ಹಿ. ಪಿ. ದ್ವಾರಾ ಕಳಿಸಿದರೆ ೦—೬—೦ ಹೆಚ್ಚು ಬೀಳುವದು.

ಚಂದಾದಾರರು : ತಮ್ಮ ವರ್ಗಣಿ, ಸಂಚಿಕೆಗಳ ತಲುಪುವಿಕೆಯ ಸಂಬಂಧದ ದೂರು ಮೊದಲಾದವುಗಳ ಬಗ್ಗೆ ಪತ್ರವ್ಯವಹಾರವನ್ನು ಮಾಡುವಾಗ ವಿಳಾಸದ ಚೀಟಿಯ ಮೇಲಿರುವ ಚಂದಾ ನಂಬರುಗಳನ್ನು ಉಲ್ಲೇಖಿಸಬೇಕು. ಇಲ್ಲದಿದ್ದರೆ ಸಾವಿರಗಟ್ಟಳೆ ಚಂದಾದಾರರಲ್ಲಿ ನಿಮ್ಮ ಹೆಸರನ್ನು ಕಂಡು ಹಿಡಿಯುವದು ಸಾಧ್ಯವಾಗದು.

ಒಮ್ಮೆ ಚಂದಾದಾರರಾದವರಿಗೆ ಅವರ ಅವಧಿ ಮುಗಿಯುವ ೧೫ ದಿನ ಮುಂಚಿತವೇ ವ್ಹಿ. ಪಿ. ಮಾಡಲಾಗುವದು. ಬೇಡಾದವರು ಮೊದಲೇ ತಿಳಿಸಬೇಕು. ಚಂದಾ ಹಣ ಮುಂಗಡ.

ಲೇಖಕರು: "ಕರ್ಮವೀರ" ದಲ್ಲಿ ಪ್ರಕಟನೆಗಾಗಿ ಕಳಿಸುವ ಲೇಖ, ಕತೆ, ಕವಿತೆ ಮೊದಲಾದವುಗಳು ಅಸ್ವೀಕೃತವಾದಲ್ಲಿ ತಿರುಗಿ ಪಡೆಯಬಯಸುತ್ತಿದ್ದರೆ ಲೇಖದ ಸಂಗಡಲೇ ಅವಶ್ಯವಿದ್ದಷ್ಟು ಅಂಚೆ ತಿಕೀಟುಗಳನ್ನು ಕಳಿಸಿರಬೇಕು. ಹಾಗೆ ಮಾಡದೆ ಮುಂದೆ ಆ ಲೇಖಗಳ ಬಗ್ಗೆ ಪತ್ರವ್ಯವಹಾರ ಮಾಡಿದರೆ ಅಥವಾ ತಿರುಗಿ ಕಳಿಸಬೇಕೆಂದರೆ ಅದು ಸಾಧ್ಯವಾಗದು. ಸ್ವೀಕೃತವಾದ ಕತೆಗಳಿಗೂ ಪೂರ್ವಾಕಾರದ, ಅಂದರೆ "ಕರ್ಮವೀರ"ದ ಎರಡು ಕಾಲಂ ಮೀರದ ಲೇಖಗಳಿಗೂ ನಿರ್ದಿಷ್ಟ ಪ್ರತಿಫಲ ಕೊಡಲಾಗುವದು.

— ವ್ಯವಸ್ಥಾಪಕ,
"ಕರ್ಮವೀರ" ಹುಬ್ಬಳ್ಳಿ.

ಸಂಪುಟ ೨೧ | ಸಂಚಿಕೆ ೧೯

ಕರ್ಮವೀರ

ಸೋಮವಾರ | ಶ್ರಾವಣ ಬ. ೧೩

ತಾರೀಕು ೨೨—೮—೧೯೪೯

ಸ್ವಾತಂತ್ರ್ಯದ ಸದುಪಯೋಗವಾಗಲಿ

ಪರಕೀಯರಿಂದ ಸ್ವಾತಂತ್ರ್ಯವನ್ನು ಸಂಪಾದಿಸಿಕೊಂಡ ಕಾಂಗ್ರೆಸ್ ಸರಕಾರವು ತನ್ನ ದೇಶದಲ್ಲಿಯ ಕೆಲವೊಂದು ವರ್ಗದವರನ್ನು ಗುಲಾಮರನ್ನಾಗಿಡುವದು ಶಕ್ಯವಿರಲಿಲ್ಲ. ಅಂತೆಯೇ ಅವರು ಅಪರಾಧಿ ಮನೋವೃತ್ತಿಯವರೆಂದು ಮುಳ್ಳುಬೇಲಿಯೊಳಗೆ ಇಡಲ್ಪಟ್ಟ ಚಿಗರಕಾರರು ಮೊದಲಾದ ಜಾತಿಯ ಜನರನ್ನು ಮೊನ್ನೆ ಸ್ವಾತಂತ್ರ್ಯದಿನದ ಶುಭ ಪ್ರಸಂಗದಲ್ಲಿ ಮುಕ್ತ ಮಾಡಿ ಸ್ವತಂತ್ರ ನಾಗರಿಕರಂತೆ ಎಲ್ಲ ಬಗೆಯ ನಾಗರಿಕ ಹಕ್ಕು ಬಾಧ್ಯತೆಗಳನ್ನನುಭವಿಸುವ ಅವಕಾಶವನ್ನು ಅವರಿಗೊದವಿಸಿಕೊಟ್ಟರು. ಬ್ರಿಟಿಶರು ಹಿಂದುಸ್ತಾನದ ಆಡಳಿತೆಯನ್ನು ವಹಿಸಿಕೊಂಡ ಬಳಿಕ ೧೮೭೧ ರಲ್ಲಿ ಅಪರಾಧಿ ಮನೋವೃತ್ತಿಯ ಈ ಜನರನ್ನು ನಿರ್ಬಂಧದಲ್ಲಿ ಇಡುವ ಕಾಯದೆಯನ್ನು ಪಾಸುಮಾಡಿದರು. ಮುಂಬಯಿ ಸರಕಾರದವರು ೧೯೧೧ ರಲ್ಲಿ ಆ ಕಾಯದೆಯನ್ನು ತಮ್ಮ ಪ್ರಾಂತಕ್ಕೆ ಅನ್ವಯಿಸಿಕೊಂಡು ಅಲ್ಲಲ್ಲಿ ಕ್ರಿಮಿನಲ್ ಟ್ರಾಯಿಬ್ಸ ಸೆಟ್ಲಮೆಂಟುಗಳನ್ನು ಸ್ಥಾಪಿಸಿ ಈ ಜನರನ್ನು ನಿಯಂತ್ರಣದಲ್ಲಿ ಇಟ್ಟರು. ಆದರೆ ಕೆಲವೊಂದು ಜನರು ಅಪರಾಧ ಮನೋವೃತ್ತಿಯವರಿದ್ದ ಮಾತ್ರಕ್ಕೆ ಅವರ ಇಡೀ ಕುಟುಂಬವನ್ನೆ ನಿರ್ಬಂಧದಲ್ಲಿ ಇಟ್ಟು ಹುಟ್ಟುವ ಚಿಕ್ಕಮಕ್ಕಳಲ್ಲಿ ಕೂಡ ಆ ಬಗೆಯ ಅಪರಾಧಮನೋವೃತ್ತಿಯ ಬೀಜಗಳು ಅಂಕುರಿಸುವಂತೆ ಮಾಡುವುದು ಸಮಾಜಹಿತದ ದೃಷ್ಟಿಯಿಂದ ಯಾವರೀತಿಯಿಂದಲೂ ಸಮಂಜಸವಲ್ಲ. ಇದನ್ನು ನೆನೆದೆ ೧೯೩೭ ರಲ್ಲಿ ಸ್ಥಾಪಿತವಾಗಿದ್ದ ಕಾಂಗ್ರೆಸ ಮಂತ್ರಿಮಂಡಲವು ಗೃಹಮಂತ್ರಿ ಶ್ರೀ. ಕನ್ನಯ್ಯಲಾಲ ಮಾನಶಿಯವರ ಅಧ್ಯಕ್ಷತೆಯಲ್ಲಿ ಸಮಿತಿಯೊಂದನ್ನು ನೇಮಿಸಿ ಈ ವಿಷಯದ ವಿಚಾರಮಾಡಿ ಈ ಜನರನ್ನು ಹೀಗೆ ನಿರ್ಬಂಧದಲ್ಲಿ ಇಡುವದು ಸರಿಯಲ್ಲೆಂದು ಅಭಿಪ್ರಾಯಪಟ್ಟಿತ್ತು. ಆದರೆ ಅಷ್ಟರಲ್ಲಿಯೆ ಕಾಂಗ್ರೆಸ ಮಂತ್ರಿಮಂಡಲವು ರಾಜೀನಾಮೆ ಕೊಡಬೇಕಾಗಿ ಬಂದದ್ದರಿಂದ ಈ ಸುಧಾರಣೆಯು ಜಾರಿಯಲ್ಲಿ ಬರಲು ಅನುಕೂಲವಾಗಲಿಲ್ಲ. ಸದ್ಯದ ಮಂತ್ರಿಮಂಡಲವು ಮುಖ್ಯಮಂತ್ರಿ ಶ್ರೀ ಖೇರರ ಅಧ್ಯಕ್ಷತೆಯಲ್ಲಿ ಮತ್ತೊಂದು ಸಮಿತಿಯನ್ನು ನೇಮಿಸಿ ಪರಿಸ್ಥಿತಿಯನ್ನೆಲ್ಲ ಪೂರ್ಣವಾಗಿ ಪರ್ಯಾಲೋಚಿಸಿ ಈ ಜನರಿಗೆ ನಾಗರಿಕ ಸ್ವಾತಂತ್ರ್ಯವನ್ನು ಕೊಡುವದು ಅವಶ್ಯವೆಂದು ಅಭಿಪ್ರಾಯಪಡಲಾಯಿತು. ಈ ನಿರ್ಣಯದಂತೆ ಅಗಸ್ಟ ೧೫ ರ ಶುಭ ದಿನ ಪ್ರಾಂತದಲ್ಲಿಯ ಸೆಟ್ಲಮೆಂಟುಗಳಲ್ಲಿದ್ದವರೆಲ್ಲ ಸ್ವತಂತ್ರರಾದರು.

ಹುಬ್ಬಳ್ಳಿಯಲ್ಲಿ ಈ ನಾಗರಿಕರನ್ನು ಮುಕ್ತಮಾಡುವಾಗ ಉಪಮಂತ್ರಿಗಳಾದ ಶ್ರೀ ಕಲ್ಲನಗೌಡಾ ಪಾಟೀಲರು ಕೆಲ ಉಪದೇಶಪರ ಮಾತುಗಳನ್ನು ಹೇಳಿದರು. 'ನಿಮಗೀಗ ಸ್ವಾತಂತ್ರ್ಯ ಸಿಕ್ಕಿರುವದು ದುಷ್ಪ್ರವೃತ್ತಿಗಳಲ್ಲಿ ತೊಡಗುವದಕ್ಕಲ್ಲ; ನೀವು ಈ ಸ್ವಾತಂತ್ರ್ಯದ ಸದುಪಯೋಗ ಮಾಡಿಕೊಂಡು ಸದ್ಗುಣಿಗಳಾಗಬೇಕಾದುದು ನಿಮ್ಮ ಕರ್ತವ್ಯವಾಗಿದೆ. ನಿಮಗೆ ಬೇಕಾದ ಅನುಕೂಲತೆಗಳನ್ನು ಸಹಾಯವನ್ನು ನಿಮ್ಮದೇ ಆದ ಸರಕಾರದಿಂದ ನೀವು ಪಡೆಯಬಹುದು. ನಿಮ್ಮಲ್ಲಿ ದ್ವೇಷ, ದುಷ್ಪ್ರವೃತ್ತಿ ಮೊದಲಾದವೆಲ್ಲ ಮಾಯವಾಗಬೇಕು. ಸೇಡು ತೀರಿಸಿಕೊಳ್ಳಬೇಕೆನ್ನುವ ಬುದ್ಧಿಯೂ ಉಳಿಯತಕ್ಕದ್ದಲ್ಲ ಎಂದು ಮುಂತಾಗಿ ಹೇಳಿದರು. ಸೆಟ್ಲಮೆಂಟನಲ್ಲಿಯ ಜನರೆಂದರೆ ಉಳಿದ ಜನರು ಬಹಳ ಬೆಚ್ಚಿಬೀಳುವರು. ಎಂಥ ಹೇಸಿ ಕೆಲಸ ಮಾಡಲೂ ಅವರು ಹಿಂಜರಿಯರು ಎಂಬ ಭಾವನೆ ಬಹುಜನ ನಾಗರಿಕರಲ್ಲಿ ಬಹಳ ದಿನಗಳಿಂದ ಇದೆ. ಚಿಕ್ಕ ಪುಟ್ಟ ಕಳವು, ಹೊಲಗಳಲ್ಲಿಯ ಬೆಳೆ ಕೊಯ್ಯುವದು, ರಾತ್ರಿಯ ಕಾಲಕ್ಕೆ ಕಳವು ಮಾಡುವದು ಮೊದಲಾದ ಅಪರಾಧಗಳನ್ನೆಲ್ಲ ಸಾಮಾನ್ಯವಾಗಿ ಈ ಜನರ ಮೇಲೇ ಹೊರಿಸುವುದುಂಟು. ಇದಕ್ಕೆ ಪುರಾವೆಗಳೂ ಇರಲಿಲ್ಲವೆಂದಲ್ಲ; ಅನೇಕ ಸಂದರ್ಭಗಳಲ್ಲಿ ಈ ಹೀನ ಕೃತ್ಯಗಳಿಗಾಗಿ ಈ ಜನರಿಗೆ ಶಿಕ್ಷೆಯೂ ಆದುದುಂಟು. ಆದರೆ ಇದೆಲ್ಲಕ್ಕೂ ಅವರಲ್ಲಿದ್ದ ಆನುವಂಶಿಕ ಅಪರಾಧಪ್ರವೃತ್ತಿಯೆ ಕಾರಣವೆಂದು ಹೇಳಲಿಕ್ಕಾಗದು. ಮಾನವನ ನಾಗರಿಕ ಹಕ್ಕು ಬಾಧ್ಯತೆಗಳನ್ನು ಕಸಿದುಕೊಂಡು ಅವನನ್ನು ನಿರ್ಬಂಧದಲ್ಲಿ ಇಡುವದರಿಂದ ಅವನಲ್ಲಿ ಬಗೆಬಗೆಯ ದುಷ್ಪ್ರವೃತ್ತಿಗಳು ಪ್ರಾದುರ್ಭವಿಸುವದು ಸ್ವಾಭಾವಿಕ. ತಪ್ಪರಿಣಾಮವಾಗಿಯೆ ಅವರಲ್ಲಿ ಹಿಂದೆ ದುಷ್ಟ ಕೃತಿಗಳು ಸಂಭವಿಸಿರಬಹುದು. ಆದರೆ ಸದ್ಯದ ನವಮನ್ವಂತರದಲ್ಲಿ ಆ ಬಗೆಯ ದುಷ್ಪ್ರವೃತ್ತಿ ಅವರೆಲ್ಲರಲ್ಲಿ ಉಳಿದಿರಲಿಕ್ಕಿಲ್ಲ; ಉಳಿಯುವ ಸಂಭವವೂ ಇಲ್ಲೆಂದು ನಮ್ಮ ಅಭಿಪ್ರಾಯ. ಈ ಜನರು ತಮ್ಮ ಹೊಣೆಗಾರಿಕೆಯನ್ನು ಸಂಪೂರ್ಣವಾಗಿ ತಿಳಿದುಕೊಂಡು, ಸರಕಾರದವರು ತಮ್ಮ ಮೇಲಿನ ನಿರ್ಬಂಧಗಳನ್ನು ತೆಗೆದಿದ್ದು ಸ್ವಚ್ಛಂದವಾಗಿ ನಡೆಯಲು ಅವಕಾಶ ಮಾಡಿಕೊಡುವದಕ್ಕಲ್ಲ, ಆದರೆ ಇತರ ಸಾಮಾನ್ಯ ನಾಗರಿಕರಂತೆ, ನಾಗರಿಕ ಜೀವನವನ್ನು ನಡೆಸಿಕೊಂಡು ಹೋಗಲು ಮತ್ತು ಸಮಾಜದ ಒಂದು ಸಸ್ಮಾನ್ಯ ಘಟಕವಾಗಲು ಎಂಬುದನ್ನು ನೆನೆದುಕೊಂಡು ನಡೆದುಕೊಳ್ಳಬೇಕು. ಅಪರಾಧಮನೋವೃತ್ತಿಯ ಈ ಜನರ ಬಿಡುಗಡೆಯಿಂದ ಭಯಭೀತರಾಗಬಹುದಾದ ನಾಗರಿಕರಿಗೆ ಮುಖ್ಯ ಮಂತ್ರಿ ಶ್ರೀ. ಬಾಳಾಸಾಹೇಬರು ಆಶ್ವಾಸನದ ಮಾತುಗಳನ್ನು ಹೇಳಿರುವರು. 'ಇಂಥ, ಜನರಿಂದ ಸಮಾಜ ಸ್ವಾಸ್ಥ್ಯಕ್ಕೆ ಭಂಗ ಬಾರದಂತೆ ನೋಡಿಕೊಳ್ಳಲು ಅಪರಾಧಿಗಳ ನಿಯಂತ್ರಣ ಕಾಯದೆಯನ್ನು ಪಾಸು ಮಾಡಿದೆ. ಅಪರಾಧಮನೋವೃಯವರೆಲ್ಲ ಈ ಕಾಯದೆಯ ಕಕ್ಷೆಯಲ್ಲಿ ಬರುವರು.' ಎಂದು ಮುಂತಾಗಿ ಅವರು ಹೇಳಿರುವರು. ಆದರೆ ಸೆಟ್ಲಮೆಂಟನಲ್ಲಿದ್ದ ಜನರು ಈ ಹೊಸ ಕಾಯದೆಯ ಪ್ರಯೋಗವು ತಮ್ಮ ಮೇಲೆ ಆಗದಂತೆ ದಕ್ಷತೆ ವಹಿಸಿ, ಈಗ ದೊರೆತ ನಾಗರಿಕ ಸ್ವಾತಂತ್ರ್ಯದ ಸದುಪಯೋಗ ಮಾಡಿಕೊಂಡು ಒಳ್ಳೆ ನಾಗರಿಕರಾಗಿ ಬಾಳ್ವೆ ಮಾಡಿ ಕಾಂಗ್ರೆಸ ಸರಕಾರದವರು ತಮ್ಮ ಮೇಲಿನ ನಿರ್ಬಂಧವನ್ನು ತೆಗೆದುದು ಜಾಣತನದ್ದಾಯಿತು ಎಂಬದನ್ನು ಸ್ವಂತ ನಡತೆಯಿಂದ ಸಿದ್ಧಮಾಡಿಕೊಡಬೇಕು. ಅಂದರೇನೇ ಕಾಂಗ್ರೆಸ್ಸಿನವರು ಹೀನ ದೆಸೆಯಲ್ಲಿದ್ದ ಈ ಜನರ ಉದ್ಧಾರಕ್ಕಾಗಿ ದುಡಿದುದು ಸಾರ್ಥಕವಾಗುವುದು.

\+ \+ \+

ಕರಾಚಿಯಲ್ಲಿಯ ಹಿಂದೀ ರಾಯಭಾರಿ ಕಚೇರಿಯ ನವಕರರ ವಸತಿಗಳ ಮೇಲೆ ಹಾರಿಸಿದ್ದ ಹಿಂದೀ ಒಕ್ಕೂಟ ಧ್ವಜವನ್ನು ಕಿತ್ತಬೇಕೆಂದು ಮುಸಲ್ಮಾನ ಜನಸಮ್ಮರ್ದವು ಆಗ್ರಹಹಿಡಿದು ಗೊಂದಲ ಹಾಕಿದ್ದರ ಪರಿಣಾಮವಾಗಿ ಪೋಲೀಸರು ಗೋಳೀಬಾರು ಮಾಡಬೇಕಾಯಿತೆಂದೂ ತತ್ಪರಿಣಾಮವಾಗಿ ಒಬ್ಬನು ಸತ್ತನಲ್ಲದೆ ಹಲವರಿಗೆ ಗಾಯಗಳಾದವೆಂದೂ ಗಾಯಾಳುಗಳಲ್ಲಿ ಹಲವು ಪೋಲೀಸರೂ ಇರುವರೆಂದೂ ಸುದ್ದಿ ಬಂದಿದೆ. ಪಾಕಿಸ್ತಾನದ ಒಳಾಡಳಿತೆಯ ಮಂತ್ರಿಗಳಾದ ಖ್ವಾಜಾ ಶಹಾಬುದ್ದೀನರೂ ಮುಖ್ಯ ಮಂತ್ರಿಗಳಾದ ಲಿಯಾಕತ ಅಲ್ಲೀಖಾನರೂ ಆ ಸ್ಥಳಕ್ಕೆ ಬಂದು ಪರಿಸ್ಥಿತಿಯನ್ನು ನಿಯಂತ್ರಣದಲ್ಲಿ ತರಲು ಪ್ರಯತ್ನಿಸಿದರೆಂದು ತಿಳಿಯುತ್ತದೆ. ಸ್ವಾತಂತ್ರ್ಯ ದಿನದಂಥ ಈ ಶುಭ ಪ್ರಸಂಗದಲ್ಲಿ ಈ ಬಗೆಯ ದುರ್ಘಟನೆ ಸಂಭವಿಸಿದ್ದು ಬಹಳ ವಿಷಾದದ ಸಂಗತಿಯಾಗಿದೆ. ಮುಸಲ್ಮಾನ ಜನಸಮೂಹವು ಇಂತು ತಾಳಗೆಟ್ಟು, ರಾಯಭಾರಿ ಗೃಹದ ನಿಯಮ ನಿಬಂಧನೆಗಳನ್ನು ಮೀರಿ ನಡೆದದ್ದು ಯಾವ ರೀತಿಯಿಂದಲೂ ಸಮಂಜಸವಾಗಲಿಲ್ಲ. ಪಾಕಿಸ್ತಾನ ಸರಕಾರದವರು ಈ ಗೋಳೀಬಾರಿನ ವಿಚಾರಣೆಗಾಗಿ ಕೂಡಲೆ ಒಂದು ವಿಚಾರಣಾಮಂಡಲವನ್ನು ನಿಯಮಿಸಿರುವರು. ಪಾಕಿಸ್ತಾನದ ಪ್ರಮುಖ ಪತ್ರಿಕೆಯಾದ "ಡಾನ್" ಪತ್ರಿಕೆಯು ಮುಸಲ್ಮಾನ ಜನಸಮೂಹದ ಈ ಕೃತಿಯನ್ನು ಖಂಡಿಸಿ ತಮ್ಮ ಮಧ್ಯದಲ್ಲಿ ಇರುವ ಹಿಂದೀಯರನ್ನು ಪಾಕಿಸ್ತಾನಿಗಳಂತೆಯೇ ನಡೆಸಿಕೊಳ್ಳಬೇಕಾದುದು ಕರ್ತವ್ಯವಾಗಿದೆಯೆಂದು ಅಭಿಪ್ರಾಯಪಟ್ಟಿದೆ. ಹಿಂದುಸ್ತಾನ ಮುಸ್ಲಿಂ ಲೀಗಿನ ಅಧ್ಯಕ್ಷರಾದ ಎಂ. ಮಹಮ್ಮದ ಇಸ್ಮಾಯಿಲರು ಪಾಕಿಸ್ತಾನಿಗಳು ಮಾಡಿದ ಈ ಮತ ಪ್ರದರ್ಶನವನ್ನು ಖಂಡಿಸಿ ಇಂತಹ ಘಟನೆ ಪಾಕಿಸ್ತಾನದಲ್ಲಿ ನಡೆಯಬಾರದಿತ್ತೆಂದು ಅಭಿಪ್ರಾಯ ಪಟ್ಟಿದ್ದಾರೆ. ಮುಖ್ಯ ಮಂತ್ರಿ ಲಿಯಾಕತ ಅಲ್ಲೀಖಾನರು ಈ ಮತ ಪ್ರದರ್ಶನವನ್ನು ಖಂಡಿಸಿದರೂ ಪಾಕಿಸ್ತಾನದ ಧ್ವಜದ ರಕ್ಷಣೆಗಾಗಿ ಆತ್ಮಾಹುತಿಯನ್ನು ಕೊಟ್ಟ ಮುಸಲ್ಮಾನನಿಗೆ ಕೃತಜ್ಞತೆಯನ್ನು ಸಲ್ಲಿಸಿದರು. ಲಿಯಾಕತ ಅಲ್ಲೀಖಾನರ ಈ ಅಭಿಪ್ರಾಯದಿಂದ ಮುಸಲ್ಮಾನರು ಅಲ್ಲಿಗೆ ಬಂದು ತಮ್ಮ ಧ್ವಜದ ರಕ್ಷಣೆಮಾಡಲು ಪ್ರಯತ್ನಿಸಿದ್ದು ನ್ಯಾಯ್ಯವೆಂಬ ಸ್ವರ ಹೊರಡುತ್ತದೆ. ವಿಚಾರಣಾ ಮಂಡಲವನ್ನು ನೇಮಿಸಿರುವಾಗ ಮುಖ್ಯಮಂತ್ರಿಗಳಂಥ ಹೊಣೆಗಾರ ವ್ಯಕ್ತಿಗಳು ಇಂತು ಅಭಿಪ್ರಾಯಪಡುವದು ಸರಿಯೆನಿಸದು. ಏನೇ ಆದರೂ ಇಂಥ ಘಟನೆಗಳಿಗೆ ಅವಕಾಶ ದೊರೆಯದಂತೆ ಎರಡೂ ಸರಕಾರಗಳು ನೋಡಿಕೊಳ್ಳಬೇಕಲ್ಲದೆ ಇವುಗಳಿಂದ ಪರಸ್ಪರರಲ್ಲಿಯ ಸ್ನೇಹ ಸೌಹಾರ್ದಕ್ಕೆ ಭಂಗಬಾರದಂತೆ ಎಚ್ಚರಪಡತಕ್ಕದ್ದು ಕರ್ತವ್ಯವಾಗಿದೆ.

× × ×

ಮುಂಬಯಿ ಸರಕಾರದ ಮುಖ್ಯ ಮಂತ್ರಿಗಳಾದ ಶ್ರೀ ಖೇರ ಬಾಳಾಸಾಹೇಬರು ಹೊಸ ಪದವೀಧರರನ್ನು ಉದ್ದೇಶಿಸಿ ಭಾಷಣ ಮಾಡುತ್ತ ಕೆಲ ಮಹತ್ವದ ಮಾತುಗಳನ್ನು ಹೇಳಿರುವರು. ಉಚ್ಚ ಶಿಕ್ಷಣವನ್ನು ಪಡೆದು ಸುಸಂಸ್ಕೃತರಾದ ಜನರ ಮೇಲೆ ಸಮಾಜ ಸುಧಾರಣೆಯ ಹೊಣೆ ಬಹಳಿರುವದೆಂದು ಪ್ರತ್ಯೇಕವಾಗಿ ಹೇಳಬೇಕಿಲ್ಲ. ನೂರಾರು ವರುಷಗಳ ದಾಸ್ಯದಿಂದ ಸ್ವತಂತ್ರವಾದ ಹಿಂದುಸ್ತಾನದ ಭವಿತವ್ಯವನ್ನು ರೂಪಿಸುವಲ್ಲಿ ಸಾಮಾನ್ಯವಾಗಿ ವಿದ್ಯಾರ್ಥಿಗಳು ವಿಶೇಷತಃ ಪದವೀಧರರು ವಹಿಸಬೇಕಾದ ಪಾತ್ರವು ಬಹಳ ಮಹತ್ವದ್ದಾಗಿದೆ. ಶ್ರೀ ಖೇರರು ಇದೇ ಮಾತನ್ನು ಹೇಳಿರುವರು. ಸ್ವಾತಂತ್ರ್ಯವೆಂದರೆ ಸ್ವೇಚ್ಛಾಚಾರವಲ್ಲ! ಸ್ವಾತಂತ್ರ್ಯವನ್ನನುಭೋಗಿಸುವಾಗಲೆ ಕರ್ತವ್ಯವನ್ನೂ ಮಾಡಬೇಕಾಗುವದು. ಇದನ್ನು ಅನೇಕರು ಮರೆತಿದ್ದರಿಂದಲೆ ಇಂದು ನಮ್ಮ ನಾಡಿನಲ್ಲಿ ಅಲ್ಲಲ್ಲಿ ಅಶಾಂತಿ ಕಂಡು ಬರುತಿದೆ. ಇದನ್ನರಿತೆ ಶ್ರೀ. ಖೇರರು ಪದವೀಧರರ ನೆನಪು ಮಾಡಿಕೊಂಡು ಎಲ್ಲ ಜನರಿಗೂ ಇದರ ನೆನಪು ಮಾಡಿಕೊಟ್ಟಿದ್ದಾರೆ. ಪದವೀಧರರು ಮತ್ತು ಇತರರು ತಮ್ಮ ಜ್ಞಾನಭಾಂಡಾರವನ್ನು ಹೆಚ್ಚಿಸಿಕೊಂಡು ಅನುಭವ ಪಡೆದು ಸಮಾಜ ಸೇವೆಗಾಗಿ ಬದ್ಧಕಂಕಣರಾಗುವದು ಅತ್ಯವಶ್ಯವಾಗಿದೆ. ನಾವು ಸುಶಿಕ್ಷಿತರು ಸುಸ್ಥಿತಿಯ ಪರಿಸ್ಥಿತಿಯು ಗೊಡವೆ ನಮಗೇಕೆ, ನಮಗೆ ಬರತಕ್ಕ ಸಂಬಳ ಮುಂತಾದದ್ದು ಬಂದರೆ ಸಾಕು ಎಂದು ಪದವೀಧರರು ತಿಳಿದ. ಕೊಳ್ಳತಕ್ಕ ಕಾಲವೊಂದಿದ್ದಿತು. ಆದರೀಗ ಪರಿಸ್ಥಿತಿ ಬದಲಾಗಿದೆ, ಪದವೀಧರರು ಸಮಾಜಸೇವಕರಾಗಬೇಕಾದ ಅವಶ್ಯಕತೆಯೂ ಎನಿಸಹತ್ತಿದೆ. ಈ ಸಮಯದಲ್ಲಿ ಸಮಾಜವಾದರೂ ಇಂಥ ಪದವೀಧರರಿಂದ ಯೋಗ್ಯ ಸೇವೆಯನ್ನು ತೆಗೆದುಕೊಂಡು ಸಮಾಜದಲ್ಲಿಯ ಪ್ರತಿಯೊಂದು ಘಟಕವೂ ಉಚ್ಚಮಟ್ಟದ ಜೀವನವನ್ನು ಹಾಗು ತನ್ನ ಜೀವನ ಸರ್ವಾಂಗೀಣ ಉದ್ಧಾರ ಮಾಡಿಕೊಳ್ಳಲು ನೆರವಾಗುವಂತೆ ದಕ್ಷತೆ ವಹಿಸಬೇಕಾದುದು ಅವಶ್ಯವಾಗಿದೆ.

ಹೊಸ ಪುಸ್ತಕಗಳು

ಕರ್ನಾಟಕದ ಪೂರ್ವೇತಿಹಾಸದ ಮೇಲೆ ಬೆಳಕು

I ಕರ್ನಾಟಕದ ಅರಸು ಮನೆತನಗಳು
ಗ್ರಂಥಕರ್ತರು-ಶ್ರೀ ನೆಲಮಂಗಲ ಲಕ್ಷ್ಮೀನಾರಾಯಣರಾಯರು ಎಮ್. ಎ. ಮತ್ತು ಶ್ರೀ ಆರ್. ಎಸ್. ಪಂಚಮುಖಿ ಎಮ್. ಎ. (ಕರ್ನಾಟಕ ಇತಿಹಾಸ ಸಂಶೋಧಕ ಮಂಡಲ, ಧಾರವಾಡ: ೧೯೪೬ ಬೆಲೆ ರೂ. ೫)

II The Karnataka Historical Review, Vol. VII, 1948. Containing 2 lectures delivered by Sri K. V. Subrahmanya Aiyar B. A. (Karnataka Historical Research Society, Dharwar.)

೧

ಕರ್ನಾಟಕದ ಅರಸು ಮನೆತನಗಳು

'ಕರ್ಮವೀರ'ದ ಸಂಪಾದಕರು ವಿಮರ್ಶೆಗಾಗಿ ಕಳುಹಿಸಿದ ಈ ಗ್ರಂಥವು ನನ್ನ ಬಳಿಗೆ ಬಂದಾಗ, ಆ ಕೆಲಸವನ್ನು ಒಪ್ಪಿಕೊಳ್ಳಲಿಕ್ಕೆ ಮನಸ್ಸು ಹಿಂಜರಿಯಿತು. ಏಕೆಂದರೆ ಇದರಲ್ಲಿಯ ಬನವಾಸಿಯ ಕದಂಬರ (Journal of Indian History XII, ಪುಟ ೩೫೪–೩೭೩; XIII, ಪುಟ ೧೫-೩೪, ೧೪೩-೧೬೩; "ಕಂಠೀರವ"ದ ದಸರಾ ಸಂಚಿಕೆ ೧೯೩೩, ಪುಟ ೮೮-೧೦೬) ಹಾಗೂ ತಲಕಾಡಿನ ಗಂಗರ (Karnataka Historical Review: II Nos. 1 & 2. 1932 93; "ಕಂಠೀರವ"ದ ದಸರಾ ಸಂಚಿಕೆ ೧೯೩೭, ಪು. ೮೬-೯೭) ಪೀಳಿಗೆಗಳನ್ನೂ ಕಾಲಗಳನ್ನೂ ಕುರಿತು ನಾನು ೧೫-೧೬ ವರ್ಷಗಳ ಹಿಂದೆ ಇಲ್ಲಿ ನಾಗದಂತೆಗಳಲ್ಲಿ ಪ್ರಕಟಿಸಿರುವ ಆಯಾ ಇಂಗ್ಲೀಷು ಹಾಗೂ ಕನ್ನಡ ಪತ್ರಿಕೆಗಳಲ್ಲಿ ಬಲ್ಲಂತೆ ನಿರ್ಧರಿಸಿರುತ್ತೇನೆ. ಈ ಗ್ರಂಥವನ್ನು ತೆರೆದು ನೋಡುತ್ತಲೆ ಇದರಲ್ಲಿ ಮಾಡಿರುವ ನಿರ್ಧಾರಗಳಿಗೂ ನನ್ನವುಗಳಿಗೂ ಬೇಕಾದಷ್ಟು ವ್ಯತಿರೇಕವಿವೆ, ಹಾಗಾದರೆ ಇವನ್ನು ವಿಮರ್ಶಿಸುವಲ್ಲಿ ಇವರ ರಚಕರಾದ ಈ ವಿದ್ವಾಂಸರಿಬ್ಬರ ನಿರ್ಣಯಗಳನ್ನು ಅಲ್ಲಗಳೆಯಲೆ? ಅಲ್ಲ, ನನ್ನ ಶಾಸ್ತ್ರಜ್ಞತೆಯಿಂದ ನಾನು ಕಂಡುಕೊಂಡ ನಿಶ್ಚಯಗಳನ್ನು ಪೇರಿಸಲೆ? ಎಂದು ಮನಸ್ಸು ತೀರ ದ್ವೈಧೀಭವಿಸಿತು. ತಿರುಗೊಮ್ಮೆ ನೋಡೋಣ ಎಂದು ಇವರ ನಿರ್ಣಯಗಳ ಬೆಳಕಿನಲ್ಲಿ ನನ್ನವುಗಳನ್ನು ಮರಳಿ ಪರೀಕ್ಷಿಸಿದೆ. ಯಾವ ಮಾರ್ಪಾಟಕ್ಕೂ ನನಗೆ ಕಾರಣ ತೋರಲಿಲ್ಲ. ಆದಾಗಿ ಗತ್ಯಂತರವಿಲ್ಲದೆ ಈ ಗ್ರಂಥವನ್ನು ನನ್ನ ಬೆಳಕಿನಲ್ಲಿ ವಿಮರ್ಶಿಸುತ್ತೇನೆ. ಆ ಬಗ್ಗೆ ಗ್ರಂಥಕರ್ತರು ಎರಡೆಣಿಸದಿರಬೇಕಾಗಿ ಬಿನ್ನವಿಸುತ್ತೇನೆ.

ಕದಂಬರ ಮೂಲ ಪುರುಷನಾದ ಮಯೂರಶರ್ಮನ ಕಾಲವನ್ನು ನಿರ್ಣಯಿಸುವಲ್ಲಿ ಇವರ ಮುಖ್ಯ ಆಧಾರವೆಂದರೆ (ಪು-೯) (೧) ಪೌಷ ಸಂವತ್ಸರ, ವೈಶಾಖ ಸಂವತ್ಸರ ಮೊದಲಾಗಿ ಚಾಂದ್ರಮಾಸಗಳ ಹೆಸರಿನಿಂದ ಕರೆಯಲ್ಪಡುವ ಹಾಗೂ (ಈಗಿನಂತೆ ಆಯಾ ತಿಂಗಳ ಹೆಸರಿನಿಂದ ಪಕ್ಷಗಳನ್ನು ಹೇಳದೆ) ಇಂಥಾ ಋತುವಿನ ಇಂತಿಷ್ಟನೆಯ ಪಕ್ಷವೆಂದು ಋತು ಪಕ್ಷವನ್ನು ಹೇಳುತ್ತಿರುವ ಪದ್ಧತಿ ಕ್ರಿ. ಶ. ೫ ನೆಯ ಶತಕದ ಮೊದಲಿನಲ್ಲಿತ್ತು, ಮತ್ತು (೨) ಪ್ರಾಕೃತ ಭಾಷೆಯಲ್ಲಿ ಶಾಸನಗಳನ್ನು ಬರೆಯಿಸುವ ಪದ್ಧತಿ ಕ್ರಿ. ಶ. ೪ ನೆಯ ಶತಮಾನದ ವರೆಗೆ ಇತ್ತು. ಈ ಕಾರಣಗಳಿಂದ ಮಯೂರಶರ್ಮನ ಆಳಿಕೆಯನ್ನು ಇವರು ಕ್ರಿ. ಶ. ೩೫೦-೩೭೫ ಕ್ಕೆ ಹೊಂದಿಸಿರುತ್ತಾರೆ. ನನ್ನ ಕಾರಣಗಳಾದರೂ ಬೇರೆಯೆ (೧) ದಕ್ಷಿಣ ಭಾರತದಲ್ಲಿ ಪ್ರಾಕೃತ ಭಾಷೆಯಲ್ಲಿ ಶಾಸನಗಳನ್ನು ಬರೆಯಿಸುವ ಪದ್ಧತಿ ಹೆಚ್ಚು ಕಡಿಮೆ ಕ್ರಿ. ಶ. ೩ ನೆಯ ಶತಮಾನ ಮುಗಿಯುವುದರೊಳಗೆ ಕೊನೆಗಂಡಿರಬೇಕು, ಮತ್ತು (೨) ಮಯೂರಶರ್ಮನ ಮಗನೂ ಉತ್ತರಾಧಿಕಾರಿಯೂ ಆಗಿದ್ದ ಅರಸನ ಹೆಸರು ಸರ್ವಥಾ ಕಂಗವರ್ಮನಲ್ಲ (ಅದು ಓದಿದವರದೂ ಕೆತ್ತಿದವರದೂ ಎರಡು ತಪ್ಪು), ಅದು ನೇರಾಗಿ ಮಳವಳ್ಳಿಯ ೨ ನೆಯ ಪ್ರಾಕೃತ ಶಿಲಾಶಾಸನದಲ್ಲಿ (Epigraphia Carnatica VII, ಶಿಕಾರಿಪುರ ೨೬೪) ಇರುವಂತೆ (ವೈಜಯಂತಿ ಎಂಬ ಬನವಾಸಿಯ ಮಹಾರಾಜನಾದ) ಶಿವಖಡಸಮ್ಮ=ಶಿವಸ್ಕಂದವರ್ಮ ಎಂದು ಹಾಗೆ. ಚಾರಿಕ ಚುಟು ಅಥವಾ ಬನವಾಸಿಯ ಪೂರ್ವಕದಂಬರ ನಾಣ್ಯಗಳ ಸ್ಥಿಯ ನಾಲ್ಕರಲ್ಲಿ ಸ್ಕಂದ ಎಂಬ ಹೆಸರುಳ್ಳ ಕದಂಬ ಅರಸು ಅವನೇ. ಆ ಹೆಸರಿನ ಬೇರೊಬ್ಬನು ಕದಂಬರಲ್ಲಿ ಇರಲಿಲ್ಲ, ಶಿವಸ್ಕಂದ ಎಂದರೂ ಅದನ್ನೇ ಸಂಕ್ಷೇಪಿಸಿ ಸ್ಕಂದ ಎಂದರೂ ಒಂದೇ. ಮಳವಳ್ಳಿಯ ೧ ನೆಯ ಪ್ರಾಕೃತ ಶಿಲಾಲೇಖವು (ಶಿಕಾರಿಪುರ ೨೬೩) ಬನವಾಸಿಯ ಅರಸನಾದ ವಿಷ್ಣುಸ್ಕಂದ ಚುಟುಕುಲಾನಂದ ಸಾತಕರ್ಣಿಯ ಆಳಿಕೆಯ (ರೈಸರು ಓದಿದಂತೆ) "ಪಡಮ ಸಮ್ವಚ್ಛರಂ"=೧ ನೆಯ ವರ್ಷದಲ್ಲಿ, ಅಥವಾ (ಲೂಡರ್ಸರು ಓದಿರುವಂತೆ) "ಸಮ್ವಚ್ಛರಂ ಬಿತೀಯಂ"=೨ ನೆಯ ವರ್ಷದಲ್ಲಿ ಹುಟ್ಟಿತು. ಅದೇ ವಿಷ್ಣುಸ್ಕಂದ ಚುಟುಕುಲಾನಂದ ಸಾತಕರ್ಣಿಯ ಬನವಾಸಿಯ ಪ್ರಾಕೃತ ಶಿಲಾಲೇಖ (Indian Antiquary XIV, ಪು ೩೧-೩೪) "ವಸ ಸತಾಯ ಸವಛರಂ ೧೨" ಅಂದರೆ ಯಾವೊಂದು ಶಕಕಾಲದ ೧೦೦ ನೆಯ ವರ್ಷದಲ್ಲಿ ಹಾಗೂ ಅತನ ಆಳಿಕೆಯ ೧೨ ನೆಯ ವರ್ಷದಲ್ಲಿ ಹುಟ್ಟಿತು. ಆ ಶಕವಾದರೂ ಕ್ರಿ. ಶ. ೭೮ ರಲ್ಲಿ ಹುಟ್ಟಿದ ಶಾಲಿವಾಹನ ಶಕ. ಶಾಸಿಪಾಠ ಹಾಗು ತಿಳಿಯುತಿರುತ್ತೇನೆ. (New Indian Antiquary, VIII, April June 1946, ಪು. ೭೫; "ಕಂಠೀರವ"ದ ದಸರಾ ಸಂಚಿಕೆ, ೧೯೩೩, ಪು. ೧೩೬-೭). ಅಂದರೆ ಅತನ ಆಳಿಕೆಯ ಬನವಾಸಿಯ ಶಿಲಾಶಾಸನ ಕ್ರಿ. ಶ. ೧೭೭—೭೮ ರಲ್ಲಿಯೂ ಅತನ ಆಳಿಕೆಯ ೧ ನೆಯ ಅಥವಾ ೨ ನೆಯ ವರ್ಷದಲ್ಲಿ ಹುಟ್ಟಿದ ಮಳವಳ್ಳಿಯ ೧ ನೆಯ ಪ್ರಾಕೃತ ಶಿಲಾಲೇಖ ಕ್ರಿ. ಶ. ೧೬೬-೬೭ ರಲ್ಲಿಯೂ ಹುಟ್ಟಿದಂತೆ. ಕನ್ಹೇರಿಯ ಗುಹೆಯಲ್ಲಿ ಆ ವಿಷ್ಣುಸ್ಕಂದನದೇ ಆಳಿಕೆಯ "ಸವ ೯" ಅಂದರೆ ೯ ನೆಯ ವರ್ಷದ=ಕ್ರಿ. ಶ. ೧೭೪–೭೫ ರ ಶಾಸನವಿದೆ. ಬನವಾಸಿಯ ಶಾಸನದಿಂದ ಈಚೆ ಅತನ ಶಾಸನವಿಲ್ಲದ ಕಾರಣವೂ ಮಳವಳ್ಳಿಯ ಅತನ ೧ ನೆಯ ಪ್ರಾಕೃತ ಶಿಲಾಲೇಖದ ಜತೆಯಲ್ಲಿಯೇ ಕದಂಬ ಮಯೂರಶರ್ಮನ ಮಗನಾದ ಶಿವಸ್ಕಂದವರ್ಮನು ತನ್ನ ಆಳಿಕೆಯ (ಲೂಡರ್ಸರು ಓದಿರುವಂತೆ) "ಸವ್ವಚ್ಛರಂ ಪಡಮಂ"=೧ ನೆಯ ವರ್ಷದಲ್ಲಿ ತನ್ನ (ಅಂದರೆ ಅಲ್ಲಿಯ ೨ ನೆಯ) ಪ್ರಾಕೃತ ಶಾಸನವನ್ನು ಕೊರೆಯಿಸಿರುವ ಕಾರಣವೂ, ಹತ್ತಿಕ್ಕಸತ್ತ ಆ ವಿಷ್ಣುಸ್ಕಂದ ಚುಟುಕುಲಾನಂದ ಸಾತಕರ್ಣಿಯನ್ನು ಬನವಾಸಿಯಿಂದ ಹೊರಗಟ್ಟಿ ಮಯೂರಶರ್ಮನು ತನ್ನ ಗದ್ದುಗೆಯನ್ನು ಬನವಾಸಿಯಲ್ಲಿ ಕ್ರಿ. ಶ. ಸು. ೧೮೦ ರಲ್ಲಿ ಸ್ಥಾಪಿಸಿರಬೇಕು. ಹೀಗೆ ನೊತ್ತ ಮೊದಲಲ್ಲಿ ಮಯೂರಶರ್ಮನು ರಾಜನಾದ ನನ್ನ ಕ್ರಿ. ಶ. ಸು. ೧೮೦ ಕ್ಕೂ ಈ ಗ್ರಂಥಕರ್ತರ ಕ್ರಿ. ಶ. ೩೩೨ ಕ್ಕೂ ಇರುವ ೧೦೦ ಚಿಲ್ಲರೆ ವರ್ಷಗಳ ಅಂತರ II ಕೃಷ್ಣವರ್ಮನ ವರೆಗೂ ಏಕರೀತಿಯಾಗಿ ತಾಳಬಂದದೆ. II ಕೃಷ್ಣವರ್ಮನಿಗೆ ನನ್ನ ಕಾಲ ಕ್ರಿ. ಶ. ೪೨೨ ರಿಂದ ೪೫೦ ಅಥವಾ ೪೫೫ ರ ವರೆಗೆ, ಅವರದು ಕ್ರಿ. ಶ. ೫೪೫ ರಿಂದ ೫೭೦ ರ ವರೆಗೆ. ಹೀಗೆ ಕದಂಬರ ಕಾಲಗಳ ಮಟ್ಟಿಗೇ ಅಲ್ಲ, ಅವರ ಅನುಪೂರ್ವಿಯ ಮಟ್ಟಿಗೂ ನಮ್ಮಲ್ಲಿ ಸಾಕಷ್ಟು ಮತಭೇದವಿದೆ. ಅದನ್ನು ಓದಿಯೆ ತಿಳಕೊಳ್ಳಬೇಕಲ್ಲದೆ ಇಲ್ಲಿ ಹೇಳತೀರದು.

(೧) ಕದಂಬ ಹರಿವರ್ಮನ ಸಂಗೊಳ್ಳಿಯ ತಾಮ್ರಶಾಸನದ ತೇದಿ (ಪು. ೯) ಕ್ರಿ. ಶ. ೪೦೪ ನೆಯ ಸಪ್ಟಂಬರ ೨೦ ನೆಯ ತಾರೀಕಿಗೆ ಸರಿಗೂಡುತ್ತದೆ.

(೨) II ಕೃಷ್ಣವರ್ಮನ ಬೆಣ್ಣೂರು ತಾಮ್ರಶಾಸನದಲ್ಲಿ ಅತನನ್ನು ಕುಂತ 'ಪಂಚಮೋ ಲೋಕಪಾಲಃ' ಎಂಬ ಉಪಾಧಿ ಪಲ್ಲವರ ಉರುವಪಳ್ಳಿಯ ತಾಮ್ರಶಾಸನದಲ್ಲಿಯೂ (Indian Antiquary V, ಪು. ೫೨) ದೊರೆಯುತ್ತದೆ. ಅದಕ್ಕೆ ಅಲ್ಲಿಯೂ ಇಲ್ಲಿಯೂ ಇಂದ್ರ, ಯಮ, ವರುಣ, ಕುಬೇರ ಎಂಬ (ಮುಖ್ಯರಾದ) ೪ ಲೋಕಪಾಲರಿಗೆ (Lueders' List, ನಂ. ೧೧೧೨) ಸರಿಯಾದ ಐದನೆ ಎಂದು ಶಾಬ್ದಿಕ ಅರ್ಥವಲ್ಲದೆ, ಇವರು ಮಾಡಿಕೊಂಡಿರುವಂತೆ (ಪು. ೧೦) II ಕೃಷ್ಣವರ್ಮನು ಕದಂಬರ ೫ ನೆಯ ಅರಸನೆಂದು ಸರ್ವಥಾ ಅಲ್ಲ.

(೩) II ಕೃಷ್ಣವರ್ಮನ ಬನ್ನಹಳ್ಳಿಯ ತಾಮ್ರಪಟ್ಟದಲ್ಲಿ (Epigraphia Carnatica, V. ಬೇಲೂರು ೨೪೫) ಅತನ ಮುತ್ತಜ್ಜನಾದ I ಕೃಷ್ಣವರ್ಮನನ್ನೂ ಅಜ್ಜನಾದ ವಿಷ್ಣುವರ್ಮನನ್ನೂ ಧರ್ಮಮಹಾರಾಜರೆಂದಿದೆ, ಆದರೆ ಆ ವಿಷ್ಣುವರ್ಮನ ಮಗನೂ II ಕೃಷ್ಣವರ್ಮನ ತಂದೆಯೂ ಆದ ಸಿಂಹವರ್ಮನನ್ನು ಮಾತ್ರ ಧರ್ಮಮಹಾರಾಜನೆನ್ನದೆ ಬರೀ ಮಹಾರಾಜ ಎಂದಿರುವುದರಿಂದ ಸಿಂಹವರ್ಮನು ಇವರು ಊಹಿಸಿರುವಂತೆ (ಪು ೩೪) ಬನವಾಸಿಯ ಸಮ್ರಾಜನಾಗಿ ಆಳಲಿಲ್ಲ. ಅದಲ್ಲೇ ಸ್ವಯಂ II ಕೃಷ್ಣವರ್ಮನೂ ತನ್ನನ್ನು ಬರೀ ಮಹಾರಾಜನೆಂದುಕೊಂಡಿರುವುದರಿಂದ, ಅತನೂ ಆ ತಾಮ್ರಪಟ್ಟದ ಕಾಲದಲ್ಲಿ ಪ್ರಾಂತಿಕ ಅರಸನಾಗಿದ್ದನಲ್ಲದೆ ಸಮ್ರಾಜನಾಗಿರಲಾರನು.

(೪) ಕ್ರಿ. ಶ. ೫ ನೆಯ ಶತಮಾನದ ಶಿಲಾಲಿಪಿ ಎಂದಿರುವ (ಪು ೩೨) ಅಣಜಿಯ ಶಿಲಾಶಾಸನದಲ್ಲಿ (Epigraphia Carnatica. XI, ದಾವಣಗೆರೆ ೧೬೧) "ಶಿವನಂದವರ್ಮ್ಮ ಸ್ವದೇಶಕ್ಷಯೇ ನಣಕ್ಕಾಸ ಪಲ್ಲವರಾಜ ಕೃಷ್ಣವರ್ಮ್ಮರಾಜಯೋಃ ಸಮರೇ ... ಪ್ರವೃತ್ತೇ ಕೃಷ್ಣವರ್ಮ್ಮರಾಜಸ್ಯ ಭಗ್ನೇ" ಎಂದೇ ಯಾರೊ ಒಬ್ಬ ಕಲ್ಪಿಸಿ ಮಾಡಿದ ಅಪಪಾಠವನ್ನೂ, ಅಥವಾ ದೂರಾದಿಯಿಂದ ಆದ ಕೆಲ ತಪ್ಪುಗಳನ್ನೂ ಈ ವರೆಗೂ ವಿವೇಚಿಸದೆ ಇತಿಹಾಸದಲ್ಲಿ ಸೇರಿ ಹೋದ "ನಣಕ್ಕಾಸ" ಎಂಬ ಒಬ್ಬ ಅವಿದ್ಯಮಾನನಾದ ಪಲ್ಲವರಾಜನನ್ನು ಇಲ್ಲಿಯೂ (ಪು. ೩೨) ಒಪ್ಪಿದೆ. ಅದರ ಸರಿಯಾದ ಪಾಠವಾದರೊ ಸರ್ವಥಾ ಹಾಗಿರದು, ಹೀಗಿರಬೇಕು "ಶಿವನಂದವರ್ಮ್ಮ ಸ್ವದೇಶಕ್ಷಯೇನ ನಿಷ್ಪ್ರಾಸಿತಃ ಪಲ್ಲವರಾಜ ಕೃಷ್ಣವರ್ಮ್ಮರಾಜಯೋಃ . . . ." ಅತಏವ ಕೇಕಯ ದೇಶದ ಅರಸನಾದ ಶಿವನಂದವರ್ಮನು ಆ ಪಲ್ಲವರಾಜನಿಗೂ ಕೃಷ್ಣವರ್ಮನಿಗೂ ಸರಿಯಾಗಿ ತೀರ ಹತ್ತಿರದ ನಂಟನಾಗಿದ್ದು ಅವರಲ್ಲಿ ಆಗತಕ್ಕ ಯುದ್ಧವನ್ನು ತಪ್ಪಿಸಲಿಕ್ಕೆ ಹೋಗಿ, ತನ್ನ ರಾಜ್ಯವನ್ನು ಹೋಗಗೊಡಿಸಿಕೊಂಡು ಅಲ್ಲಿಂದ ನಿಷ್ಪ್ರಾಸಿತನಾಗಿ, ಅಂದರೆ ಹೊರಗೆ ತಳ್ಳಲ್ಪಟ್ಟು ಅಥವಾ ತಾನಾಗಿಯೇ ಹೊರಗೆ ಹೋಗಿ, ಕೊನೆಗೆ (ಆ ಶಾಸನದಲ್ಲಿ ಮುಂದೆ ಹೇಳಿರುವಂತೆ) ಪ್ರಾಯೋಪವೇಶ ಮಾಡಿರಬೇಕು. ಆ ನಂಟು ಹೇಗೆ? ಕದಂಬ II ಕೃಷ್ಣವರ್ಮನ ಬನ್ನಹಳ್ಳಿಯ ತಾಮ್ರಪಟ್ಟದಲ್ಲಿ ಅತನ ಮುತ್ತಜ್ಜನಾದ I ಕೃಷ್ಣವರ್ಮನು ಕೇಕಯ ರಾಜನ ಮಗಳನ್ನು ಮದುವೆಯಾಗಿದ್ದನೆಂದೂ, ಆ I ಕೃಷ್ಣವರ್ಮನ ಮಗನಾದ ವಿಷ್ಣುವರ್ಮನ ಬೀರೂರಿನ ತಾಮ್ರಶಾಸನದಲ್ಲಿ (ಅದು ಕೃತ್ರಿಮವೇ ಆದರೂ, ಅದರಲ್ಲಿ ಹೇಳಿದ ನಂಟತನ ಕೃತ್ರಿಮವಾಗಿರದಷ್ಟೇ—ಈ ಗ್ರಂಥದ ೮೧ ನೆಯ ಪುಟವನ್ನು ನೋಡಿ) ಒಬ್ಬ ಪಲ್ಲವ ಅರಸನು ತನ್ನ ದೊಡ್ಡಪ್ಪನೆಂದೂ ಹೇಳಿರುವುದರಿಂದ, ಆ ಪಲ್ಲವರಾಜನೂ ಕದಂಬ I ಕೃಷ್ಣವರ್ಮನೂ, ಖಾಸಾ ಅಕ್ಕತಂಗಿಯರನ್ನು ಮದುವೆಯಾಗಿ ಷಡ್ಡಕರಾಗಿದ್ದರು. ಆ ಕಾರಣ ಅವರಿಬ್ಬರೂ ಕೇಕಯ ಅರಸರಾದ ಶಿವನಂದವರ್ಮನ ಅಯಾ ಮಗಳಂದಿರ ಗಂಡಂದಿರಾಗಿ ಅವನ ಅಳಿಯಂದಿರಾಗಿದ್ದರು. ಹೀಗಾಗಿ (ಸ್ವದೇಶಕ್ಷಯೇ)ನ ನಿಷ್ಪ್ರಾಸಿ(ತಃ) ಎಂದು ಇರಬೇಕಾದ ೨ ಶಬ್ದಗಳು ಅಪ್ಪಾಡುದ್ದಿಯಾಗಿ ಓದಲ್ಪಟ್ಟು ಅದೊಬ್ಬ ಅಸಂಭವನಾದ ಪಲ್ಲವ ಅರಸನ ಹೆಸರಾಗಿಹೋಗಿದೆ!

೨ ನೆಯ ಭಾಗದ ಬಾದಾಮಿಯ ಚಲುಕ್ಯರ ವಂಶಾವಳಿಯಲ್ಲಿ ಇವರು ಹೇಳಿರುವಂತೆ (ಪು. ೪೮) ಬಿಕ್ಕಟ್ಟಿನ ಪ್ರಶ್ನೆಗಳಿಲ್ಲ. ಅವರ ಇತಿಹಾಸಕ್ಕೆ ಅನೇಕ ವಿದ್ವಾಂಸರು ಕೈಹಚ್ಚಿರುತ್ತಾರೆ. ಅವರ ಮತಗಳನ್ನು ಸಂಗ್ರಹಿಸಿ, ಅವನ್ನು ಮಥಿಸಿ, ಅವುಗಳಲ್ಲಿ ಪರಸ್ಪರ ವಿರೋಧವಿರುವಲ್ಲಿ ಸತ್ಯ ಹೇಗಿರಬೇಕೆಂದು ಕಂಡುಕೊಳ್ಳಲಿಕ್ಕೆ ಈ ಗ್ರಂಥಕರ್ತರು ತುಂಬ ಪ್ರಯತ್ನಿಸಿಯೂ ಇರುತ್ತಾರೆ, ಹಾಗೂ ಆ ಪ್ರಯತ್ನದಲ್ಲಿ ಸಫಲಿಸಿಯೂ ಇರುತ್ತಾರೆ. ಆದರೆ ಇದೊಂದೆರಡು ಮಾತುಗಳ ಮಟ್ಟಿಗೆ ಮಾತ್ರ ನನ್ನ ಅಭಿಪ್ರಾಯ ಭಿನ್ನವಾಗಿದೆ:

ಇವರು ಊಹಿಸಿರುವಂತೆ (ಪು ೧೦೩) ಕುಂತಲದೇಶವೆಂದರೆ ಬನವಾಸಿಯ ದೇಶ ಮಾತ್ರವಲ್ಲ. ಏಕೆಂದರೆ ಕ್ರಿ. ಪೂ. ೧ ನೆಯ ಶತಮಾನದೆಂಬ ಶಾತವಾಹನ ವಂಶೀಯ ಹಾಲ ಮಹಾರಾಜನ ಗಾಥಾಸಪ್ತಶತಿಯಲ್ಲಿ (ನಿರ್ಣಯ ಸಾಗರ ಛಾಪಖಾನೆ, ೧೯೩೩; "ಶಾತವಾಹನಃ" ಪು. ೧) ಅತನನ್ನು "ಕುಂತಲ ಜಣವಅ ಇದೇಣ ಹಾಲೇಣ" (=ಕುಂತಲ ಜನಪದ ಇನೇನ ಹಾಲೇನ) ಎಂದದೆ. ಅದರ ಕೊನೆಯ ಸಮಾಪನ ಗದ್ಯದಲ್ಲಿ ಅತನನ್ನು "ಶ್ರೀಮತ್ಕುಂತಲಜನಪದೇಶ್ವರ ಪ್ರತಿಷ್ಠಾನಪತ್ತನಾಧೀಶ" ಎಂದದೆ; ವಾತ್ಸ್ಯಾಯನನ ಕಾಮಸೂತ್ರದಲ್ಲಿ ಮತ್ತೊಬ್ಬ ಸಾತವಾಹನ ಅರಸನನ್ನು "ಕುಂತಲಃ ಶಾತಕರ್ಣಿಃ" ಎಂದದೆ; ಹಾಗೂ ರಾಜಶೇಖರನ ಕಾವ್ಯಮೀಮಾಂಸೆಯಲ್ಲಿ ಮಗುದೊಬ್ಬನನ್ನೇ "ಕುಂತಲೇಷು ಸಾತವಾಹನೋ ನಾಮ ರಾಜಾ" ಎಂದದೆ. ಪ್ರತಿಷ್ಠಾನ ಪಟ್ಟಣ ಎಂದರೆ ಈಗಣ ಹೈದರಾಬಾದ ಸೀಮೆಯಲ್ಲಿಯ ಪೈಠಣ. ಅತಏವ ಕುಂತಲವು ಗೋದಾವರಿಯ ಪ್ರಾಯಃ ನಾಲ್ಕೂ ದಿಕ್ಕುಗಳಲ್ಲಿ ಹರಡಿ ವಿಸ್ತರಿಸಿದ್ದು ಅದರಲ್ಲಿ ಹೈದರಾಬಾದಿನ ಭಾಗವು ಸೇರಿತ್ತೆಂದು ಮಾತ್ರವಲ್ಲ, ಕುಂತಲದ ರಾಜಧಾನಿ ಹೈದರಾಬಾದ ಸೀಮೆಯಲ್ಲಿ ಇದ್ದುದರಿಂದ, ಅದೇ ಕುಂತಲದ ಕೇಂದ್ರವಾಗಿತ್ತೆಂದೂ ಸಿದ್ಧವಾಗುತ್ತದೆ. ಈಗ, ಪ್ರತಿಷ್ಠಾನಪುರವು ಮರಹಟ್ಟದೇಶದಲ್ಲಿ, ಅಂದರೆ ಮಹಾರಾಷ್ಟ್ರದಲ್ಲಿ ಇತ್ತೆಂದು ಸಂಸ್ಕೃತ ಕಾಲಕಾಚಾರ್ಯನ ಕಥೆಯಿಂದ ತಿಳಿಯುತ್ತದೆ–

ಅಸ್ತೀಹ ದಕ್ಷಿಣಾಯಾಂ ಮರಹಟ್ಟ ದೇಶೇ
ಪೃಥ್ವೀ ಪ್ರತಿಷ್ಠಾನಪುರೇಥ ಜಗ್ಮು॥
ಯತ್ರಾಪಿ ರಾಜಾ ಕಿಲ ಸಾತಯಾನಃ ॥೫೦॥

ಅತಏವ ಪ್ರತಿಷ್ಠಾನದಿಂದ ಅನತಿದೂರದ ಬಾದಾಮಿಯಲ್ಲಿ ರಾಜಧಾನಿಯುಳ್ಳ II ಪುಲಿಕೇಶಿಯು ಐಹೊಳೆಯ ಶಾಸನದಲ್ಲಿ ಹೇಳಿದ ಮಹಾರಾಷ್ಟ್ರಕತ್ರಯವೆಂದರೆ (ಪು ೧೦೩ ಇ) ಆವೆಂದಿನ ಮಹಾರಾಷ್ಟ್ರ ತಾನೆ. ತಾರಾತಂತ್ರದಲ್ಲಿ ಮಹಾರಾಷ್ಟ್ರವೂ ಕರ್ಣಾಟಕವೂ (ಕರು+ನಾಡು=ದೊಡ್ಡ+ದೇಶ= ಮಹಾ+ರಾಷ್ಟ್ರ) ಒಂದೇ ದೇಶದ ಭಿನ್ನನಾಮಗಳು ಎಂದಿರುವುದನ್ನು ಅದರೊಂದಿಗೆ II ಪುಲಿಕೇಶಿ ಕರ್ನಾಟಕದ ಚಕ್ರವರ್ತಿಯಾಗಿದ್ದನೆಂಬುದನ್ನು ಮಾನವರಿಸಿದರೆ, ಮಹಾರಾಷ್ಟ್ರಕತ್ರಯ ಎಂಬ ಆ ವಿಪುಲವಾದ ದೇಶವಾದರೊ ಇಂದಿನ ತೀರ ಮಹಾರಾಷ್ಟ್ರವೂ ಅಲ್ಲ, ಇಂದಿನ ಕರ್ನಾಟಕವೂ ಅಲ್ಲ, ಅದು ಅತನ ಕರ್ನಾಟಕ ಸಾಮ್ರಾಜ್ಯವಾಗಿರಬೇಕು; ಅಂದಿನ ಬೃಹತ್ಕರ್ಣಾಟಕವಾಗಿರಬೇಕು ಎಂದು ("ಕಂಠೀರವ" ದ ದಸರಾ ಸಂಚಿಕೆ, ೧೯೩೮, ಪು. ೪೯-೫೭) ನಿಶ್ಚಯಿಸಬಹುದು. ಈ ಗ್ರಂಥಕರ್ತರು ಅದನ್ನು ಅಲ್ಲಗಳೆವರಾದರೆ ನನಗದನ್ನು ಒಪ್ಪದಿರುವಂತೆ ಕಾರಣವೇನೂ ತೋರುವುದಿಲ್ಲ.

ಇದರ ೩ ನೆಯ ಭಾಗವಾದ ತಲಕಾಡಿನ ಗಂಗರಲ್ಲಿ ಅವರ ಮೂಲಪುರುಷನಾದ ಕೊಂಗುಣಿವರ್ಮನಿಂದ ಶ್ರೀಪುರುಷನ ವರೆಗು (Karnataka Historical Review ೧೯೩೨ ಮತ್ತು ೧೯೩೩: II ೧-೨) ಆ ಮೇಲೆ ನಡೆದ ಕೆಲವು ತಲೆಮಾರಿನವರನ್ನು ಬಿಟ್ಟು ಬೂತುಗನ ಮಗನಾದ ಮಾರಸಿಂಹನಿಂದ ರಾಜವಿದ್ಯಾಧರನ ವರೆಗೂ ("ಕಂಠೀರವ" ದ ದಸರಾ ಸಂಚಿಕೆ ೧೯೩೭, ಪು. ೮೬ ೯೭) ಅವರ ಪೀಳಿಗೆಗಳನ್ನೂ ನಾನೂ ಬಲ್ಲಷ್ಟರ ಮಟ್ಟಿಗೆ ನಿಶ್ಚಯಿಸಿರುತ್ತೇನೆ. ಕೊಂಗುಣಿವರ್ಮನಿಂದ ಶ್ರೀಪುರುಷನವರೆಗಣ ಪೀಳಿಗೆಯಲ್ಲಿ ಇವರ ನಿಶ್ಚಯಕ್ಕೂ ನನ್ನ ನಿಶ್ಚಯಕ್ಕೂ ಭೇದವಿಲ್ಲ. ಅವರದರಲ್ಲಿ II ಮಾಧವ=ಸಿಂಹವರ್ಮ ಎಂಬವನೊಬ್ಬನು ಹೆಚ್ಚಿಗಿದ್ದಾನೆ, ನಾನು ಆ ಸಿಂಹವರ್ಮನೆಂಬ ನಾಮಾಂತರವನ್ನು ಅವರು III ಮಾಧವ ಎಂದೂ ನಾನು II ಮಾಧವ ಎಂದೂ ಇರುವವನಿಗೆ ಹಚ್ಚುಗುತ್ತೇನೆ. ಆದರೆ ಮಾರಸಿಂಹನಿಂದ ಗಂಗರ ಕೊನೆಯ ವರೆಗಣ ಪರಿವಿಡಿಯಲ್ಲಿ ಅವರದಕ್ಕೂ ನನ್ನದಕ್ಕೂ ಹೆಚ್ಚಿಗೆ ವ್ಯತ್ಯಾಸವಿದ್ದರೆ, ನಾನು ಒಕ್ಕಣಿಸಿರುವ ವಂಶವೃಕ್ಷವಾದರೊ, II ರಕ್ಕಸ ಗಂಗನ ತಮ್ಮನಾದ ಅರುಮುಳಿ ದೇವನ ಹಿರಿಯ ಮಗಳಾದ ಹಾಗೂ ತನ್ನ ದೊಡ್ಡಪ್ಪನಾದ ಆ II ರಕ್ಕಸ ಗಂಗನಿಂದಲೇ ಮದುವೆಮಾಡಿ ಕೊಡಲ್ಪಟ್ಟ ಚಟ್ಟಲ ದೇವಿಯಿಂದ ನಿರ್ಮಿಸಲ್ಪಟ್ಟ ಹುಂಬಚ್ಚದ ಪಂಚಬಸದಿಯಲ್ಲಿರುವ ಆಳಿಯ ಶಾಸನದಲ್ಲಿ Epigraphia Carnatica VIII, ನಗರ ೩೫) ಹೇಳಿರುವ ತಲಕಾಡಿನ ಗಂಗರ ಅದ್ಯಂತವಾದ ವಂಶವೃಕ್ಷ. ಅತಏವ ಆಳಿಯ ಅಜ್ಜ-ಮುತ್ತಜ್ಜರ ಮಟ್ಟಿಗಾದರೂ ಅದರಲ್ಲಿ

–೧೬ ನೆಯ ಪುಟಕ್ಕೆ

ಭಾರತದ ಏಕಮಾತ್ರ

ಊನಾಂಗ ಮಕ್ಕಳ ಚಿಕಿತ್ಸಾ ಸಂಸ್ಥೆ

'ಪೋಲಿಯೋ' ಬೇನೆಯಿಂದ ಆಜನ್ಮ ಅಂಗಹೀನರಾಗಬಹುದಾದ ಮಕ್ಕಳಿಗೆ ಹೊಸ ಆಶೋದಯ

ಲೇಖಕರು ಮತ್ತು ಚಿತ್ರಗ್ರಾಹಕರು: ಶ್ರೀ ಕೆ. ಗೋಪಾಲಕೃಷ್ಣ ಹೆಗಡೆ

"ಮಕ್ಕಳಿಲ್ಲದ ಮನೆ ಮಸಣದಂತೆ"ಯೆಂಬ ರೂಢಿಯ ಮಾತು ಅಕ್ಷರಶಃ ನಿಜ. ಮನೆ ತುಂಬ ಮಕ್ಕಳು ಇರಬೇಕು. ಮಗುವಿನ ಮುಖಕಮಲದಿಂದ ಅರಳಿಬಂದ ಸಹಜ ನಗುವೊಂದು ದಣಿದುಬಂದ ತಂದೆಯ ಆಯಾಸವೆಲ್ಲವನ್ನೂ ಪರಿಹಾರ ಮಾಡುವುದು. ತಾಯಿಗೆ ಜೀವನದ ಪರಮ ಕಷ್ಟಗಳನ್ನೆಲ್ಲಾ ಮರೆಯಲನುಕೂಲವಾಗುವುದು. "ನಗು ಮಗು ನಗು", ಅದೆಷ್ಟು ಪ್ರೇಮಪೂರಿತ ಮಾತು!

ಆದರೆ ಚೈತನ್ಯದ ಸೆಲೆಯಾಗಿ ಆಡುತ್ತ ಕಂಡವರ ಕಣ್ಣು ಸೆಳೆಯುವ ಮಗು ಒಮ್ಮಿಂದೊಮ್ಮೆ ಬಾಡಿಹೋದರೆ ಮನಸಿಗೆ ಎಂಥ ಆಘಾತವಾಗದು! ಮಕ್ಕಳ ಪಕ್ಷವಾತ ಅಥವಾ ಅರ್ಧಾಂಗವಾಯು (Infantile paralysis or poliomyelitis) ಇಂಥ ಘಾತಕ ರೋಗಗಳಲ್ಲೊಂದು. ಈಚೆಗೆ ಮುಂಬಯಿಯಲ್ಲಿ ಈ ಪಿಡುಗು ವೇಗವಾಗಿ ಹಬ್ಬುತಿದೆಯೆಂದೂ ಪುಣೆಯಲ್ಲಿ ಕೂಡ ಅದರ ಸೋಂಕು ಮಕ್ಕಳನ್ನು ಆಹುತಿಗೊಳ್ಳುತ್ತಿದೆಯೆಂದೂ ಕೇಳಬರುತ್ತಿದೆ. ಈ ರೋಗ ಸೋಂಕಿದ ಮಕ್ಕಳ ಕೈಗಳೋ ಕಾಲುಗಳೋ ನಿಸ್ಸತ್ವವಾಗಿ ಅವು ಯೋಗ್ಯ ಚಿಕಿತ್ಸೆಯಿಲ್ಲದಿದ್ದರೆ ಆಜೀವ ಊನಾಂಗಿಗಳಾಗಿ ಜೀವನವನ್ನು ಶಾಪದಂತೆ ಅನುಭವಿಸಬೇಕಾಗುವದು. ಇದು ದೈವಸೀಡೆಯೆಂಬ ಭ್ರಾಂತಿ ಹಬ್ಬಿದ್ದುದರಿಂದ ಚಿಕಿತ್ಸೆಯ ಪ್ರಯತ್ನಗಳೂ ನಡೆದಿರಲಿಲ್ಲ. ೧೯೪೭ ರಲ್ಲಿ ಮುಂಬಯಿಯಲ್ಲಿ ಸೇವಾಪರಾಯಣವೈದ್ಯರ ತಂಡವೊಂದು ಈ ಭಯಂಕರ ರೋಗದಿಂದ ಮಕ್ಕಳನ್ನು ಉಳಿಸಿ ಮೊದಲಿನ ಸ್ಥಿತಿಗೆ ತರುವ ಪ್ರಯತ್ನ ಕೈಗೊಳ್ಳುವ ವರೆಗೂ ಮಕ್ಕಳ ಪಕ್ಷವಾತ ಚಿಕಿತ್ಸೆಗೆ ಸುವ್ಯವಸ್ಥಿತ ವ್ಯವಸ್ಥೆಗಳೇ ಇದ್ದಿಲ್ಲ. ಆದರೆ ಈ ವೈದ್ಯರ ಪಂಗಡಕ್ಕೆ ಅಲ್ಪ ಕಾಲದಲ್ಲೇ ಯಶಸ್ಸು ಸಿಕ್ಕಿತು.

ಪ್ರಾರಂಭದ ಸ್ಥಿತಿ

ಸೈನ್ಯ ಖಾತೆಯಿಂದ ಗಳಿಸಿದ ಕೆಲವು ವೈದ್ಯಕೀಯ ವ್ಯಾಯಾಮ ಸಾಧನಗಳು— ಇಬ್ಬರು ರೋಗಚಿಕಿತ್ಸಾ ತಂತ್ರಜ್ಞರು (Physiotherapists)—ಉದಾರ ಧ್ಯೇಯ ಮತ್ತು ಅಪರಿಮಿತ ಉತ್ಸಾಹ-ಇವಿಷ್ಟು ಅವರ ಆಗಿನ ಸೊತ್ತು ಅಥವಾ ಸಂಪತ್ತಾಗಿತ್ತು.

ಸಾರ್ವಜನಿಕರ ಸುಗಮ ಜೀವನಕ್ಕಾಗಿ ಶ್ರಮಿಸಲಿರುವ ಇವರ ನೆರವಿಗೆ ಮುಂಬಯಿಯ ಉದಾರಿಗಳಿಂದ ಮುನ್ನೂರು ರೂಪಾಯಿಯ ಧನ ಸಹಾಯವನ್ನು ಕೇಳಲಾಯಿತು. ಪರಹಿತದ ಈ ದಿವ್ಯ ಕಾರ್ಯಕ್ಕೆ ಸಹಾಯ ನೀಡಲು ಹಿಂದೆಗೆಯುವವರಾರು? ಎಲ್ಲರೂ ಕೊಡುಗೈಯಿಂದ ದಾನ ಮಾಡಿದರು. ಗ್ವಾಲಿಯರದ ಮಹಾರಾಣಿ ಒಮ್ಮೆಲೆ ರೂ. ಐದು ಸಾವಿರವನ್ನು ಕೊಟ್ಟಳಂತೆ. ಒಂದೆರಡು ತಿಂಗಳೊಳಗಾಗಿ ಹದಿನೇಳು ಸಾವಿರಕ್ಕೂ ಮಿಕ್ಕಿದ ಧನಸಂಗ್ರಹ ಮಾಡಲಾಯಿತು.

ವಸತಿಗೃಹಾಭಾವದಿಂದಾಗಿ ಈ ಶಿಶು ಸಂಗೋಪನಾಲಯಕ್ಕೊಂದು ಸ್ಥಳ ಸಿಗದಾಯಿತು. ಡಾ. ಸಂಜಗಿರಿಯೆಂಬೊಬ್ಬರ ಚಿಕಿತ್ಸಾ ಮಂದಿರದ ಕೋಣೆಯೊಂದರಲ್ಲೇ ಎಣಿಸಿದ ಕಾರ್ಯಕ್ರಮವನ್ನು ಪ್ರಾರಂಭಿಸಲಾಯಿತು. ಮುಂದೆ ಡಾ. ಎ. ವಿ. ಬಾಳಿಗರವರು ಅಮೇರಿಕೆಗೆ ತೆರಳಿದಾಗ ಕೆಲ ಸಮಯದ ವರೆಗೆ ಅವರ ಪ್ರಸೂತಿಗೃಹವನ್ನು ಬಳಸಲಾಯಿತು. ವಾತಬೇನೆಯಿಂದ ಊನಹೊಂದಿದ ಮಕ್ಕಳೆಲ್ಲ ಇದರಿಂದ ಲಾಭ ಪಡೆಯುವಂತಾಯಿತು. ಕೆಲ ಸಮಯದೊಳಗೆ ಚಿಕಿತ್ಸೆಗೆ ಬರುವ ಮಕ್ಕಳ ಸಂಖ್ಯೆಯೂ ಹೆಚ್ಚಿತು. ಅವರೆಲ್ಲರ ಚಿಕಿತ್ಸೆಯನ್ನು ಕೈಕೊಳ್ಳುವದು ಸುಲಭಸಾಧ್ಯವಾದ ಕೆಲಸವಲ್ಲ. ಅದುವೆ ಈ ವ್ಯವಹಾರವನ್ನು ಒಂದು ಸಂಘದ ಮೂಲಕ ಜರಗಿಸುವದು ಅತ್ಯುಕ್ತವೆಂದು ನಿಶ್ಚಯಿಸಿದರು. ಆದರೆ ಯಾವುದಕ್ಕೂ ಒಂದು ಸ್ವತಂತ್ರ ಸ್ಥಳಗಳಿಸುವ ಪ್ರಶ್ನೆಯು ಮುಖ್ಯವಾಗಿರಲಿಲ್ಲ. ಸರಕಾರವನ್ನೆ ಶರಣುಹೊಗಬೇಕಾಯಿತು. ಮಹಾಯುದ್ಧದ ದೆಸೆಯಿಂದ ಸೈನ್ಯ ಇಲಾಖೆಯವರಿಗೆಂದು ಕಟ್ಟಿಕೊಟ್ಟ ಕಟ್ಟಡಗಳಿಂದ ಒಂದನ್ನು ಮುಂಬಯಿ ಸರಕಾರದವರು ನಿಮಿತ್ತಮಾತ್ರ ಬಾಡಿಗೆಗೆ ಒಂದು ವರ್ಷದ ವರೆಗೆ ಮಾತ್ರವೆಂದು ಕೊಟ್ಟರು. ಅಂತಾದರೂ ಸರಿಯೆ, ಎಂದು ಹರಕು ಮುರುಕು ಹಂಸಾವಿ ಕಟ್ಟಡದಲ್ಲೇ ಕಾರ್ಯಾರಂಭವಾಯಿತು.

ಮುಂಬಯಿಯ ಕಡಲಕರೆಯ ನಾಲ್ಕನೆ ಮಹಡಿಗಳ (Marine d ive) ದಕ್ಷಿಣ ಭಾಗದ ಕೊನೆಯ ಕಟ್ಟಡದ ಹಿಂದುಗಡೆಯಿರುವ ಮಂದಿರವೊಂದರಲ್ಲಿ ಈಗ ಚಿಕಿತ್ಸೆಯು ನಡೆಯುತ್ತಿದೆ. ೧೯೪೭ ರಲ್ಲಿ ಅಖಿಲ ಭಾರತ ವೈದ್ಯಕೀಯ ಸಮ್ಮೇಳನವು ಮುಂಬಯಿಯಲ್ಲಿ ಜರಗಿದಾಗ ಈ ಚಿಕಿತ್ಸಾಲಯದ ಉದ್ಘಾಟನೆಯನ್ನು ಡಾ. ಜೀವರಾಜ ಮೆಹತಾರವರು ನೆರವೇರಿಸಿದರು. ದೇಶದ ಎಲ್ಲ ಕಡೆಗಳಿಂದಲೂ ಬಂದ ಸದಸ್ಯರಿಂದಾಗಿ ಇವರ ಇರವಿನ ಪ್ರಚಾರ ಕಾರ್ಯವೂ ಸುಲಭವಾಗಿ ಸಾಧಿಸಿದಂತಾಗಿದೆ. ಅಡೀಗ ಇಲ್ಲಿ ಚಿಕಿತ್ಸೆಯು ಪಕ್ಷವಾತೋಪಶಮನ ತಂತ್ರಜ್ಞರಿಂದ ಬಹಳ ಶಾಸ್ತ್ರೀಯವಾಗಿ ಕೊಡಲಾಗುತ್ತಿದೆ. ಇವರಲ್ಲಿ ಹೆಚ್ಚಿನವರು ಯುದ್ಧಕಾಲದ ಸೈನಿಕ ಆಸ್ಪತ್ರೆಗಳಿಂದ ನಿವೃತ್ತಿಹೊಂದಿದವರು. ಅಂದರೆ ಮಾಲೀಸಿನ (Massage) ವಿದ್ಯೆಯಲ್ಲಿ ಅನುಭವಶಾಲಿಗಳು. ಆಂಗ್ಲ ವೈದ್ಯಕೀಯ ವಿದ್ಯೆಯಲ್ಲಿ ಪಾರಂಗತರಾದ ಪದವೀಧರ ಪಂಡಿತರ (Physiotherapy Specialists) ಸಲಹೆ ಸೂಚನೆಯಂತೆ ಕಾರ್ಯಭಾರ ನಡೆಯುತ್ತಿದೆ ಇನ್ನಿತರ ಸಹೃದಯ ವೈದ್ಯಶ್ರೇಷ್ಠರು ಚಿಕಿತ್ಸಾಕ್ರಮದ ಮೇಲ್ವಿಚಾರವನ್ನು ಆಗಿಂದಾಗ್ಗೆ ಮಾಡುತ್ತಾರೆ. ಶಸ್ತ್ರಕ್ರಿಯಾ ಪಾರಂಗತ ಡಾ. ಎಂ. ಜಿ. ಕಿಣಿಯವರು ತಮ್ಮ ಸಂಪೂರ್ಣ ಸಹಕಾರ ಸಲಹೆಗಳನ್ನು ಕೊಡುವುದಾಗಿ ಆಶ್ವಾಸನವಿತ್ತಿದ್ದಾರೆ.

ಮೂಲ ಗೊತ್ತಿಲ್ಲ

ಪಕ್ಷವಾತವು ಯಾವ ಕಾರಣದಿಂದ ಉಂಟಾಗುವುದೆಂದು ನಿರ್ದಿಷ್ಟವಾಗಿ ತಿಳಿದುಬಂದಿಲ್ಲ. ಚಿಕಿತ್ಸಾಕ್ರಮವಾದರೂ ಒಂದು ಖಂಡಿತ ನಿರ್ಣಯ ನಿಬಂಧನೆಗಳಿಗನುಗುಣವಾಗಿಲ್ಲ. ಅಂತಿದ್ದರೂ ಪಕ್ಷವಾತವು ಮೊದಲು ಬೆನ್ನೆಲುಬಿನ (spinal Chord) ಬಳಿಯಿರುವ ನರ ರಚನಾಕ್ರಮಕ್ಕೆ (nervous system) ಒಂದು ತರದ ಸೂಕ್ಷ್ಮದರ್ಶಕಕ್ಕೂ ಕಾಣದ ರೋಗಾಣುಗಳಿಂದ ಅಂಟುತ್ತದೆಂದು ಕಂಡುಹಿಡಿಯಲಾಗಿದೆ. ಅಲ್ಲಿಂದ ಅದು ದೇಹದ ಇತರ ಭಾಗಗಳಿಗೂ ಹಬ್ಬುವುದು. ಸರ್ವಸಾಧಾರಣವಾಗಿ ಇದು ಸಣ್ಣಮಕ್ಕಳಿಗೆ ಹೆಚ್ಚಾಗಿ ಸೋಂಕುವುದು. ಅಲ್ಲದೆ ಇದು ಅಂಟುರೋಗವೂ ಆಗಿದೆಯಂತೆ. ಪರಿಣಾಮವಾಗಿ ದೇವರು ನಿರ್ಮಿಸಿದ ಅಂಗಾಂಗಗಳು ಅಥವಾ ಅವಯವಗಳು ಕಾಣಲು ಸಂಪೂರ್ಣವಾಗಿದ್ದರೂ ಕೆಲವರಿಗೆ ಕೈಯಿಲ್ಲ, ಕಾಲಿಲ್ಲ. ಅಂದರೆ ನಡೆಯಲು ಆಡಲು ಓಡಲು ಬರುವಂತಿಲ್ಲ. ಈ ಬಡ ಮಕ್ಕಳ ಅವಸ್ಥೆಯೇನು? ಕೂತಲ್ಲೇ ಅಥವಾ ಬಿದ್ದುಕೊಂಡಲ್ಲೇ ಅನ್ನಾಹಾರ ಸೇವನೆ—ಮಲ ಮೂತ್ರಾದಿ ವಿಸರ್ಜನೆ.

ಬಡವ-ಬಲ್ಲಿದರಲ್ಲಿ ತಾರತಮ್ಯವಿಲ್ಲ

ಈ ಚಿಕಿತ್ಸಾಮಂದಿರವು ಒಂದು ವ್ಯಾಪಾರೋದ್ಯಮ ಸಂಸ್ಥೆಯಲ್ಲ. ಇಲ್ಲಿ ಪ್ರವೇಶಕ್ಕೆ ಬಡವರು ಬಲ್ಲಿದರು ಎಂಬ ಭೇದಭಾವವಿಲ್ಲ. ಹೆತ್ತವರ ಅಥವಾ ರಕ್ಷಕರ ಆರ್ಥಿಕೋನ್ನತಿಯನ್ನು ಕಂಡು ಅವರ ಮಕ್ಕಳ ಚಿಕಿತ್ಸೆಗೆ ಪ್ರತಿಫಲವನ್ನು ನಿರ್ಧರಿಸಲಾಗುತ್ತದೆ. ಹೆಚ್ಚು ಕಡಿಮೆ ದಿನವೊಂದರ ನಾಲ್ಕಾಣೆಯಿಂದ ಐದು ರೂ. ವರೆಗೆ ವೈದ್ಯೋಪಚಾರದ ವೆಚ್ಚವನ್ನು ಕೊಡಬೇಕಾಗುವುದು. ಅಂದರೆ ಅತಿ ಬಡವನಾದರೆ ಒಂದು ದಿನದ ಚಿಕಿತ್ಸೆಗೆ ನಾಲ್ಕಾಣೆ - ಶ್ರೀಮಂತನಾದರೆ ಅದೇ ಚಿಕಿತ್ಸೆಗೆ ರೂ. ಐದು ಕೊಡಬೇಕು. ಒಂದು ತಿಂಗಳ ವೈದ್ಯಕೀಯ ವೆಚ್ಚವನ್ನು ಮಾತ್ರ ಮುಂಗಡ ಕೊಡಬೇಕು.

ಈಗ ಇಲ್ಲಿ ಎಲ್ಲ ಬಗೆಯ ಪಕ್ಷವಾತಗಳಿಗೂ ಚಿಕಿತ್ಸೆ ಕೊಡುವದು ಸಂಘದ ಧ್ಯೇಯ. ಇದುವರೆಗೆ ಐನೂರಕ್ಕೂ ಮಿಕ್ಕಿದ ಮಕ್ಕಳು ಇದರಿಂದ ಲಾಭಪಡೆದಿದ್ದಾರೆ. ಮುಂಬಯಿ ನಗರದಿಂದಲ್ಲದೆ, ಪ್ರಾಂತದಿಂದಲೂ ಪರ ಪ್ರಾಂತಗಳಿಂದಲೂ ರೋಗಿಗಳು ಬಂದಿರುತ್ತಾರೆ. ಆದರೆ ಶುಶ್ರೂಷೆಗೆ ಬರುವ ರೋಗಿಗಳ ಸಂಖ್ಯೆ ಆಸ್ಪತ್ರೆಯ ಸದ್ಯದ ಶಕ್ತಿಗೆ ಮೀರಿರುವ ಕಾರಣ ಅನೇಕ ರೋಗಿಗಳು ತಮ್ಮ ಸರತಿಯನ್ನು ಕಾಯಬೇಕಾಗಿದೆ. ಕೆಲ ಕಠಿನ ಅವಸ್ಥೆಗಳಲ್ಲಿ ರೋಗಿಗಳಿಗೆ ಆಸ್ಪತ್ರೆಯಲ್ಲೆ ಔಷಧೋಪಚಾರವು ಅತ್ಯಗತ್ಯ. ಅಂತಹವರನ್ನು ಕೆಲದಿನದ ಮಟ್ಟಿಗಾದರೂ ಆಸ್ಪತ್ರೆಯಲ್ಲಿ ಇಟ್ಟುಕೊಳ್ಳುವ ಸಾಮರ್ಥ್ಯವಾಗಲೀ ಸ್ಥಳಾವಕಾಶವಾಗಲೀ ಈಗ ಸಂಘಕ್ಕಿಲ್ಲ. ಅದುದರಿಂದ ಈಗ ದಿನ ದಿನದ ಚಿಕಿತ್ಸೆ ನಡೆದೊಡನೆ ಮಕ್ಕಳನ್ನು ಅವರ ರಕ್ಷಕರು ಮನೆಗೆ ಕರೆದೊಯ್ಯಬೇಕು.

ಆದರೆ ಬಡವರಿಗೆ ಮಕ್ಕಳನ್ನು ದಿನವೂ ಆಸ್ಪತ್ರೆಗೆ ಕರೆತರಲು ಆಗುವ ತೊಂದರೆಯನ್ನು ನೀಗಿಸಲು ಸಂಸ್ಥೆಯು ಒಂದು ಮೋಟಾರನ್ನಿರಿಸಿಕೊಂಡಿದೆ. ಅದು ಊರೆಲ್ಲ ಸುತ್ತಾಡಿ ರೋಗಿ ಮಕ್ಕಳನ್ನು ಕರೆದುಕೊಂಡು ಬಂದು ತಿರುಗಿ ಒಯ್ದು ಬಿಡುವುದು. ಇದಕ್ಕೆ ಯತ್ಕಿಂಚಿತ ಶುಲ್ಕ ಕೊಟ್ಟರೆ ತೀರಿತು.

> ★
>
> 'ಪೋಲಿಯೊ' ಎಂದು ಪ್ರಸಿದ್ಧವಾಗ ಮಕ್ಕಳ ಪಕ್ಷವಾತ ಬೇನೆ ಭಯಂಕರವಾದೊಂದು ರೋಗ. ಅದು ಚಿಕ್ಕ ಮಕ್ಕಳಿಗೆ ತಗಲು ಅಂಟಿ ಅವುಗಳ ಕಾಲು ಕೈಗಳನ್ನು ನಿಸ್ಸತ್ವಗೊಳಿಸಿ ಬಿಡುವುದು. ತಕ್ಕ ಚಿಕಿತ್ಸೆ ದೊರೆಯದಿದ್ದರೆ ಈ ಮಕ್ಕಳು ಸಾಯುವವರೆಗೆ ಪರಾಧೀನರಾಗಿ ಬಾಳಬೇಕಾಗುವದು. ಇಂಥ ಎಷ್ಟೋ ದುರ್ದೈವಿ ಮಕ್ಕಳು ಎಲ್ಲೆಡೆಯಲ್ಲೂ ಕಾಣಸಿಗುತ್ತವೆ. ಅವುಗಳ ಚಿಕಿತ್ಸೆಗೆ ಮುಂಬಯಿಯಲ್ಲಿ ಈಗೆರಡು ವರ್ಷಗಳಿಂದ ಒಂದು ಸಂಸ್ಥೆ ದುಡಿಯುತಿದೆ. ಅದರ ಕತೆಯಿದು.
>
> ★

ಚಿಕಿತ್ಸಾಲಯದ ಮುಂದೆ ನಿಂತಿದೆ. ಚಿಕಿತ್ಸಾ ಸಂಸ್ಥೆಯ ಮೋಟಾರು

ಸಂಘದ ಯೋಜನೆ

ಒಂದು ಪ್ರಯೋಗದ ಮಾದರಿಯಲ್ಲಿ ಪ್ರಾರಂಭಿಸಿದ ಈ ಚಿಕಿತ್ಸಾಲಯವಿಂದು ಬಹಳ ಪ್ರಯೋಜನಕಾರಿಯೆಂದು ಸಿದ್ಧವಾಗಿದೆ. ಇನ್ನು ಮುಂದೆ ಅಮೇರಿಕ, ಇಂಗ್ಲೆಂಡ ದೇಶಗಳಂಥ ಪಾಶ್ಚಾತ್ಯ ಮಾದರಿಯಲ್ಲಿ ಸುಸಜ್ಜಿತ ಸಾಧನೋಪಕರಣಗಳಿಂದ ಚಿಕಿತ್ಸೆ ನಡೆಯಲಿದೆ. ಅದಲ್ಲದೆ ಸಂಘದ ಮುಂದಾಲೋಚನೆಯು ಹೀಗಿದೆ.

೧) ಶಾಸ್ತ್ರೀಯ ಮತ್ತು ಪ್ರಯೋಗಶೀಲ ಮಕ್ಕಳ ಆಸ್ಪತ್ರೆ.

— ೩ನೆಯ ಪುಟಕ್ಕೆ

ಚಿಕಿತ್ಸಾ ಪಟುಗಳು ಊನಾಂಗ ಮಕ್ಕಳಿಗೆ ಮಾಲೀಸು ಮತ್ತು ವ್ಯಾಯಾಮ ಮಾಡಿಸುತ್ತಿರುವುದು

ಹಿಂದುಸ್ತಾನವನ್ನು ಬಲಿಷ್ಠರಾಷ್ಟ್ರ ಮಾಡುವಾ

ಭಾರತೀಯರಿಗೆ ಮುಖ್ಯಮಂತ್ರಿಗಳ ಕರೆ

ರಾಷ್ಟ್ರದ ಗೌರವ—ಸ್ವಾತಂತ್ರ್ಯ—ಹಿತವನ್ನು ರಕ್ಷಿಸಲು ಬಾನುಲಿ ಮಂತ್ರಿಗಳ ಬಿನ್ನಹ

ಮುಖ್ಯಮಂತ್ರಿಗಳ ಕರೆ

ಸ್ವಾತಂತ್ರ್ಯ ದಿನದ ಶುಭದಿನದಲ್ಲಿ ದಿಲ್ಲಿಯ ಕೆಂಪುಕೋಟೆಯ ಎದುರಿಗೆ ನೆರೆದಿದ್ದ ಸಾವಿರಾರು ಜನರನ್ನುದ್ದೇಶಿಸಿ ಭಾಷಣ ಮಾಡುತ್ತ ಮುಖ್ಯಮಂತ್ರಿ ಪಂಡಿತ ಜವಾಹರಲಾಲರು ಭಾರತೀಯರು ಇಂದು ಮಾಡಬೇಕಾದ ಕರ್ತವ್ಯವನ್ನು ಕುರಿತು ಹೇಳಿದರು. ಹಿಂದುಸ್ತಾನವು ಬಲಿಷ್ಠ ಮತ್ತು ಸಂಪತ್ಸಮೃದ್ಧ ರಾಷ್ಟ್ರವಾಗುವಂತೆ ಪ್ರತಿಯೊಬ್ಬನು ನೋಡಿಕೊಳ್ಳಬೇಕೆಂದು ಅವರು ಬಿನ್ನವಿಸಿಕೊಂಡರು. ಚಿಕ್ಕಪುಟ್ಟ ಮಾತುಗಳಿಗಾಗಿ ನಾವು ಕಚ್ಚಾಡದೆ ಎಲ್ಲರೂ ಸಹಕಾರದಿಂದ, ರಾಷ್ಟ್ರವನ್ನು ಎದುರಿಸುತ್ತಿರುವ ಸಮಸ್ಯೆಗಳನ್ನು ಎದುರಿಸಬೇಕು. ಈ ಎರಡು ವರ್ಷಗಳಲ್ಲಿ ನಮ್ಮಿಂದ ತಪ್ಪು ತಡಿಗಳಾಗಿದ್ದರೂ ನಾವು ಪ್ರಗತಿಯನ್ನು ಬಹಳಮಟ್ಟಿಗೆ ಸಾಧಿಸಿರುವೆವು. ಜಾಗತಿಕ ಶಾಂತಿರಕ್ಷಣೆಯ ಕಾರ್ಯದಲ್ಲಿಯೂ ಹಿಂದುಸ್ತಾನವು ಮಹತ್ವದ ಪಾತ್ರವನ್ನು ವಹಿಸಬೇಕಾಗಿದೆ. ಈ ಜಗತ್ತಿನಲ್ಲಿ ನಮಗೆ ಶತ್ರುಗಳಿಲ್ಲ. ಪರದೇಶಗಳಲ್ಲಿ ಕೈಹಾಕುವ ಇಚ್ಛೆ ನಮಗಿಲ್ಲ. ಅದರಂತೆ ಪರರಾಷ್ಟ್ರಗಳೂ ನಮ್ಮ ದೇಶದಲ್ಲಿ ಕೈಹಾಕುವದಕ್ಕೆ ನಾವು ಅವಕಾಶ ಕೊಡಲಾರೆವು. ಹಿಂದುಸ್ತಾನದ ರಾಜ್ಯಘಟನೆಯ ರಚನೆಯ ಕಾರ್ಯವು ಇನ್ನು ಕೆಲ ತಿಂಗಳಲ್ಲಿ ಮುಗಿಯಬಹುದು. ಆದರೆ ಕಾಗದದಲ್ಲಿಯ ಆ ಘಟನೆಯಿಂದ ಜನತೆಗೆ ಸಹಾಯವಾಗದು. ಜನತೆಯ ಉದ್ಯೋಗಶಕ್ತಿ, ಸಹಿಷ್ಣುತೆ ಹಾಗು ಅಧಿಕ ಉತ್ಪಾದನೆಯಲ್ಲಿ ತೋರುವ ಉತ್ಸಾಹವನ್ನೇ ಅದು ಅವಲಂಬಿಸುವದು. ನವಭಾರತದ ರಚನೆಗೆ ಧೈರ್ಯ ಮತ್ತು ಮುಂದಾಲೋಚನೆ ಬೇಕು. ಎಲ್ಲರೂ ಈ ದೃಷ್ಟಿಯಿಂದ ನಡೆದರೆ ಮಾತ್ರ ಧ್ಯೇಯವು ಸಾಧ್ಯವಾಗುವದು. ಕೊನೆಯಲ್ಲಿ ಮುಖ್ಯಮಂತ್ರಿಗಳು ಮೂರು ಸಂಗತಿಗಳನ್ನು ಚೆನ್ನಾಗಿ ಲಕ್ಷ್ಯದಲ್ಲಿಡಬೇಕೆಂದು ಹೇಳಿದರು. ಮೊದಲನೆಯದಾಗಿ ಶಾಂತಿ ಇದ್ದರೆ ಮಾತ್ರ ರಾಷ್ಟ್ರವು ಪ್ರಗತಿ ಹೊಂದಬಲ್ಲದು, ಎರಡನೆಯದಾಗಿ ಚಿಕ್ಕಪುಟ್ಟ ಕಚ್ಚಾಟಗಳಲ್ಲಿ ರಾಷ್ಟ್ರ ರಚನೆಯ ಮಹತ್ವದ ಪ್ರಶ್ನೆಯನ್ನು ಮರೆಯಬಾರದು. ಕೊನೆಯದಾಗಿ ಆತ್ಮವಿಶ್ವಾಸವಿರಬೇಕು. ಹೀಗಾದರೆ ಮಾತ್ರ ನಮಗೆ ಹೊರಗಿನವರ ಸಹಾಯದ ಅವಶ್ಯಕತೆ ಉಳಿಯದು. ಪಂಡಿತರ ಈ ಮಾತುಗಳತ್ತ ಭಾರತೀಯರು ಗಮನಿಸಿ ಕಾರ್ಯಾಸಕ್ತರಾಗುವರೋ?

ದಿವಾಕರರ ಬಾನುಲಿ ಭಾಷಣ

ಹಿಂದುಸ್ತಾನ ಸರಕಾರದ ಸುದ್ದಿ ಮತ್ತು ಬಾನುಲಿ ಖಾತೆಯ ಮಂತ್ರಿಗಳಾದ ಶ್ರೀ ದಿವಾಕರ ರಂಗರಾಯರು ೧೫ ನೇ ತಾರೀಕು ಸ್ವಾತಂತ್ರ್ಯ ದಿನದ ನಿಮಿತ್ತ ಮುಂಬಯಿ ಬಾನುಲಿ ಮೂಲಕ ಭಾಷಣ ಮಾಡುತ್ತ ರಾಷ್ಟ್ರದ ಗೌರವ, ಸ್ವಾತಂತ್ರ್ಯ ಮತ್ತು ಹಿತಗಳನ್ನು ಸಂರಕ್ಷಿಸಲು ಜನತೆಯನ್ನು ಬಿನ್ನವಿಸಿಕೊಂಡರು. ಸ್ವತಂತ್ರ ಭಾರತವು ಈಗ ಎರಡು ವರುಷಗಳ ಮಗು. ಈ ದಿನ ನೀವು ಆದರ್ಶ ಪರಂಪರೆಗಳನ್ನು ಚೆನ್ನಾಗಿ ಪರಿಶೀಲಿಸಿಕೊಳ್ಳಬೇಕು. ಧನಿಕತ್ವವನ್ನು ಯಾವರೀತಿ ಸಾಧಿಸಬೇಕೆಂಬುದನ್ನು ಕಂಡುಕೊಳ್ಳಬೇಕು. ಯೋಗ್ಯ ಮಾರ್ಗದಿಂದ ವರ್ತಿಸುವ ನಿರ್ಧಾರ ಮಾಡಿ ಟೊಂಕಕಟ್ಟಿ ಕಾಲದೇವನ ರಣದಲ್ಲಿ ಕಾಲಿಡಬೇಕು. ಅಂದರೆ ಮಾತ್ರ ನಾವು ಸ್ವಾತಂತ್ರ್ಯೋತ್ಸವವನ್ನು ಸಾರ್ಥಕಗೊಳಿಸಿದಂತಾಗುವದು ಎಂದು ಅಭಿಪ್ರಾಯಪಟ್ಟರು. ಅನಂತರ ಅವರು ಸ್ವಾತಂತ್ರ್ಯಪ್ರಾಪ್ತಿಯ ಅನಂತರ ರಾಷ್ಟ್ರವು ಎದುರಿಸಬೇಕಾಗಿ ಬಂದ ಸಮಸ್ಯೆಗಳನ್ನೆಲ್ಲ ನಿವೇದಿಸಿ ಸರಕಾರವು ಅವನ್ನೆಲ್ಲ ಎಷ್ಟೊಂದು ಯಶಸ್ವಿಯಾಗಿ ಬಿಡಿಸುತ್ತ ಬಂದಿದೆಯೆಂಬುದನ್ನು ವಿವೇಚಿಸಿದರು. ಸದ್ಯದ ಪರಿಸ್ಥಿತಿಯಲ್ಲಿ ಭಾರತೀಯರೆಲ್ಲ ಮಾಡಬೇಕಾದ ಕರ್ತವ್ಯವನ್ನು ಕುರಿತು ಮಾನ್ಯ ದಿವಾಕರ ರಂಗರಾಯರು ಈ ರೀತಿ ಹೇಳಿದರು. ಈ ನಮ್ಮ ಭಾರತಮಾತೆಯು ಅನ್ನಧಾನ್ಯಗಳ ತವರೂರಾಗಿದ್ದರೂ ಈಗ ಅದು ಸಾಲದೆ ಹೋಗಿ ಪ್ರತಿ ವರುಷ ನೂರು ಕೋಟಿ ರೂಪಾಯಿ ಧಾನ್ಯವನ್ನು ನಾವು ಹೊರಗಿನಿಂದ ತರಿಸುವ ದುರ್ಧರ ಪ್ರಸಂಗ ಬಂದಿದೆ. ಇದೊಂದು ಅಸಹ್ಯಕರವಾದ ಸಂಗತಿ. ಆದುದರಿಂದ ೧೯೫೧ ರಿಂದ ಮುಂದೆ ಈ ಧಾನ್ಯಗಳ ಆಯಾತವನ್ನು ನಿಲ್ಲಿಸಿಬಿಡಬೇಕೆಂದು ನಿರ್ಧರಿಸಲಾಗಿದೆ. ನಮಗೆ ಬೇಕಾಗುವ ಆಹಾರವನ್ನು ನಾವು ಇಲ್ಲಿಯೇ ಹುಟ್ಟಿಸಬೇಕು ಎಂದು ೩೩ ಕೋಟಿ ಜನ ನಾವೆಲ್ಲ ಸಂಕಲ್ಪ ಮಾಡಿದ್ದಾದರೆ ಅದೇನು ಆಗದ ಮಾತಲ್ಲ. ಈ ವಿಷಯದಲ್ಲಿ ಪ್ರತಿಯೊಬ್ಬ ಕರ್ನಾಟಕಸ್ಥನು ಆಸ್ಥೆ ವಹಿಸಿ ದುಡಿಯುವನೆಂದು ನಾನು ನಂಬಿರುವೆ. ಈ ಎರಡು ವರುಷದಲ್ಲಿ ದೇಶವು ಸಾಧಿಸಿದ್ದು ಅತ್ಯಂತ ಹೆಮ್ಮೆಯ ವಿಷಯವಾಗಿದೆ. ಜನತೆಯ ಸಹಾಯ ಸಹಕಾರಗಳಿಂದಲೆ ಇದೆಲ್ಲ ಸಾಧ್ಯವಾಯಿತೆಂಬುದು ನಿರ್ವಿವಾದವಾಗಿದೆ. ಇಷ್ಟು ಹೇಳಿದ ಮಾತ್ರಕ್ಕೆ ಹಿಂದುಸ್ತಾನವು ನಂದನವನವಾದಂತಾಯಿತು; ಇನ್ನು ಮೇಲೆ ಟೀಕೆಗೆ ಅವಕಾಶವೇ ಇಲ್ಲ ಎಂದು ನಾನು ಹೇಳಿದಂತಾಗಲಿಲ್ಲ. ಟೀಕೆಯು ಪ್ರಜಾರಾಜ್ಯದ ಉಸಿರಿನಂತಿದೆ. ಆದರೆ ಸಂಗತಿಗಳನ್ನು ಚೆನ್ನಾಗಿ ತಿಳಿದುಕೊಂಡು ಟೀಕೆ ಮಾಡುವದು ಮಾತ್ರ ಅವಶ್ಯವಾಗಿದೆ. ಈ ದೇಶವು ಉನ್ನತ ಸ್ಥಿತಿಯನ್ನು ಮುಟ್ಟಬೇಕಾದರೆ ಇಲ್ಲಿ ಜಾತಿನಿಷ್ಠರಿಗೆ, ಕೇವಲ ಕಲ್ಪನಾನಿಷ್ಠರಿಗೆ, ಹಿಂಸಾಚಾರಿಗಳಿಗೆ ಟೀಕಾಕಾರರಿಗೆ ಎಡೆಗೊಟ್ಟು ಉಪಯೋಗವಿಲ್ಲ. ಯಾವದೇ ಸ್ವರೂಪದ ಹಿಂಸಾವೃತ್ತಿಯಿಂದ ನಡೆಯುವ ಪಕ್ಷಪಂಗಡಗಳಿಗೆ ಎಡೆಗೊಡುವ ಪ್ರಜಾರಾಜ್ಯವು ಕ್ಷಣ ಹೊತ್ತು ಸಹ ಬಾಳಲಾರದು. ಯಾವದೇ ಧರ್ಮ ಜಾತಿಯವನಿದ್ದರೂ ದೇಶನಿಷ್ಠೆ ಮತ್ತು ಪರಸ್ಪರ ಅಹಿಂಸೆ ಈ ಎರಡನ್ನು ಮನ್ನಿಸಿದರೆ ಮಾತ್ರ ಹಿಂದ ಭೂಮಿಯಲ್ಲಿ ಅವನಿಗೆ ಸ್ಥಾನವಿರತಕ್ಕದ್ದು. ಈ ವೃತ್ತಿಯಿಂದ ನಾವೆಲ್ಲ ನಡೆದದ್ದಾದರೆ ಮುಂದಿನ ವರುಷದೊಳಗಾಗಿ ರಾಷ್ಟ್ರ ಇನ್ನೂ ಹೆಚ್ಚು ಪ್ರಗತಿ ಹೊಂದುವವೆಂಬಲ್ಲಿ ಸಂದೇಹವಿಲ್ಲ ಎಂದು ಮುಂತಾಗಿ ಹೇಳಿ ಮಾತು ಮುಗಿಸಿದರು.

ರಾಷ್ಟ್ರಭಾಷೆ

ರಾಷ್ಟ್ರಭಾಷೆಯ ಪ್ರಶ್ನೆಯ ಇತ್ಯರ್ಥ ಇಷ್ಟರಲ್ಲಿಯೇ ಘಟನಾ ಸಮಿತಿಯಲ್ಲಿ ಆಗುವದಿದೆ. ಈ ಸಂಬಂಧದಲ್ಲಿ ಘಟನಾ ಸಮಿತಿಯ ಅಧ್ಯಕ್ಷರಾದ ಡಾ. ರಾಜೇಂದ್ರ ಪ್ರಸಾದರ ಅಭಿಪ್ರಾಯವೇನಿದೆಯೆಂಬುದನ್ನು ತಿಳಿದುಕೊಳ್ಳುವದು ಅಪ್ರಸ್ತುತವಾಗಲಾರದು. ಡಾ. ರಾಜೇಂದ್ರ ಪ್ರಸಾದರು ದಿಲ್ಲಿಯ ಸಭೆಯೊಂದರಲ್ಲಿ ಇತ್ತೀಚೆ ಭಾಷಣ ಮಾಡುತ್ತ ಅಖಿಲ ಭಾರತದ ಉಪಯೋಗಕ್ಕೆ ಬರುವ ಭಾಷೆಯು ಸಜೀವ ಹಾಗು ದಿನವೂ ಬೆಳೆಯುವಂತಹದಿರಬೇಕು ಎಂದು ಅಭಿಪ್ರಾಯಪಟ್ಟರು. ಸಂಸ್ಕೃತ ಭಾಷೆಯಿಂದ ಉದ್ಭವಿಸಿದ ದೇವನಾಗರೀ ಲಿಪಿಯ ಪರಿಚಯ ಈ ವಿಷಯದಲ್ಲಿ ಆದ ಎರಡೂ ಗುಂಪುಗಳಿಗೆ ಇರುವದರಿಂದ ಅದಕ್ಕೆ ಎಲ್ಲತ ಬೆಂಬಲವಿದೆಯೆಂದು ತಿಳಿದು ಬಂದಿದೆ. ಉರ್ದು ಲಿಪಿಯು ಉತ್ತರ ಹಿಂದುಸ್ತಾನದ ಕೆಲ ಭಾಗಗಳಲ್ಲಿ ಮತ್ತು ದಕ್ಷಿಣ ಹಿಂದುಸ್ತಾನದಲ್ಲಿ ಹೈದರಾಬಾದ ಸಂಸ್ಥಾನದಲ್ಲಿ ಕೆಲವರಿಗೆ ಗೊತ್ತಿದೆ. ದೇವನಾಗರಿ ಲಿಪಿಗೆ ಇದ್ದಷ್ಟು ಬೆಂಬಲ ಯಾವ ಲಿಪಿಗೂ ಇರುವದಿಲ್ಲ. ಆದುದರಿಂದ ದೇವನಾಗರಿ ಲಿಪಿಯೆ ರಾಷ್ಟ್ರಭಾಷೆಯ ಲಿಪಿಯಾಗಬಲ್ಲುದೆಂಬ ವಾದವು ಸಮಂಜಸವಾಗಿದೆ. ಆದರೆ ಇದುವರೆಗೆ ಉರ್ದು ಲಿಪಿ ಬಹಳ ಪ್ರಚಾರದಲ್ಲಿದ್ದ ಭಾಗಗಳಲ್ಲಿಯ ಜನರಿಗೆ ಆ ಭಾಷೆಯಲ್ಲಿ ಅರ್ಜಿ ಮೊದಲಾದ್ದನ್ನು ಕೊಡುವ ಅವಕಾಶ ಇನ್ನೂ ಕೆಲ ವರ್ಷ ಕೊಡಬಹುದು. ಕೆಲ ವಿಶಿಷ್ಟ ಉದ್ದೇಶಗಳಿಗಾಗಿ ಸರಕಾರದವರು ಇದಕ್ಕೆ ಮನ್ನಣೆ ಕೊಡಬೇಕೆಂಬ ವಿಧಿ ಇರಬಾರದು ಎಂದು ಮುಂತಾಗಿ ಹೇಳಿ ಇದು ಸರ್ವಸಮ್ಮತವಾಗಬಹುದೆಂದು ರಾಜೇಂದ್ರರು ಹಾರೈಸಿದ್ದಾರೆ. ಭಾಷೆಯ ಪ್ರಶ್ನೆಯ ಬಗ್ಗೆ ಅವರು ಈ ರೀತಿ ಅಭಿಪ್ರಾಯಪಡುತ್ತಾರೆ. ಉತ್ತರ ಹಿಂದುಸ್ತಾನದ ಬಹುಜನರಿಗೆ ಬರುವಂಥ ಭಾಷೆಯೇ ರಾಷ್ಟ್ರಭಾಷೆಯಾಗಬಲ್ಲದು. ಈಗಾಗಲೇ ಸೇರಿದ ಪರಭಾಷಾ ಶಬ್ದಗಳನ್ನು ತ್ಯಜಿಸುವದು ಮಾತ್ರ ಸಾಧ್ಯವಿಲ್ಲೆಂದ ಬಳಿಕ ಭಾಷೆಯ ಪ್ರಶ್ನೆ ಬಿಡಿಸುವದು ಕಠಿನವಲ್ಲ. ಪರ್ಶಿಯನ್ ಶಬ್ದಗಳಿಂದ ತುಂಬಿದ ಕ್ಲಿಷ್ಟ ಉರ್ದು ಮತ್ತು ಸಂಸ್ಕೃತಮಯ ಹಿಂದೀ ಇವುಗಳ ನಡುವೆ ಈಗ ವಾಗ್ವಾದವಿರುವದು. ಹೈದರಾಬಾದದಲ್ಲಿಯ ಈಗಿನ ಕ್ಲಿಷ್ಟ ಉರ್ದು ಭಾಷೆಯ ಕಾಲಗತಿ ನಿಂತಂತೆ ಪ್ರೇಮಚಂದರ ಪದ್ಧತಿ ಬಂದೇಬರುವದು. ಸಂಸ್ಕೃತಮಯ ಹಿಂದಿಯಲ್ಲಿ ಹಿಂದುಸ್ತಾನಿ, ಪ್ರಜ ಭಾಷಾ, ಖಡಿಬೋಲಿ ಉರ್ದು ಸಹ ಕೆಲ ಭಾಷೆಗಳಿಗೆಲ್ಲಿಯು ಪ್ರವೇಶ ಕೊಟ್ಟರೆ ಹಿಂದೀ ಭಾಷೆಗೆ ದ್ರೋಹ ಬಗೆದಂತಾಗುವದು. ಹಿಂದೀ ಭಾಷೆಯು ರಾಷ್ಟ್ರಭಾಷೆಯಾಗಲಿರುವದರಿಂದ ಉತ್ತರದ ಕೆಲವು ದಕ್ಷಿಣದ ಕೆಲವು ಜನರ ಮೇಲೆ ಅದನ್ನು ಒತ್ತಾಯದಿಂದ ಹೇರಲಾಯಿತೆಂಬ ಅಪವಾದನೆ ಬರಕೂಡದು. ಪೂರ್ಣ ವಿಚಾರ ಮಾಡಿ ಯಾವದನ್ನು ನಿರ್ಧರಿಸಬೇಕು. ಇನ್ನು ೧೫ ವರುಷಗಳ ವರೆಗೆ ಇಂಗ್ಲೀಶ ಉಪಯೋಗಿಸುವದಕ್ಕೆ ಅವಕಾಶವಿರತಕ್ಕದ್ದು ಎಂದು ಮುಂತಾಗಿ ಭಾಷೆಯ ಸಂದರ್ಭದಲ್ಲಿ ಅವರು ಅಭಿಪ್ರಾಯ ಪಟ್ಟಿರುವರು.

ಹೈದರಾಬಾದದಲ್ಲಿ

ಹೈದರಾಬಾದದಲ್ಲಿ ರಜಾಕಾರರ ಹಾವಳಿಯ ಜೊತೆಗೆ ಕಮ್ಯುನಿಸ್ಟರ ಉಪದ್ರವವೂ ಜನತೆಯನ್ನು ಹಣ್ಣುಮಾಡಿದ್ದು ಸರ್ವಶ್ರುತ. ಪೋಲೀಸಕ್ರಮ ಕೈಕೊಂಡು ಸರಕಾರದವರು ರಜಾಕಾರರ ಸದ್ದು ಅಡಗಿಸಿದ್ದುಂಟು. ಕಮ್ಯುನಿಸ್ಟರ ಉಪಟಳವೂ ಕ್ರಮಶಃ ಕಡಿಮೆಯಾಗಹತ್ತಿದೆಯೆಂದು ಮಿಲಿಟರಿ ಗವರ್ನರರ ಹೇಳಿಕೆ. ಕಮ್ಯುನಿಸ್ಟ ಪಕ್ಷದಲ್ಲಿಯ ಕೆಲವರ ವರ್ತನೆಯು ಪಕ್ಷಪ್ರಮುಖರಿಗೆ ಸರಿಬಾರದ್ದರಿಂದ ಅವರು ಬೇಡಾದವರನ್ನು ತಮ್ಮ ಪಕ್ಷದಿಂದ ಹೊರದೂಡಹತ್ತಿರುವರೆಂದು ತಿಳಿದು ಬರುತ್ತದೆ. ನಾಲಗೊಂಡಾ ಮತ್ತು ವರಂಗಲ್ಲ ಜಿಲ್ಲೆಗಳು ಕಮ್ಯುನಿಸ್ಟರ ಹಾವಳಿಗೆ ಹೆಚ್ಚಿಗೆ ತುತ್ತಾದ ಪ್ರದೇಶಗಳು. ಆದರೀಗ ನಾಲಗೊಂಡಾದಲ್ಲಿ ಪರಿಸ್ಥಿತಿ ತಿಳಿಯಾಗಹತ್ತಿದ್ದು ಸ್ಥಳೀಯ ಜನರು ಅವರಿಗೆ ಸಹಾಯ ಸಲ್ಲಿಸುವದನ್ನು ಬಿಟ್ಟು ಅಧಿಕಾರಿಗಳಿಗೆ ಸಹಾಯ ಒದಗಿಸುತ್ತಿರುವರೆಂದು ಮಿಲಿಟರಿ ಗವರ್ನರರ ಅಭಿಪ್ರಾಯ. ವರಂಗಲ್ಲ ಜಿಲ್ಲೆಯ ಪರಿಸ್ಥಿತಿಯು ಸುಧಾರಿಸಿದೆಯೆಂಬ ವರದಿ ಬಂದಿದೆ. ಆದರೂ ಈ ಜಿಲ್ಲೆಯು ಬಹಳ ದೊಡ್ಡದು ಮತ್ತು ಗುಡ್ಡಗಾಡಿನಿಂದ ನಿಬಿಡವಾದುದಿರುವುದರಿಂದ ಕೇಡಿಗಳಿಗೆ ಅಡಗಿಕೊಳ್ಳಲು ಅನುಕೂಲತೆ ಹೆಚ್ಚಾಗಿದೆ. ಪೋಲೀಸರು ಮತ್ತು ಸೈನಿಕರು ಈಗ ಈ ಜನರನ್ನೆಲ್ಲ ಹುಡುಕಿ ತೆಗೆಯಹತ್ತಿರುವರು. ಪ್ರಮುಖ ಕಮ್ಯುನಿಸ್ಟರಾಗಿರುವ ರವಿ ನಾರಾಯಣ ರೆಡ್ಡಿಯವರನ್ನು ಮುಕ್ತ ಬಂಧಿಸಲಾಗಿದೆಯೇನೆಂದು ಪತ್ರಿಕಾಕರ್ತರು ಮಿಲಿಟರಿ ಗವರ್ನರರನ್ನು ಕೇಳಿದಾಗ ಅವರು ಅದನ್ನು ಪುಷ್ಟೀಕರಿಸಲೂ ಇಲ್ಲ ನಿರಾಕರಿಸಲೂ ಇಲ್ಲ. ಆದರೆ ರಜಾಕಾರರು ಕಮ್ಯುನಿಸ್ಟರ ಹಿಂದೆ ಇರುವರೆಂಬುದು ಮಾತ್ರ ಸಂಪೂರ್ಣ ಸುಳ್ಳೆಂದು ಅವರು ತಿಳಿಸಿದರು. ಈ ಕಮ್ಯುನಿಸ್ಟರ ನೆವ ಮುಂದೆಮಾಡಿ ಉಳಿದ ಕೇಡಿಗಳೂ ಸಂಸ್ಥಾನದಲ್ಲಿ ಇನ್ನೂ ಗೊಂದಲ ಹಾಕುತ್ತಿರುವದು ಅಲ್ಲಲ್ಲಿ ಕೇಳಬರುತ್ತದೆ. ಕಮ್ಯುನಿಸ್ಟರ ಜೊತೆಗೆ ಇವರ ಸದ್ದೂ ಅಡಗಿದಾಗ ದೇಶದಲ್ಲಿ ಸುಖಶಾಂತಿಗಳು ಸಂಪೂರ್ಣವಾಗಿ ನೆಲಸಬಲ್ಲವು.

ಕಾಶೀಮ ರಜವಿಯ ಖಟ್ಲೆ

ಕಾಶಿಮ ರಜವಿಯ ಖಟ್ಲೆಯಲ್ಲಿ ಸರಕಾರೀ ವಕೀಲರಾದ ವಿ. ಎಲ್. ಎತಿರಾಜರು ತಮ್ಮ ಹೇಳಿಕೆಯಲ್ಲಿ ಮಾನನೀಯ ಅತಿ ನೀಚ ಉದ್ದೇಶಕ್ಕಾಗಿ ಅಂದರೆ ರಾಜಕೀಯ ಮತಭೇದಕ್ಕಾಗಿ ಸಯ್ಯದ ಕಾಶೀಮ ರಜವಿಯವರು ಶೋಯಬುಲ್ಲಾಖಾನರ ಕೊಲೆಯ ಒಳಸಂಚನ್ನು ಉದ್ದೇಶಪೂರ್ವಕವಾಗಿ ನಡೆಸಿ ಕೊಲೆಗೆ ಪ್ರಚೋದನೆಯಿತ್ತರೆಂದು ಹೇಳಿದರು. ಅಗಸ್ಟ ೨೨ ನೇ ತಾರೀಕು ಬೆಳಗು ಮುಂಜಾನೆ ೧–೨೦ ಗಂಟೆಗೆ ಶೋಯಬುಲ್ಲಾಖಾನರು ಇಮ್ರೋಜ ಪತ್ರಿಕೆಯ ಕಚೇರಿಯಿಂದ ತಮ್ಮ ಮನೆಗೆ ಹೊರಟಾಗ ಮನೆಯೆದುರಿನಲ್ಲಿಯೇ ಅವರ ಕೊಲೆ ಸಂಭವಿಸಿತೆಂದು ಅವರು ಹೇಳಿದರು ಇಮ್ರೋಜ ಪತ್ರಿಕೆಯಲ್ಲಿ ಶೋಯಬುಲ್ಲಾಖಾನರು ಆಗಾಗ ರಜವಿಯವರ ಧೋರಣವನ್ನು ಖಂಡಿಸಿ ಬರೆಯುತ್ತಿದ್ದುದರಿಂದ ಬೇಜಾರಗೊಂಡು ರಜವಿಯವರು ಅವರ ಕೊಲೆಯ ಹೀನ ಮತ್ತು ಪುಕ್ಕತನದ ಕೃತ್ಯವನ್ನೆಸಗಿದರೆಂದು ಅವರು ಕೊಲೆಯ ಕಾರಣಗಳನ್ನು ಪ್ರತಿಪಾದಿಸುತ್ತ ಹೇಳಿದರು. ಕೊಲೆಯ ಪೂರ್ವದಲ್ಲಿ ರಜವಿಯವರು ಶೋಯಬುಲ್ಲಾಖಾನರನ್ನು ಕರೆಯಿಸಿ ತಮ್ಮ ಧೋರಣವನ್ನು ಟೀಕಿಸುವದನ್ನು ಬಿಡಬೇಕೆಂದೂ ಇಲ್ಲವಾದರೆ ಗುಂಡಿಕ್ಕಿ ಕೊಲ್ಲಲಾಗುವದೆಂದೂ ಬೆದರಿಸಿದ ಬಗ್ಗೆ ಪುರಾವೆಗಳಿವೆಯೆಂದು ವಕೀಲರು ಹೇಳಿದರು. ಅನಂತರ ಮಾಫೀ ಸಾಕ್ಷಿದಾರನಾದ ಅಸೀರನ ಸಾಕ್ಷಿಯಾಯಿತು. ಇವನು ೩೨ ವರ್ಷದವನಿದ್ದು ಉಸ್ಮಾನಿಯಾ ವಿಶ್ವವಿದ್ಯಾಲಯದ ಪದವೀಧರನಿರುವನು. ಈ ಕೊಲೆಗಿಂತ ಆರು ತಿಂಗಳು ಪೂರ್ವದಲ್ಲಿ ತಾನು ದಾರಾಸಲಾಮದಲ್ಲಿಯ ರಜವಿಯ ಕಚೇರಿಗೆ ಹೋದಾಗ, ಅವರು ತಾವು ಹೇಳಿದಂತೆ ಮಾಡಲು ಯಾರೂ ಸಿಕ್ಕಲೊಲ್ಲರೆಂದು ನುಡಿದರೆಂದೂ ಹೀಗೆ ಆಗುವದೆಂದರೆ ದೈವದುರ್ವಿಪಾಕವೇ ಸರಿಯೆಂದು ತಾನು ಉತ್ತರಿಸಿದುದಾಗಿಯೂ ಅವನು ಹೇಳಿದನು ಆ ಬಳಿಕ ಒಂದೆರಡು ತಿಂಗಳನಂತರ ಮತ್ತೆ ರಜವಿಯವರಲ್ಲಿಗೆ ಹೋದಾಗ, ಶೋಯಬುಲ್ಲಾಖಾನರ ಕೊಲೆಯ ವಿಷಯ ಪ್ರಸ್ತಾಪಿಸಿ ಅವರ ಧೋರಣ ಮುಸಲ್ಮಾನರಿಗೆ ವಿಘಾತಕವಾಗಿದೆ, ನನ್ನ ಧೋರಣವನ್ನು ಅವರು ಟೀಕಿಸುತ್ತಾರೆ; ಅವರನ್ನು ಮುಗಿಸಿಬಿಡುವದೇ ಲೇಸಾಗಿ ತೋರುವದು ಎಂದು ಮುಂತಾಗಿ ಹೇಳಿದರು. ಈ ತರದ ಹೀನಕೃತ್ಯ ನನ್ನಿಂದ ಶಕ್ಯವಿಲ್ಲೆಂದು ತಾನು ಹೇಳಿ ವೃದ್ಧ ತಾಯಿತಂದೆ ಹಾಗು ಅಣ್ಣಂದಿರ ಭಾರ ನನ್ನ ಮೇಲೆ ಇದೆಯೆಂದು ಹೇಳಿದೆನು. ನೀನೇ ಕೊಲ್ಲಬೇಕೆಂದಲ್ಲ, ನಿನ್ನ ಭಾಗದಲ್ಲಿಯ ಯಾರದೇ ರಜಾಕಾರರಿಂದ ಅವರ ಕೊಲೆಯಾಗಲೆಬೇಕು ಎಂದು ಅವರು ಮತ್ತೆ ನನ್ನನ್ನು ಒತ್ತಾಯಪಡಿಸಿದರು. ಅಂಥ ಪುಂಡರ ಪರಿಚಯ ನನಗೆ ಇಲ್ಲವೆಂದು ನಾನು ಹೇಳಿದರೂ ಅಧ್ಯಕ್ಷರ ಅಪ್ಪಣೆಯನ್ನು ಮೀರುವ ಧೈರ್ಯ ನನ್ನಲ್ಲಿ ಉಳಿಯಲಿಲ್ಲ. ಕೊಲೆಯ ೬–೮ ದಿನಗಳ ಪೂರ್ವದಲ್ಲಿ ಟೆಲಿಫೋನ ಕರೆಯಂತೆ ನಾನವರಲ್ಲಿಗೆ ಹೋದೆ. ಆಗ ಮತ್ತೆ ಅವರು ಶೋಯಬುಲ್ಲಾಖಾನರ ಕೊಲೆಯ ಮಾತನ್ನೆತ್ತಿದರು. ಪರಿಸ್ಥಿತಿ ಗಂಭೀರವಾಗಹತ್ತಿದ್ದರಿಂದ ಈ ಕೆಲಸವನ್ನು ಬೇಗ ಮುಗಿಸಿಬಿಡಬೇಕೆಂದು ಹೇಳಿದರು. ಇಲ್ಲವಾದರೆ ಪರಿಣಾಮವು ಭೀಕರವಾಗುವದೆಂದೂ ಹೇಳಿ ನನ್ನ ಕೈಯಲ್ಲಿ ಒಂದು ಪಿಸ್ತೂಲು ಕೊಟ್ಟರು. ಒಳಗೆ ೧೨ ಕಾಡತೂಸು ಹಾಕಿ ಅದರ ಉಪಯೋಗ ಹೇಗೆ ಮಾಡಬೇಕೆಂಬುದನ್ನೂ ತಿಳಿಸಿದರು. ಶೋಯಬುಲ್ಲಾಖಾನರ ಕೊಲೆ ಮಾಡಲು ಸಿದ್ಧರಾಗಿ ಬಂದ ಮುಖೀಮಖಾನ ಮತ್ತು ಮೊಹಸೀನರಾಜಾ ಇವರು ಪಿಸ್ತೂಲು ಕೊಡಲಾದ್ದನ್ನು ತೆಗೆದುಕೊಂಡು ಹೋದರು. ಅಗಸ್ಟ ೨೧–೨೨ ರಾತ್ರಿ ೧–೩೦ ಗಂಟೆಗೆ ಇಲ್ಲವೆ ೨ ಕ್ಕೆ ಇವರಿಬ್ಬರೂ ಝುಮೀರುದ್ದೀನ ಎಂಬ ಹುಡುಗನೊಂದಿಗೆ ನನ್ನ ಮನೆಗೆ ಬಂದಾಗ ಇವರಿಬ್ಬರ ಬಟ್ಟೆಗಳು ರಕ್ತದಿಂದ ತೊಯ್ದಿದ್ದವು. ಇಮ್ರೋಜ ಕಚೇರಿಯಿಂದ ಶೋಯಬುಲ್ಲಾಖಾನರು ಬೇರೆ ಒಬ್ಬರೊಂದಿಗೆ ಹೊರಟಾಗ ತಾನು ಅಡ್ಡಗಟ್ಟಿ ಅವರ ಬೆನ್ನಿಗೆ ಪಿಸ್ತೂಲು ಹಾಕಿದ್ದಾಗಿಯೂ ಗುಂಡು ಬಡೆದ ಕೂಡಲೆ ಶೋಯಬುಲ್ಲಾಖಾನರು ಕೆಳಗೆ ಬಿದ್ದು ತನ್ನ ಕಾಲು ಹಿಡಿದದ್ದಾಗಿಯೂ ಆಗ ಝುಮೀರುದ್ದೀನನು ಮೊಹಸೀನರಾಜಾನ ಕೈಯೊಳಗಿನ ಖಡ್ಗವನ್ನು ತೆಗೆದುಕೊಂಡು ಶೋಯಬುಲ್ಲಾಖಾನನ ಮತ್ತು ಅವನ ಸಂಗಡಿಗನ ಕೈಗಳನ್ನು ಕತ್ತರಿಸಿ ಮುಖೀಮಖಾನನನ್ನು ಬಿಡಿಸಿ ಹೊರಟುಬಂದದ್ದಾಗಿಯೂ ಆಗ ಅಬ್ದುಲ್ ಮುಖೀಮಖಾನನು ನನಗೆ ಹೇಳಿದನೆಂದು ಮಾಫಿ ಸಾಕ್ಷಿದಾರನು ತನ್ನ ಸಾಕ್ಷಿಯಲ್ಲಿ ಹೇಳಿದನು.

ಪ. ಬಂಗಾಲದಲ್ಲಿ ವಿಶೇಷ ಕೋರ್ಟುಗಳು

ಪ. ಬಂಗಾಲದಲ್ಲಿಯ ವಿಘಾತಕ ಚಟುವಟಿಕೆಗಳಿಂದ ಉದ್ಭವವಾದ ಪ್ರಕರಣಗಳನ್ನು ಶೀಘ್ರ ನಿರ್ಣಯಿಸುವದಕ್ಕಾಗಿ ಗವರ್ನರರು ವಿಶೇಷ ಕೋರ್ಟುಗಳನ್ನು ನಿರ್ಮಿಸುವದರ ಸಂಬಂಧದ ಸುಗ್ರೀವಾಜ್ಞೆಯೊಂದನ್ನು ಹೊರಡಿಸಿರುವರು. ಈ ಕೋರ್ಟನಲ್ಲಿ ಆರೋಪಿಗಳು ಗೈರಹಾಜರಿದ್ದರೂ ವಿಚಾರಣೆ ನಡೆಸಲು ಆರೋಪಿಗಳು ಹೇಳಿಕೊಟ್ಟ ಬಳಿಕ ಉಳಿದ ಸಾಕ್ಷಿಗಳು ಅವಶ್ಯವಿಲ್ಲೆಂದು ಎನಿಸಿದರೆ ಸಾಕ್ಷಿದಾರರನ್ನು ಕರೆಯಿಸಲು: ನಿರಾಕರಿಸಲು ಈ ಸುಗ್ರೀವಾಜ್ಞೆಯಿಂದ ಕೋರ್ಟುಗಳಿಗೆ ಅಧಿಕಾರ ಕೊಡಲಾಗಿದೆ ಅಲ್ಲದೆ ವಿಚಾರಣೆಯ ಕಾಲದಲ್ಲಿ ಸಾರ್ವಜನಿಕರನ್ನಾಗಲಿ ಯಾವನೊಬ್ಬ ಸದ್ಗೃಹಸ್ಥನನ್ನಾಗಲಿ ಕೋರ್ಟನಲ್ಲಿ ಬರಗೊಡದಿರುವ ಅಧಿಕಾರವಿದೆ. ಕೋರ್ಟನಿಂದ ಯಾವನೊಬ್ಬ ಆರೋಪಿಗೆ ದಂಡವಾದರೆ ಜಪ್ತಿ ಇಲ್ಲವೆ ಅವನ ಆಸ್ತಿಯ ಮಾರಾಟದಿಂದ ಅದನ್ನು ವಸೂಲ ಮಾಡಿ ಅವನಿಂದ ಹಾನಿ ಇಲ್ಲವೆ ತೊಂದರೆಗೀಡಾದವರಿಗೆ ಪರಿಹಾರ ಕೊಡುವ ವ್ಯವಸ್ಥೆ ಮಾಡಲಾಗುವದು.

ಭಾರತೀಯರು ಹಡಗುಗಳಿಗೆ ಹೊಸಬರಲ್ಲ

ವೇದಕಾಲದಿಂದಲೂ ಸಾಹಸಿಗಳಾದ ನಾವಿಕರು

ಭಾರತೀಯರು "ಕಾಲಾ ಪಾನೀ" ಎಂದು ಸಮುದ್ರಯಾನವನ್ನು ನಿಷೇಧಿಸಿದ್ದರೆಂದು ಇತಿಹಾಸ ಪುಸ್ತಕಗಳು ತಿಳಿಸುತ್ತವೆ. ಹೀಗಾಗಿ ಭಾರತದಲ್ಲಿ ನೌಕಾಯಾನವೆಂಬುದೇ ಇದ್ದಿಲ್ಲವೆಂಬ ಭ್ರಾಂತಿ ಮೂಡಲವಕಾಶವಾಗಿದೆ. ಆದರೆ ವಸ್ತುಸ್ಥಿತಿ ಬೇರೆಯೆ. ಇತಿಹಾಸ ಪುಸ್ತಕಗಳು ನಮ್ಮ ಸಮುದ್ರಯಾನ ಸಾಹಸಗಳನ್ನು ಬಣ್ಣಿಸಿರದಿದ್ದರೂ ಏನಿಲ್ಲೆಂದರೂ ಇಪ್ಪತ್ತು ಶತಕಗಳ ಹಿಂದೆ ಕೂಡ ಭಾರತೀಯರಿಗೆ ನೌಕಾಶಾಸ್ತ್ರ ಚೆನ್ನಾಗಿ ಗೊತ್ತಿತ್ತೆಂದೂ ಇಂದಿನ ಎಷ್ಟೋ ಪ್ರಬಲ ರಾಷ್ಟ್ರಗಳು ಅನಾಗರಿಕಾವಸ್ಥೆಯಲ್ಲಿದ್ದಾಗ ನಾವು ಜಗತ್ತಿನ ಪ್ರಮುಖ ಸಮುದ್ರ ಸಾಹಸಿಗಳಾಗಿದ್ದೆವೆಂದೂ ಅನೇಕ ಪ್ರಮಾಣಗಳ ಬಲದಿಂದ ತೋರಿಸಿಕೊಡಬಹುದು.

ಋಗ್ವೇದದ ನಿರ್ಮಾಣ ಕಾಲವನ್ನು ಯಾವ ವಿದ್ವಾಂಸನೂ ೪೫೦೦ ವರ್ಷಗಳಿಗಿಂತ ಈಚಿನದೆಂದು ಹೇಳಿಲ್ಲ. ಅದರಲ್ಲಿ ಕೂಡ "ಸಮುದ್ರದಲ್ಲಿರುವ ಹಡಗನ್ನು ದೂರದ ದಡಕ್ಕೆ ಕಳಿಸುವಂತೆ ನಮ್ಮ ಶತ್ರುಗಳನ್ನು ಅಟ್ಟಿಬಿಡು" ಎಂಬವೇ ಮೊದಲಾದ ಉಲ್ಲೇಖಗಳು ಋಗ್ವೇದದ ಋಷಿಗಳಿಗೆ ಹಡಗುಗಳು ಪರಿಚಿತವಾಗಿದ್ದವೆಂಬುದಕ್ಕೆ ಸಾಕ್ಷಿಯಾಗಿವೆ.

ಸಂಸ್ಕೃತ, ಪಾಲಿ ಸಾಹಿತ್ಯಗಳಲ್ಲಿ ಸಪ್ತಸಾಗರಗಳಲ್ಲಿ ಭಾರತೀಯ ನಾವಿಕರ ಸಾಹಸಗಳನ್ನು ವರ್ಣಿಸುವ ಭಾಗಗಳೆಷ್ಟೋ ಸಿಗುತ್ತವೆ. ಹಡಗಿನಲ್ಲಿ ಸರಕುಗಳನ್ನು ಹೇರಿ ದೂರದ ದೇಶಗಳಲ್ಲಿ ವ್ಯಾಪಾರ ಮಾಡಿ ಹಣ ಗಳಿಸಿದ ನಮ್ಮ ವೈಶ್ಯರ ಕತೆಗಳು ಬೇಕಾದಷ್ಟು ದೊರೆಯುತ್ತವೆ. ರಾಮಾಯಣದಲ್ಲಿ ಜಾವಾ (ಯವ) ಮತ್ತು ಸುಮಾತ್ರ ದ್ವೀಪಗಳ ಉಲ್ಲೇಖವಲ್ಲದೆ ಅಯೋಧ್ಯಾಕಾಂಡದಲ್ಲಿ ನೌಕಾಯುದ್ಧದ ವರ್ಣನೆಯೂ ಬರುವದರಿಂದ ಕ್ರಿಸ್ತಶಕಾರಂಭದ ಮೊದಲೇ ಯುದ್ಧಕ್ಕೂ ಹಡಗುಗಳನ್ನು ಬಳಸುವ ರೂಢಿಯಿತ್ತೆಂದು ವ್ಯಕ್ತವಾಗುತ್ತದೆ. ಮಹಾಭಾರತದಲ್ಲಿ ಸಹದೇವನು ದ್ವೀಪಾಂತರಗಳ ಮ್ಲೇಚ್ಛರನ್ನು ಗೆದ್ದ ಕತೆಯೂ ಕಥಾಸರಿತ್ಸಾಗರದಲ್ಲಿ ಮಲಯದ ಸಮುದ್ರತೀರಕ್ಕೆ ನಮ್ಮ ಹಡಗುಗಳು ಹೋಗುತ್ತಿದ್ದುದರ ವರ್ಣನೆಯೂ ಕಾಣಬರುವವು.

ವಿದೇಶೀಯರ ಸಾಕ್ಷಿ

ವಿದೇಶೀ ಸಾಹಿತ್ಯಗಳಲ್ಲೂ ಭಾರತವೇ ಪೂರ್ವಸಾಗರಗಳ ಒಡೆಯನಾಗಿತ್ತೆಂಬುದನ್ನು ಸಿದ್ಧಪಡಿಸುವ ಉಲ್ಲೇಖಗಳಿವೆ. ಪ್ಲಿನಿ, ಟೋಲೆಮಿ, ಹೆರಡೊಟಸ್ ಮೊದಲಾದವರು ನಮ್ಮ ಸಾಮುದ್ರಿಕ ವಾಣಿಜ್ಯದ ಮಾತೆತ್ತಿದ್ದಾರೆ. ಪ್ರಸಿದ್ಧ ವಿಶ್ವಸಂಚಾರಿ ಮಾರ್ಕೊ ಪೋಲೋನ ಹೇಳಿಕೆಯ ಮೇರೆಗೆ ೩೦೦-೪೦೦ ಜನ ನಾವಿಕರು ಬೇಕಾಗುವಂಥ ಭಾರೀ ನೌಕೆಗಳನ್ನು ಭಾರತೀಯರು ಉಪಯೋಗಿಸುತ್ತಿದ್ದರು. ತಮಿಳು ಮತ್ತು ಗ್ರೀಕ್–ರೋಮನ್ ಸಾಹಿತ್ಯಗಳಲ್ಲಿ ಚೋಳ ರಾಜ್ಯದವರು ಕ್ರಿಸ್ತಶಕದ ಆದಿಯ ಶತಕಗಳಲ್ಲಿ ಸಮುದ್ರ ಮೂಲಕ ವ್ಯಾಪಾರನಿರತರಾಗಿದ್ದುದಕ್ಕೆ ಪ್ರಮಾಣಗಳಿವೆಯೆಂದು ವಿನ್ಸೆಂಟ ಸ್ಮಿತ್ತರು ಹೇಳುತ್ತಾರೆ.

ತೀರ ಇತ್ತೀಚೆಗೆ ಕೂಡ, ಭಾರತೀಯ ನೌಕಾಶಿಲ್ಪವು "ಸ್ಥಿರತೆ ಮತ್ತು ಕಾರ್ಯ ಕೌಶಲದ ಉತ್ತಮ ಮಾದರಿ" ಗಳಾಗಿದ್ದವೆಂದು ೧೯ ನೆ ಶತಕದ ಲೇಖಕರಾದ ಎಫ್. ಬಲ್ತಾಜರರು ಹೇಳಿದ್ದಾರೆ. ಹಡಗು ಕಟ್ಟುವ ವಿದ್ಯೆಯಲ್ಲಿ ಇಂಗ್ಲೀಷರು ಹಿಂದೀಯರಿಂದ ಎಷ್ಟೋ ಕಲಿತರೆಂದು ಅವರು ಒಪ್ಪಿದ್ದಾರೆ.

ಕ್ರಿಸ್ತಶಕದ ಪೂರ್ವದಲ್ಲಿಯೆ ಪರ್ಶಿಯ, ಅರಬಸ್ತಾನ ಮತ್ತು ಆಫ್ರಿಕೆಗಳಲ್ಲಿ ಮಾತ್ರವಲ್ಲ, ಕಂಬೋಜ, ಜಾವಾ, ಸುಮಾತ್ರ ಮೇಗುಗಳಲ್ಲಿ ಕೂಡ ಭಾರತೀಯರ ವಸತಿಗಳಿದ್ದುವೆಂದು ಸಿದ್ಧವಾಗಿರುವಾಗ ನಮ್ಮ ನೌಕಾವಿದ್ಯೆಗೆ ಹೆಚ್ಚಿನ ಪ್ರಮಾಣವೇ ಅವಶ್ಯವಿಲ್ಲ. ಬರಿ ಕರಾವಳಿ ಹಡಗುಗಳಲ್ಲದೆ ಸಾಗರಮಾರ್ಗಿ ಹಡಗುಗಳೂ ನಮ್ಮಲ್ಲಿದ್ದುವೆಂಬಲ್ಲಿ ಸಂದೇಹವೇ ಇಲ್ಲ.

ಅಷ್ಟೇಕೆ, ಭಾರತೀಯ ನೌಕಾ ಶಿಲ್ಪದ ಮೂಲ ಪುರುಷನಾದ ಅಗಸ್ತ್ಯ ಋಷಿಯನ್ನು ಇಂದಿಗೂ ಜಾವ ಮತ್ತು ಜಪಾನುಗಳಲ್ಲಿ ಆರಾಧಿಸುತ್ತಿರುವರು. ಸಮುದ್ರವನ್ನು ಕುಡಿದನೆಂದು ಇವನ ಕೀರ್ತಿ; ಕುಡಿಯುವಷ್ಟೇ ಲೀಲಾಜಾಲವಾಗಿ ಸಮುದ್ರವನ್ನು ದಾಟಬಲ್ಲ ಹಡಗುಗಳನ್ನು ಈತನು ಕಟ್ಟಿಸಿರಬಹುದೆ?

ಸಿಂಹಲ ವಿಜಯ

ಚೋಳದ ಚಕ್ರವರ್ತಿಗಳು ನಿಕೋಬಾರ ದ್ವೀಪಗಳಲ್ಲಿ ನಿಲ್ದಾಣಗಳನ್ನು ಸ್ಥಾಪಿಸಿ ಮಲಯದ ಕರಾವಳಿಯ ಮೇಲೂ ಪ್ರಭುತ್ವ ನಡೆಸುತ್ತಿದ್ದರು. ಬಂಗಾಲದ ಶೈಲೇಂದ್ರ ಅರಸರ ಹಡಗುಪಡೆ ಪ್ರಸಿದ್ಧವಾಗಿತ್ತು. ಸಿಂಹಳವನ್ನು ಜಯಿಸಿದ ವಿಜಯಸಿಂಹ ಶೈಲೇಂದ್ರನು ೧೫೦೦ ಜನರನ್ನು ತುಂಬಿಕೊಂಡು ಹೋಗಬಲ್ಲ ಹಡಗಿನಲ್ಲಿ ಹೋಗಿ ಸಿಂಹಲದ ದಕ್ಷಿಣ ಕರೆಯಿಂದ ಅದನ್ನು ಮುತ್ತಿದನೆಂದು ಹೇಳಲಾಗಿದೆ.

ಕ್ರಿಸ್ತಪೂರ್ವ ೩ ನೆ ಶತಕದ ಮೌರ್ಯರ ಆಳಿಕೆಯಲ್ಲಿ ಪ್ರಬಲವಾದ ನೌಕಾ ಪಡೆ ನಮಗಿದ್ದುದಕ್ಕೆ ನಾಗರಿಗೆ ಅಶೋಕನು ಬರೆಸಿಕೊಟ್ಟ ಸಮುದ್ರ ಶಾಸನ ಸಾಕ್ಷಿಯಾಗಿದೆ.

ಕಲ್ಲಿಕೋಟೆಯ ಝಮೋರಿನರು ಕೆಂಪು ಸಮುದ್ರದ ವರೆಗಿನ ಸಮುದ್ರ ವಾಣಿಜ್ಯವನ್ನು ನಿಯಂತ್ರಿಸುತ್ತಿದ್ದರು. ಅಬುಲ-ಫಜಲಿನ ಮೇರೆಗೆ ಪಶ್ಚಿಮ ಕರಾವಳಿಯ ಥಟ್ಟಾ (ಸಿಂಧ) ರೇವಿನಲ್ಲಿ ೪೦೦೦೦ ಹಡಗುಗಳು ಏಕಕಾಲದಲ್ಲಿ ಬಾಡಿಗೆಗೆ ಸಿದ್ಧವಾಗಿರುತ್ತಿದ್ದವು.

೧೩೩೧ ರಲ್ಲಿ ಫ್ರಿಯರ್ ಒಡೋರಿಕ್ಕನೆಂಬ ಪ್ರವಾಸಿ ಹಿಂದೀ ಸಾಗರದಲ್ಲಿ ತಾನು ಮಾಡಿದ ಪ್ರಯಾಣದ ವರ್ಣನೆ ಮಾಡಿದ್ದಾನೆ. ೭೦೦ ಜನರನ್ನು ಹೊತ್ತು ಈ ಹಡಗು ನಡೆಸಿದ ಪ್ರವಾಸ ಗುಜರಾಥದ ರಜಪೂತ ನಾವಿಕರ ಸಾಹಸಕ್ಕೆ ಸಾಕ್ಷಿಯಾಗಿದೆಯೆಂದು ಅತ ಪ್ರಶಂಸಿಸಿದ್ದಾನೆ.

ಅಕಬರನ ಕಾಲದಲ್ಲಿ ಮೊಗಲರು ಒಂದು ನೌಕಾಶಾಖೆಯನ್ನೇ ನಿರ್ಮಿಸಿದ್ದರು. ಹಡಗು ಕಟ್ಟುವದು, ನಾವಿಕರನ್ನು ತರಬೇತುಗೊಳಿಸುವದು ಮತ್ತು ಕರಾವಳಿಯನ್ನು ಕಾಯುವದು ಅದರ ಕರ್ತವ್ಯಗಳಾಗಿದ್ದವು.

ಶಿವಾಜಿಯ ಕಾಲದಲ್ಲಿ

ಶಿವಾಜಿಯ ವಿಜಯಕ್ಕೆ ಅವನ ಭೂದಾಳಿಗಳಷ್ಟೇ ಸಮುದ್ರದಾಳಿಗಳೂ ನೆರವಾದವು. ವಿಜಯದುರ್ಗ, ಕೊಲಾಬಾ, ಸಿಂಧುದುರ್ಗ, ರತ್ನಾಗಿರಿ, ಅಂಜನವಾಲಾ ರೇವುಗಳಲ್ಲಿ ಯುದ್ಧ ಹಡಗುಗಳನ್ನು ಅವನು ಕಟ್ಟಿಸುತ್ತಿದ್ದನು. ಮರಾಠಾ ಹಡಗುಪಡೆಯ ನಾಯಕರಾದ ಕೋನಾಜಿ ಅಂಗ್ರಿಯಾ ಮತ್ತು ತುಲಾಜಿ ಇವರ ಕಾಲದಲ್ಲಿ ಆ ಪಡೆ ಬಹಳ ಬಲಶಾಲಿಯಾಗಿ ಕೊಚ್ಚಿಯ ವರೆಗೂ ತನ್ನ ಪ್ರಭಾವ ತೋರಿಸುತ್ತಿತ್ತು. ೧೭೫೬ ರಲ್ಲಿ ತುಲಾಜಿಯ ಹಡಗುಪಡೆಯು ಕೈಯಲ್ಲಿ ಡಚ್ಚರು ದೊಡ್ಡ ಸೋಲನ್ನು ಪಡೆದು ಮದ್ದುಗುಂಡು ತುಂಬಿದ ಒಂದು ಮತ್ತು ಇನ್ನೆರಡು ಹಡಗುಗಳನ್ನು ಕಳೆದುಕೊಂಡರು.

ಈಚೆಗಿನ ಶತಕಗಳಲ್ಲಿ ನಾವು ದಾಸ್ಯವನ್ನನುಭವಿಸಬೇಕಾಗಿ ಬಂದುದರಿಂದ ನಮ್ಮ ಈ ಹಳೆಯ ಸಂಪ್ರದಾಯದಲ್ಲೊಂದು ಬಿರುಕುಂಟಾಗಿತ್ತು. ಆದರೂ ಬ್ರಿಟಿಶರು ಕೂಡ ಭಾರತಕ್ಕೆ ಹಡಗುಗಳ ಅವಶ್ಯಕತೆಯನ್ನು ಮನಗಂಡು ಭಾರತೀಯ ನೌಕಾಪಡೆಯನ್ನು ಸ್ಥಾಪಿಸಿದರು. ಅದು ಇತರ ಮುಂದುವರಿದ ದೇಶಗಳ ಹೋಲಿಕೆಯಲ್ಲಿ ಚಿಕ್ಕದೇ ಆದರೂ ೩೦ ಶತಕಗಳ ವರೆಗೆ ಹಿಂದೀ ಸಾಗರದ ಅಪ್ರತಿಹತ ಒಡೆಯರಾಗಿದ್ದ ನಮಗೆ ಈ ಸಾಹಸದ ಹಿನ್ನೆಲೆಯಿದೆ. ನಮ್ಮ ಹಡಗುಗಳ ಬಲದಿಂದಲೇ ನಾವು ದೂರ ದೇಶಗಳಲ್ಲಿ ನಮ್ಮ ಸಂಸ್ಕೃತಿಯ ಕುರುಹುಗಳನ್ನು ನಟ್ಟಿದ್ದೇವೆ. ಆ ಪರಂಪರೆಯ ಉಜ್ಜೀವನವಾಗಿ ಭಾರತವು ತಿರುಗಿ ತನ್ನ ಹಳೆಯ ನೌಕಾವೈಭವಕ್ಕೆ ಮರಳುವಂತಾಗಬೇಕೆಂದು ನಮ್ಮ ನಾಯಕರ ಹಿರಿಯಾಸೆ.

(ಹಿಂದುಸ್ಥಾನ ಟೈಮ್ಸಿನ ಆಧಾರದಿಂದ)

● ನಾಗಪುರ–ರೈನಪುರಗಳ ನಡುವೆ ನಿಯಮ ವಿರುದ್ಧವಾಗಿ ರೈಲಿನ ಎರಡನೆ ವರ್ಗದಲ್ಲಿ ಪ್ರವಾಸ ಮಾಡುತ್ತಿದ್ದ ಒಬ್ಬ ಸಂಚಾರಿ ಟಿಕೇಟ ಕಲೆಕ್ಟರನನ್ನು ರೈನಪುರದ ಡಿಟಿಎಸ್ ರಾದ ಎ. ಎಸ್. ಲತೀಫರು ಕೆರಬೋ ಸ್ಟೇಶನ್ನಿನಲ್ಲಿ ಹಿಡಿದು ಅವರಿಂದ ಎರಡನೆ ವರ್ಗದ ದರದಂತೆ ಹಣ ವಸೂಲು ಮಾಡಿದರು.

— ಹಿತವಾದ

ಚಿತ್ರಗಳಲ್ಲಿ ಭಾರತದ ಪ್ರಗತಿ

ನೆಲಮಟ್ಟಕ್ಕಿಂತ ೭ ೦ ಅಡಿ ಕೆಳಗೆ: ಮೈಸೂರಿನ ಕಲ್ಲಿದ್ದಲ ಗಣಿಯೊಂದರಲ್ಲಿ ...ಗಾರರು ಬಂಡೆಗಲ್ಲನ್ನು ಕೊರೆಯುತ್ತಿರುವದು.

ದಾಮೋದರ ಕಣಿವೆಯ ಯೋಜನೆ: ಹೀರಾಪುರಿ ಯೋಜನೆಗಳಲ್ಲೆಲ್ಲ ದು... ...ಸಿದ ದಾಮೋದರ ನದಿಯ ಆಣೆಕಟ್ಟಿನ ಕಾರ್ಯದಲ್ಲಿ ನದೀ ತಳದ ಉಸುಬನ್ನು ಹಗ್ಗದ ... ...ದಿಂದ ಸಾಗಿಸುವದು.

ಕಾಶ್ಮೀರದ ಸಾಹಸಿಗೆ ಬಹುಮಾನ: ಪೂಂಛ ನಗರದೊಳಗೆ ಸುಸರ್ ಜಿ... ಸಾಹಸ ತೋರಿದ ಭಾರತ ಸೈನ್ಯದ ಬ್ರಿಗೇಡಿಯರ್ ಉಸ್ಮಾನ ಸಿಂಗರಿಗೆ ನೆ... ಅತ್ತಿಸಿಂಗರ ಅಭಿನಂದನೆ.

ಇದು ಭಾರತ!

● ಮದ್ರಾಸಿನ ನ್ಯಾಯ ಮತ್ತು ಕಾರಾಗೃಹ ಶಾಖೆಗಳ ಮಂತ್ರಿ ಮಾಧವ ಮೆನನ್ನರಿಗೆ ಕಮ್ಯುನಿಸ್ಟರ "ಜನತಾ ನ್ಯಾಯಾಲಯವು" ಮರಣದಂಡನೆ ವಿಧಿಸಿದೆಯಂತೆ. ಈ ಸುದ್ದಿಯನ್ನು ಮಾನ್ಯ ಮಂತ್ರಿಗಳೇ ಹೊರಗೆಡಹಿ ತಮ್ಮನ್ನು ಕೊಲ್ಲುವದಾಗಿ ಬೆದರಿಸುವ ಪತ್ರಗಳೂ ಬರುತ್ತಿವೆಯೆಂದು ತಿಳಿಸಿದ್ದಾರೆ.

— ಯು. ಪಿ. ಐ.

● ಬನಾರಸ ಜಿಲ್ಲೆಯ ಮೊಗ... ...ಯಲ್ಲಿ ಹೊಸ ಮಾದರಿಯ ಮಲೇರಿ... ಪ್ರಾರಂಭವಾಗಿದೆ. ಈಚೆಗೆ ಮೂ... ...ಗಳಿಂದ ಒಂಭತ್ತು ಮಕ್ಕಳನ್ನು (... ...ಕ್ಕಿಂತ ಕಡಿಮೆ,) ಆಹುತಿಗೊಂ... ಪ್ರಾರಂಭವಾದ ಜಕ್ಕೀ ಕಾಹಿನೊಳಗೆ... ...ಯನ್ನು ಕೊಲ್ಲುತ್ತದೆ. ಒಮ್ಮೆಲೇ ೧೦... ...ವರೆಗೂ ಜ್ವರ ಏರುತ್ತದೆ. ಇದ... ...ವನ್ನು ಸರಿಯಾಗಿ ಮಾಡುವದು ... ...ಇನ್ನೂ ಸಾಧ್ಯವಾಗಿಲ್ಲ. — ...

ವಿಚಾರ ದ್ವಂದ್ವ

ಈ ಅಂಕಣದಲ್ಲಿ [illegible] ಅಭಿಪ್ರಾಯಗಳನ್ನು [illegible] ... ಇಲ್ಲಿ ಬಂದ ವಿಷಯಗಳ ಬಗ್ಗೆ ಅನುಕೂಲ ಮತ್ತು ಪ್ರತಿಕೂಲ ಅಭಿಪ್ರಾಯಗಳನ್ನು ಓದುಗರು ಬರೆದು ಕಳಿಸಿದರೆ ಸ್ವಾಗತಿಸಲಾಗುವದು. —ಸಂ.

*

ಬೀಡಿ

ಬೀಡಿ! ಇದೊಂದು ನಿತ್ಯೋಪಯೋಗಿ "ಬಹರಿ" ವಸ್ತು. ಇದು ಪೌರಾಣಿಕ ಮತ್ತು ಇತಿಹಾಸಿಕ ಕಾಲಗಳಿಂದ ಪರಂಪರಾಗತವಾಗಿ ನಡೆದು ಬಂದು ರಕ್ತಗತ. ರೂಢಿಗತವಾದ ಚಟವಿರದೆ ಇತ್ತೀಚೆಗೆ ಒಂದು ಶತಮಾನದಿಂದ ಬಳಕೆಯಲ್ಲಿ ಬಂದ ದುಶ್ಚಟವೆಂದು ಹೇಳಿಸಿಕೊಳ್ಳುತ್ತಿದ್ದರೂ ಅದೊಂದು ಸಾವಿರಾರು ಜನರಿಗೆ ಅನ್ನ ಕೊಡುವ ಉದ್ಯೋಗವಾಗಿ ಪರಿಣಮಿಸಿ ಲಕ್ಷಾಂತರ ಜನರಿಗೆ ತೃಪ್ತಿದಾಯಕ ವಸ್ತುವಾಗಿ, ಪರಸ್ಪರ ಸಂದರ್ಶನದಲ್ಲಿ ಸ್ವಾಗತವಸ್ತುವಾಗಿ, ಹೊಸ ಸ್ನೇಹಿತರನ್ನೂ ಸ್ನೇಹವನ್ನೂ ಕಲ್ಪಿಸಿಕೊಡುವ ಸಾಧನವಾಗಿ ನಿಂತಿದೆ. ಇಂತಹ ಸರ್ವೋಪಯೋಗಿ ವಸ್ತುವನ್ನು ತೆಗಳಬೇಕೇ ಹೊಗಳಬೇಕೇ?

ತಂಬಾಕು ನಮ್ಮ ದೇಶಕ್ಕೆ ಪಾಶ್ಚಿಮಾತ್ಯರ ಕಾಲದಿಂದ ಬಂದದ್ದಾದರೂ ಅದನ್ನು ಬೀಡಿಯ ರೂಪಕ್ಕೆ ಮಾರ್ಪಡಿಸಿ ಶತಮಾನ ವಷ್ಟೆ ಆಗಿರುತ್ತದೆ. ಅದರ ಉಪಯೋಗವು ಜನತೆಯಲ್ಲಿ ಬಂದು ಅದಕ್ಕೆ ಬೇಕಾದ ಸಾಧನಗಳು ಅತೀವ ಕಡಿಮೆ ಬೆಲೆಗೆ ದೊರೆಯುವಂತೆ ಮಾಡಿದ ಸಾಹಸವು ಬಂಗಾಲಿಗಳಿಗೆ ಸಲ್ಲುತ್ತದೆ. ಹಿಂದುಸ್ಥಾನದಲ್ಲಿ ರಾಯಪುರದ ಕಡೆಗೆ ಬೆಳೆಯುವಷ್ಟು ತುಮರಿ ಎಲೆ (ಬೀಡಿಎಲೆ) ಬೇರಾವ ಕಡೆಯಲ್ಲಿಯೂ ಸಿಗುವುದಿಲ್ಲ. ಸಾಮಾನ್ಯ ಮೂರು ಪೈಗೆ ಐದಾರು ಬೀಡಿಗಳು ಸಿಗಬೇಕಾದರೆ ಅದನ್ನು ಅಷ್ಟೆ ಅಗ್ಗವಾಗಿ ತಯಾರಿಸುವ, ಅವರಿಂದಲೇ ಎಲೆಯಿಂದ ಹೊಗೆಯ ವರೆಗೆ ಬೀಡಿಯನ್ನೇ ದೇವರಾಗಿ ಮಾರ್ಪಡಿಸಿದ್ದಕ್ಕೆ ಅವರಿಗೆ ಧನ್ಯವಾದಗಳು.

ಬೀಡಿಯು ಸುಲಭೋದ್ಯೋಗ. ಕಷ್ಟದ ಕೆಲಸವಲ್ಲ. ಮೈ ಕೈಗಳಿಗೆ ಕೆಸರು ಸೋಂಕುವ ಭಯವಿಲ್ಲ. ಬೆಳಗ್ಗಿನಿಂದ ಸಂಜೆಯ ತನಕ ಬೀಡಿ ಕಟ್ಟಿ ಸಂಜೆಗೊಂದು ಸಿನೇಮಾ ನೋಡಿ ಸಿನೇಮಾದ ಪ್ರಣಯಕತೆಯ ಪ್ರಯೋಗದಲ್ಲಿ ತಾವೂ ನಟರಾಗಿ ಜೀವನ ಸಾಗಿಸುವುದು ಬೀಡಿ ಕಟ್ಟುವವರ ದಿನಚರಿ. ಹೀಗೆ ಶಾರೀರಿಕ ಶ್ರಮದ ಯಾವದೇ ತೊಡಕಿಲ್ಲದೆ ಜನ್ಮಸಿದ್ಧ ಶಕ್ತಿಯು ಉಪಯೋಗವಾಗದೆ, ಶಕ್ತಿ ಶಿಥಿಲವಾಗಿ ಮನುಷ್ಯನು ಕ್ಷೀಣನಾಗಿ ನಿಸ್ತೇಜನಾಗುತ್ತ ನಡೆದು ಮುಂದೆ ಅವನಿಂದ ಹುಟ್ಟಬಹುದಾದ ಪೀಳಿಗೆಯೂ ಕ್ಷೀಣವಾಗಿ ದೇಶ, ಜನತೆ, ರಾಷ್ಟ್ರಗಳೇ ನಿಸ್ತೇಜವಾಗಿ ನಡೆಯುವುದರಲ್ಲಿ ಸಂದೇಹವಿಲ್ಲ. ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರೊಂದರಲ್ಲೇ ೧೫೦೦೦ ಜನ ಬರಿಯ ಬೀಡಿ ಕಟ್ಟುವ ಉದ್ಯೋಗದಲ್ಲಿ ನಿರತರಾಗಿರುವರೆಂದ ಮೇಲೆ ಅಂತಹ ನೂರಾರು ಊರು, ಜಿಲ್ಲೆ, ಪ್ರಾಂತ, ದೇಶಗಳಲ್ಲಿ ದುಷ್ಪರಿಣಾಮವನ್ನು ಸಮಾಜದಲ್ಲಿ ಪಸರಿಸುವವರೆಷ್ಟು ಮಂದಿ ಇರಬಹುದು?

ಬೀಡಿ ಸೇದುವುದರಿಂದ ಪ್ರಕೃತಿಯು ಕ್ಷಯರೋಗವನ್ನೇ ಆಹ್ವಾನಿಸುತ್ತದೆ. ಇದು ಬೀಡಿ ಭಕ್ತರನ್ನು ಕಂಡಾಗಲೇ ತಿಳಿಯಬೇಕು. ಲಕ್ಷಾಂತರ ಜನರನ್ನು ನಿಸ್ತೇಜಗೊಳಿಸಿ ರಾಷ್ಟ್ರವನ್ನು ದುರ್ಬಲಗೊಳಿಸುವ ಈ ಬೀಡಿಯನ್ನು ಅರ್ಥಾತ್ ಬೀಡಿಯ ಉದ್ಯೋಗವನ್ನು ಸಮಾಜ ಸುಧಾರಕರೂ ಸರಕಾರವೂ ಸೇರಿ ಪ್ರತಿಬಂಧಿಸಿ, ಬೀಡಿ ಕಟ್ಟುವ ಜನತೆಯನ್ನು ಒತ್ತಾಯಪೂರ್ವಕವಾಗಿ "ಅಧಿಕ ಆಹಾರ ಬೆಳೆ" ಯುಸುವ ಯೋಜನೆಯಲ್ಲಿ ತೊಡಗಿಸಬಹುದು. ಬೇಕು.

ಬ್ರಿಟಿಷರನ್ನೇ ಓಡಿಸಿದ ಭಾರತೀಯರು ಮನಸ್ಸು ಮಾಡಿದರೆ ಅವರಿಂದ ಪ್ರಚೋದಿತವಾಗಿ ಸಮಾಜದ ಆರೋಗ್ಯದ ತಳಹದಿಯನ್ನು ಹಾಳು ಮಾಡಿದ ಬೀಡಿಯನ್ನು ಓಡಿಸುವುದು ಕಷ್ಟವಾಗಲಾರದು. ಸಮಾಜವಾದೀ ಧುರೀಣರಾದ ಶ್ರೀ ರಾಮ ಮನೋಹರ ಲೋಹಿಯಾರು ಹೇಳಿದ "ಆಹಾರ ಸೈನ್ಯ" ರಚನಾ ಯೋಜನೆಗಿಂತಲೂ ಈ ಯೋಜನೆಯು ಹೆಚ್ಚು ಪರಿಣಾಮಕಾರಿಯಾಗಬಹುದೆಂದು ಅನಿಸುತ್ತಿದೆ.

ಶಿರಸಿ, ೭-೮-೪೯ —ಕೆ. ಎಸ್. ರಾವ್

ರಾಜಕೀಯ ಸಂತ್ರಸ್ತರಿಗೆ ಪರಿಹಾರ

೧೯೪೭ ರಲ್ಲಿ ಸ್ವಾತಂತ್ರ್ಯೋತ್ಸವ ಸಂದರ್ಭದಲ್ಲಿ ಸ್ವಾತಂತ್ರ್ಯಕ್ಕಾಗಿ ಹೋರಾಡಿ ಪಾಡುಪಟ್ಟ ರಾಜಕೀಯ ಸಂತ್ರಸ್ತರಿಗೆ ಭೂದಾನ ಪರಿಹಾರ ಕೊಡುವದಾಗಿ ಮದ್ರಾಸು ಸರಕಾರದವರು ಜಾಹೀರು ಮಾಡಿದರಷ್ಟೆ! ಆ ಪ್ರಕಾರವಾಗಿ ಅವಶ್ಯಕ ಪ್ರಮಾಣಗಳ ಸಹಿತ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅನೇಕ ವರ್ಷಗಳಿಂದ ಕಾಂಗ್ರೆಸ್ ಕಾರ್ಯಕರ್ತರಾದ ಶ್ರೀ ಬಿ. ಅರಿಕಯ್ಯ ಸೆಟ್ಟಿರು ಭೂದಾನಕ್ಕೆ ಅರ್ಜಿ ಹಾಕಿದಾಗ ಕೆಲತಿಂಗಳ ನಂತರ ಅವರಿಗೆ "ನಿಮಗೆ ಅರ್ಹತೆ ಇಲ್ಲ" ಎಂದು ಉತ್ತರಬಂತು. ಇದು ಅತ್ಯಂತ ಆಶ್ಚರ್ಯಕರವಾಗಿದೆ. ಶ್ರೀ ಸೆಟ್ಟರು ೧೯೩೦ ರಿಂದಲೂ ಕಾಂಗ್ರೆಸ್ ಕೆಲಸಗಾರರಾಗಿದ್ದು ಉಪ್ಪಿನ ಸತ್ಯಾಗ್ರಹದಲ್ಲಿ [೧೯೩೦] ಮತ್ತು ೧೯೩೨ ರ ಸತ್ಯಾಗ್ರಹದಲ್ಲಿ ಭಾಗವಹಿಸಿ ಲಾಠಿ ಪ್ರಹಾರವನ್ನೂ ಅನೇಕ ತಿಂಗಳುಗಳ ಸೆರೆಮನೆವಾಸವನ್ನೂ ಅನುಭವಿಸಿದರು. ಮುಂದೆ ಹರಿಜನರ ಉದ್ಧಾರಕ್ಕಾಗಿ ಉಡುಪಿಯಲ್ಲಿ ದುಡಿದು ಹರಿಜನ ವಿದ್ಯಾರ್ಥಿ ಭವನವನ್ನು ಪ್ರಾರಂಭಿಸಿದರು. ಇಂದಿಗೂ ಅವರು ಬ್ರಹ್ಮಾವರದಲ್ಲಿ ಉತ್ಸಾಹಿ ಕಾಂಗ್ರೆಸ್ ಕಾರ್ಯಕರ್ತರು. ಖಾದಿಧಾರಣೆ, ಸ್ವದೇಶಿವ್ರತ ಮೊದಲಾದವುಗಳಿಂದಲೂ ತ್ಯಾಗ, ಸೇವೆಗಳಿಂದಲೂ ಜಿಲ್ಲೆಯಲ್ಲಿ ಹೆಸರಾದ ಇವರೇ ಅರ್ಹರಾಗದಿದ್ದರೆ ಪರಿಹಾರಕ್ಕೆ ಮತ್ತಾರು ಅರ್ಹರು? ೧೯೪೨ ರಷ್ಟು ಈಚೆಗೆ ಪೋಲೀಸರು ಹಳ್ಳಿಗರನ್ನು ಪೀಡಿಸುತ್ತಿದ್ದಾಗ ಅವರನ್ನು ಸಂಘಟಿಸಿ ಆಗಿನ ಅಧ್ಯಕ್ಷರಾದ ಇಬ್ಬರು ಅಧಿಕಾರಿಗಳ ಕಿರುಕುಳ ಮೊದಲಾದ ಪ್ರಮುಖರಿಂದ ಪ್ರಶಂಸೆ ಹೊಂದಿದ ಇವರಿಗೆ ಹೀಗೆ ಅನ್ಯಾಯ ಮಾಡುವದು ನ್ಯಾಯವಲ್ಲ. ಅಂದಿನ ಕಾಂಗ್ರೆಸ್ಸಿಗರು ಈಗಿಲ್ಲದೆ ಹೊಸಬರು ಬಂದಿರುವುದೇ ಇದಕ್ಕೆ ಕಾರಣವಾಗಿರಬಹುದೆ?

—ಕಾಂಗ್ರೆಸ್ ಹಿತೈಷಿ

× × ×

ಚಿಕ್ಕಮಗಳೂರು ಡಿ। ಬೋರ್ಡಿನ ಅವಗಾಹನೆಗೆ

ನೆಮ್ಮಾರು ಪ್ರದೇಶದ ಜನರಿಗೆ ಮಳೆಗಾಲದಲ್ಲಿ ಹೊರಗಿನೊಡನೆ ಸಂಪರ್ಕವಿಟ್ಟುಕೊಳ್ಳಲು ತುಂಗಾ ನದಿಯನ್ನು ದೋಣಿಯಲ್ಲಿ ದಾಟಿ ಹೋಗಲೇ ಬೇಕಾಗುತ್ತದೆ. ಚಿಕ್ಕಮಗಳೂರು ಡಿಸ್ಟ್ರಿಕ್ಟ್ ಬೋರ್ಡಿನವರು ಈ ದೋಣಿಯನ್ನು ನಡೆಸುವ ಹಕ್ಕನ್ನು ಪ್ರತಿ ಜೂನ್ ಕೊನೆಯೊಳಗೆ ಹರಾಜು ಮಾಡುತ್ತಾರೆ. ಆದರೆ ಹೀಗೆ ಇದರಿಂದ ಹಣಗಳಿಸುವದರಲ್ಲಿ ತೋರಿಸಿದ ಆಸ್ಥೆಯ ಅತ್ಯಲ್ಪ ಭಾಗವನ್ನು ಸಹ ದೋಣಿಯ ವಿಷಯದಲ್ಲಿ ತೋರಿಸದಿರುವದು ವಿಷಾದಕರವಾಗಿದೆ. ಈ ದೋಣಿಯು ತೀರ ಕೆಟ್ಟುಹೋಗಿದ್ದು ಅದರಿಂದ ಪ್ರಯಾಣಿಕರಿಗೆ ಅಪಾಯ ಬರಬಹುದೆಂದು ದೂರಿಕೊಂಡಾಗ ಈ ವರ್ಷ ಸ್ವತಃ ಬೋರ್ಡಿನ ಅಧ್ಯಕ್ಷರೇ ಬಂದು ನೋಡಿದರು. ಆದರೆ ಹೊಸ ದೋಣಿ ಮಾಡಿಸಲು ಜನವೂ ದೊರೆಯುವುದಿಲ್ಲ, ಹಣವೂ ವಿಪರೀತ ಖರ್ಚಾಗುತ್ತದೆ. ಆದ್ದರಿಂದ ಇದ್ದುದರಲ್ಲೇ ಅದಷ್ಟು ದಿವಸ ನಡೆಸಲಿ. ಅಪಾಯ ಬರುವಂತಾದರೆ ದೋಣಿಯ ಓಡಾಟವನ್ನೇ ನಿಲ್ಲಿಸಿ ಬಿಡಲು ಆಜ್ಞೆ ಹೊರಡಿಸೋಣ. ಎಂದು ಹೇಳಿದರು. ಮಳೆಗಾಲದಲ್ಲಿ ಈ ಪ್ರದೇಶದ ಜನರಿಗೆ ಔಷಧೋಪಚಾರ ಮೊದಲಾದ ವ್ಯವಹಾರಗಳಿಗೆ ಶೃಂಗೇರಿಗೆ ಹೋಗಲೇ ಬೇಕಾಗುತ್ತದೆ. ಹೀಗಿರುವಾಗ ದೋಣಿಯನ್ನು ನಿಲ್ಲಿಸಿದರೆ ಅವರಿಗೆ ಅಂಡಮಾನ ಶಿಕ್ಷೆಯಾದಂತಾಗುತ್ತದೆ. ದೋಣಿಯ ಹರಾಜಿನಿಂದ ಹಣಗಳಿಸುವದೊಂದೇ ಬೋರ್ಡಿನ ಜವಾಬ್ದಾರಿಯೆ? ದೋಣಿ ವ್ಯವಸ್ಥೆಯಿಂದ ಓಡಾಡುವಂತೆ ಅದು ನೋಡಬೇಡವೆ? ಹೊಸ ದೋಣಿಯ ವ್ಯವಸ್ಥೆ ಮಾಡುವದು ಬೋರ್ಡಿನವರ ಕರ್ತವ್ಯ. ಇಲ್ಲದಿದ್ದರೆ ಜನರಿಗೆ ತುಂಬ ಅನಾನುಕೂಲವಾಗುತ್ತದೆ. —ಓರ್ವ ಗ್ರಾಮಸ್ಥ

Bharatchandra, BGM

ಊನಾಂಗ ಮಕ್ಕಳ ಚಿಕಿತ್ಸಾ ಸಂಸ್ಥೆ

(೫ ನೇ ಪುಟದಿಂದ ಬಂದುದು)

೨) ಈ ಚಿಕಿತ್ಸಾಕ್ರಮದಲ್ಲಿಯ ತಂತ್ರಜ್ಞರ ತರಬೇತಿಗಾಗಿ ಒಂದು ಶಾಲೆ.

೩) ರೋಗಿಗಳ ಸುಗಮ ಜೀವನಕ್ಕೆಂದು ಉಪಕರಣಗಳನ್ನು ತಯಾರಿಸುವ ಕರ್ಮಶಾಲೆ.

೪) ವಿದ್ಯಾಶಾಲೆ.

೫) ಹಸುಗೂಸುಗಳ ಪಕ್ಷವಾತವನ್ನು ತಡೆಗಟ್ಟಲು ಸಂಶೋಧನ ಮಂದಿರ. ಇತ್ಯಾದಿ.

ಇವಲ್ಲ ಆದುದೇ ಆದರೆ ಇದೊಂದು ಭಾರತದಲ್ಲೇ ಆದರ್ಶ ಚಿಕಿತ್ಸಾ ಕೇಂದ್ರವಾಗಿ ಮೆರೆದು ಎಲ್ಲರೂ ಇದರ ಪ್ರಯೋಜನವನ್ನು ಪಡೆಯುವಂತಾಗುವುದು.

ಇಲ್ಲಿನ ಚಿಕಿತ್ಸಾಕ್ರಮವು ಮನಮೆಚ್ಚುವಂತಹದಾಗಿದೆ. ಮರಿಮಕ್ಕಳನ್ನು ತುಂಬ ಮಮತೆಯಿಂದ ಕಾಣುವರು. ಇಷ್ಟೊಂದು ತೃಪ್ತಿಕರ ಮತ್ತು ಸಮಾಧಾನಕರ ಚಿಕಿತ್ಸೆಯನ್ನು ನಾನು ಎಲ್ಲೂ ಕಂಡಿಲ್ಲ. ಪಕ್ಷವಾತದ ಚಿಕಿತ್ಸಾ ವಿಧಾನಗಳಲ್ಲಿ ಮಾಲೀಸು (Massage) ಬಹಳ ಮಹತ್ವದ್ದಾಗಿದೆ ಮಕ್ಕಳ ಅವಯವಗಳನ್ನು ಎಂತಹ ಕಠಿಣ ನೋವಿದ್ದರೂ ಕೂಡ, ಮಾಲೀಸು ಮಾಡುವಾಗ ಅವು ಅತ್ತು ಕಣ್ಣೀರಿಳಿಸುವುದಿಲ್ಲ. ಕ್ರಮವಾದ ಮಾಲೀಸು ಶಕ್ತಿಯನ್ನು ಹೆಚ್ಚಿಸುತ್ತದೆ. ಉದ್ದೇಶಪೂರ್ವಕ ವ್ಯಾಯಾಮವು ಶಕ್ತಿಯನ್ನು ಹೆಚ್ಚಿಸುತ್ತದೆ. ಉದ್ದೇಶವಿಲ್ಲದ ವ್ಯಾಯಾಮವು ಶಕ್ತಿಯನ್ನು ಕೆಡಿಸುತ್ತದೆ. ವ್ಯಾಯಾಮ ಮತ್ತು ಮಾಲೀಸು ಇಲ್ಲಿ ಬಹಳ ಪ್ರಾಮುಖ್ಯ. ಮಕ್ಕಳಿಗೆ ತುಂಬಾ ವ್ಯಾಯಾಮವನ್ನು ಕೊಡಲಾಗುವುದು. ಮಾಲೀಸಿಗೆ ರೋಗ ಪರಿಹಾರಕವಾದೊಂದು ಅದ್ಭುತ ಶಕ್ತಿಯಿದೆ. ಆದರೆ ಕ್ರಮವಾಗಿ ಮಾತ್ರ ಮಾಡಬೇಕು. ಎಲ್ಲಕ್ಕೂ ಸೈರಣೆಯು ಅತ್ಯಗತ್ಯ. ರೋಗಿಯು ಗುಣಮುಖನಾಗಲು ಹತ್ತು ದಿನಗಳೂ ಸಾಕು. ಒಂದು ತಿಂಗಳೂ ಬೇಕಾಗಬಹುದು. ಇಲ್ಲವೆ ಮುಂದೆ ಹೋದರೂ ಹೋಗಬಹುದು. ಅಲ್ಲದೆ, ಶಾಸ್ತ್ರೀಯವಾಗಿ ಬಿಸಿನೀರು ತಣ್ಣೀರುಗಳ ಸ್ನಾನ ಮಾಡಿಸುವದೂ ಅವಶ್ಯವಿದ್ದಲ್ಲಿ ಕೃತಕ ಸೂರ್ಯಕಿರಣ (Ultra violet rays) ದ ಸೇಕವೂ ಚಿಕಿತ್ಸೆಯ ಅಂಗಗಳಾಗಿವೆ. ಮಕ್ಕಳಿಗೆ ಓದು ಕಲಿಸಲು, ಮನೋರಂಜನ ಮಾಡಲು ಒಬ್ಬ ಶಿಕ್ಷಕಳೂ ಇದ್ದಾಳೆ. ನಡೆಯಲಾಗದ ಮಕ್ಕಳ ಸಲುವಾಗಿ ಕಾಲ್ಚಕ್ರಗಳಿದ್ದ ಕುರ್ಚಿಗಳಿವೆ, ಮರಗಾಲುಗಳಿವೆ. ಹೀಗಾಗಿ ಒಂದು ಕೋಣೆಯಿಂದ ಇನ್ನೊಂದು ಕೋಣೆಗೆ ಸುಲಭವಾಗಿ ಅವು ಹೋಗಬಹುದು.

ಧನ ಸಹಾಯ ಅವಶ್ಯ

ಡಾ. ಎ. ವಿ. ಬಾಳಿಗರವರು ಈ ಸಂಘದ ಅಧ್ಯಕ್ಷರು ಮತ್ತು ಶ್ರೀಮತಿ ಫಾತಿಮಾ ಇಸ್ಮಾಯಿಲ್‌ರವರು ಗೌರವ ಕಾರ್ಯದರ್ಶಿ. ಇವರ ಹೊರತು ಇತರ ಗೌರವ ಸದಸ್ಯರು ಮತ್ತು ಕಾರ್ಯಕರ್ತರು ಸಂಘದಲ್ಲಿದ್ದಾರೆ. ಇವರೆಲ್ಲರ ನೇತೃತ್ವದಲ್ಲಿ ದಕ್ಷತೆಯಿಂದ ಕೆಲಸವು ಸಾಗುತ್ತಿದೆ. ಈ ಸಂಘದ ಸಾಹಸವನ್ನು ಮನಗಂಡ ಕೇಂದ್ರ ಸರಕಾರವು ಸ್ವತಂತ್ರ ಕಟ್ಟಡದ ರಚನೆಗೆಂದು ರೂ ೩೩,೭೭೭/— ನ್ನು ಕೊಡಲು ಸಮ್ಮತಿಸಿದೆ. ಮಾತ್ರ ಒಂದು ಶರತಿನ ಮೇಲೆ: ಮುಂಬಯಿ ಸರಕಾರದಿಂದಲೂ ಮತ್ತು ಸಾರ್ವಜನಿಕರಿಂದಲೂ ಹೆಚ್ಚು ಕಡಿಮೆ ಅಷ್ಟಷ್ಟೇ ಹಣವನ್ನು ಎತ್ತಬೇಕಾಗಿ ಸೂಚಿಸಲಾಗಿದೆ. ಈ ಬಗೆಯ ಸಹಾಯ ಧನ ಸಿರಾಯಾಸವಾಗಿ ದೊರತೀತೆಂದು ಭರವಸೆಯಿದೆ. ಇತ್ತೀಚೆಗೆ ನಿಕೋಬಾರ ದ್ವೀಪಗಳಲ್ಲಿನ ಜನರು ಆತ್ಯಧಿಕ ಪಕ್ಷವಾತ ಬೇನೆಯಿಂದ ಪೀಡಿತರಾದಾಗ ಇಲ್ಲಿಂದಲೇ ಒಂದು ವೈದ್ಯ ಸೇವಾ ಪಥಕವನ್ನು ಕಳುಹಿಸಲಾಯಿತು.

ಪಕ್ಷವಾತದಿಂದ ನರಳುವ ಹಸುಳೆ ರೋಗಿಗಳನ್ನು ಸಾಮಾನ್ಯ ಮೂರು ವಿಭಾಗಗಳಲ್ಲಿ ವಿಂಗಡಿಸುತ್ತಾರೆ. ಅದರ ಕ್ರಮ ಹೀಗಿದೆ:

೧) ದೌರ್ಬಲ್ಯ ಮತ್ತು ಸರ್ವ ಸಾಧಾರಣ ಅಂಗಾಂಗಗಳ ಚಲನವಲನದ ಕೊರತೆ.

೨) ಮುಖ, ಕುತ್ತಿಗೆ, ಕಾಲು ಅಥವಾ ಮೊಣಗಂಟು, ತೊಡೆ ಇತ್ಯಾದಿಗಳ ಕುಸ್ತದಿಂದಾಗುವ ಕೊರತೆ.

೩) ಯಾವುದಾದರೊಂದು ನಿರ್ದಿಷ್ಟ ಅವಯವದ ಊನತೆ.

ಸಂಘಕ್ಕೀಗ ಎಷ್ಟು ಹಣವಿದ್ದರೂ ಬೇಕು. ಚಿಕಿತ್ಸಾಮಂದಿರದಲ್ಲಿದ್ದ ನೌಕರ ವರ್ಗಕ್ಕೆ ಯೋಗ್ಯ ಸಂಬಳ ಕೊಡಬೇಕು. ಆದರಿಂದ ಅದು ದಾನಿಗಳ ಆಶ್ರಯವನ್ನು ಬಯಸುತ್ತಿದೆ. ನಾಟಕ ಸಿನಿಮಾ ಮುಂತಾದ ಮನೋರಂಜಕ ಕಾರ್ಯಕ್ರಮಗಳಿಂದ ಹಣಸಂಗ್ರಹ ಮಾಡುತ್ತಿದೆ. ಪೋಷಕ ವರ್ಗದಿಂದಲೂ ಸಾಕಷ್ಟು ಧನ ಸಿಕ್ಕುತ್ತಿದೆ. ಮುಂದೊಂದು ದಿನ ನಿರಾಶಾಮಯ ಊನಾವಯಗಳುಳ್ಳ ರೋಗಿಗಳ ರಕ್ಷಕರ ಹೃದಯವು ಆನಂದದಿಂದ ಉಬ್ಬೀತು. "ಓ ದೇವರೇ-ನನ್ನನ್ನು ಸೃಷ್ಟಿಸಿದಾಗ ಇದ್ದ ಅವಸ್ಥೆಗೆ ನನ್ನನ್ನು ಹಿಂದಿರುಗಿಸು" ಎಂಬ ಪಕ್ಷವಾತ ಗ್ರಸ್ತ ಹಸುಗೂಸಿನ ಪ್ರಾರ್ಥನೆಯು ನೆರವೇರಿದಂತಾಗುವುದು.

ಇಂಗ್ಲೆಂಡಿನಲ್ಲಿ ಸುಮಾರು ಮೂವತ್ತಾರು ಆಸ್ಪತ್ರೆಗಳು ಮತ್ತು ನೂರಾರು ಚಿಕಿತ್ಸಾ ಮಂದಿರಗಳು ಬರಿಯ ಪಕ್ಷವಾತ ರೋಗಿಗಳ ಸಲುವಾಗಿಯೇ ಇವೆ. ಆದರೆ ಹಿಂದುಸ್ಥಾನದಲ್ಲಿ, ಮುಂಬಯಿಯ ಚಿಕಿತ್ಸಾ ಕೇಂದ್ರವೇ ಮೊತ್ತ ಮೊದಲಿನದು ಮತ್ತು ಒಂದೇ ಒಂದು. ಈ ಕೇಂದ್ರವು ಇನ್ನು ಆ ಮಾದರಿಯ ಬೇರೆ ಕೇಂದ್ರಗಳನ್ನು ತೆರೆಯುವ ಸಲುವಾಗಿ ಶಿಕ್ಷಣರಂಗವಾಗುವುದು.

ಸಮಸ್ತ ಭಾರತ

ಮುಂಬಯಿ

ರಾಷ್ಟ್ರೀಯ ಸ್ವಯಂಸೇವಕ ಸಂಘದ ಸರಸಂಘಚಾಲಕರಾದ ಶ್ರೀ ಎಂ. ಎಸ್. ಗೋಳವಲಕರರು ೧೬ ನೇ ತಾರೀಕು ಮುಂಜಾನೆ ಮುಂಬಯಿ ಬಿರ್ಲಾ ಭವನದಲ್ಲಿ ಸರದಾರ ವಲ್ಲಭಭಾಯಿಯವರನ್ನು ಕಂಡು ಒಂದು ಗಂಟೆಯ ವರೆಗೆ ಅವರೊಡನೆ ಮಾತುಕತೆಯಾಡಿದರು.

ಹಿಂದುಸ್ತಾನದ ಉಪಮುಖ್ಯ ಮಂತ್ರಿಗಳಾದ ಸರದಾರ ವಲ್ಲಭಭಾಯಿ ಪಟೇಲರು ಅನಾರೋಗ್ಯ ನಿಮಿತ್ತ ಸ್ವಾತಂತ್ರ್ಯ ವರ್ಧಂತಿ ದಿನವನ್ನು ಶಾಂತ ವಾತಾವರಣದಲ್ಲಿ ಕಳೆದರು. ನಾಡಿಗೆನಾಡೇ ಅವರಿಗೆ ಕೃತಜ್ಞತೆಯನ್ನು ಸ್ಮರಿಸಿ ಅವರು ತೀವ್ರ ಗುಣಹೊಂದಲೆಂದು ಪ್ರಾರ್ಥಿಸಿತು. ಸರದಾರರಿಗೆ ದೀರ್ಘಾಯುರಾರೋಗ್ಯವನ್ನು ಕೋರಿ ನೂರಾರು ಪತ್ರಗಳು ತಂತಿಗಳು ಇಂದು ಸರದಾರರಿಗೆ ಬಂದಿವೆ.

ಪ್ರಾಂತದಲ್ಲಿ ಅಧಿಕವಾಗಿ ಜವಳಿ ಸಂಗ್ರಹವಾಗಿರುವದರಿಂದ ಜವಳಿ ಉದ್ಯೋಗದಲ್ಲಿ ಉಂಟಾಗಬಹುದಾದ ಬಿಕ್ಕಟ್ಟಿನ ನಿವಾರಣೆಗಾಗಿ ಹಿಂದುಸ್ತಾನ ಸರಕಾರವು ಕೂಡಲೆ ಕ್ರಮಕೈಕೊಳ್ಳಬೇಕೆಂದು ಮುಂಬಯಿ ಸರಕಾರವು ಹಿಂದುಸ್ತಾನ ಸರಕಾರಕ್ಕೆ ಕೇಳಿಕೊಂಡಿದೆ.

ಕೊಲ್ಹಾಪುರದಿಂದ ಮುಂಬಯಿ ಶಾಸನ ಸಭೆಗೆ ಜಿ ಕೆ ಧರ್ಮಾಧಿಕಾರಿ, ಎಂ ಡಿ ಶ್ರೇಷ್ಠಿ, ಗಣಪತರಾವ ಜಾಧವ, ಆರ್. ಟಿ. ಬಾಗಡೆ, ಶಂಕರರಾವ ಮಾನೆ, ವಿ. ಜಿ. ಪಾಲ, ಅಹಮದ ಶಹಬಾಜಿ ಮುಲ್ಲಾ ಮತ್ತು ಇಂದಿರಾಬಾಯಿ ದೇಶಪಾಂಡೆ ಇವರನ್ನು ನಾಮಕರಣ ಮಾಡಲಾಗಿದೆ. ಸದಾಶಿವರಾವ ಬಾಣಂದೀಕರ ಉರ್ಫ ಕ್ಷಾತ್ರಜಗದ್ಗುರು ಇವರನ್ನು ಮುಖ್ಯ ವಿಧಿಮಂಡಳದ ಸದಸ್ಯರನ್ನಾಗಿ ನಾಮಕರಣ ಮಾಡಲಾಗಿದೆ.

ಸಾಂಗಲಿಯಿಂದ ಶಾಸನ ಸಭೆಗೆ ಎಸ್. ವಿ. ಆಮೀನ ಮತ್ತು ಶ್ರೀಮತಿ ಕಾಳಂತ್ರಿಬಾಯಿ ಜೈನ ಮತ್ತು ವಿಧಿ ಮಂಡಳಕ್ಕೆ ಸಾಂಗಲಿಯ ರಾಜೇಸಾಹೇಬ ಚಿಂತಾಮಣರಾವ ಪಟವರ್ಧನ ಇವರು ನಾಮಕರಣ ಮಾಡಲ್ಪಟ್ಟಿದ್ದಾರೆ.

ಔಂಧ ಮತ್ತು ಫಲಟಣ ಸಂಸ್ಥಾನ ಭಾಗದಿಂದ ಶಾಸನ ಸಭೆಗೆ ಶ್ರೀ ಮಾಲೋಜಿರಾವ ನಿಂಬಾಳಕರ ಫಲಟಣದ ರಾಜೇಸಾಹೇಬರು ನಾಮಕರಣ ಮಾಡಲ್ಪಟ್ಟಿದ್ದಾರೆ.

ಸೊಲ್ಲಾಪುರ ನಗರ ಸಭೆಯ ಚುನಾವಣೆ ನಡೆದು ಒಟ್ಟು ೫೩ ಸ್ಥಳಗಳಲ್ಲಿ ಕಾಂಗ್ರೆಸ್ಸಿಗೆ ೪೪ ಸ್ಥಳಗಳು ದೊರೆತಿವೆ. ಬಹುಜನ ಸಮಾಜ, ಕಮ್ಯುನಿಸ್ಟ ಹಾಗು ಮುಸಲ್ಮಾನರ ಗುಂಪು ಸೇರಿಸಿಕೊಂಡಿರುವ ಜನತಾ ಪಕ್ಷಕ್ಕೆ ಕೇವಲ ೭ ಸ್ಥಳಗಳು ದೊರೆತಿವೆ. ಸೋಶಲಿಸ್ಟ ಪಕ್ಷದ ನಾಲ್ಕು ಹುರಿಯಾಳುಗಳು ಆರಿಸಿ ಬರಲಿಲ್ಲ.

ಮಧ್ಯ ಪೂರ್ವ ಬಂದರಗಳಿಂದ ಬಂದ ಹಡಗಗಳಲ್ಲಿ ಮೂವರು ಅರಬರಲ್ಲಿ ಜಕಾತಿ ಅಧಿಕಾರಿಗಳು ೨೦ ಸಾವಿರ ರೂಪಾಯಿಗಳ ಬಂಗಾರವನ್ನು ಜಪ್ತ ಮಾಡಿದರು. ಈ ಮೂವರು ಅರಬರನ್ನು ಹೆಚ್ಚಿನ ವಿಚಾರಣೆಗಾಗಿ ತುರಂಗದಲ್ಲಿ ಇಡಲಾಗಿದೆ.

ಸ್ವಾತಂತ್ರ್ಯ ದಿನದ ನಿಮಿತ್ತ ಮಾರಾಟಕ್ಕೆ ತೆಗೆದ ಐತಿಹಾಸಿಕ ಚಿತ್ರಗಳುಳ್ಳ ಅಂಚೆ ತಿಕೀಟು ತೆಗೆದುಕೊಳ್ಳಲು ಮುಂಬಯಿ ಅಂಚೆ ಕಚೇರಿಯಲ್ಲಿ ಬಹಳ ಗದ್ದಲವಾಯಿತು ೧೫ ನೇ ತಾರೀಕು ೩ ಲಕ್ಷ ರೂಪಾಯಿಗಳ ತಿಕೀಟು ಮಾರಾಟವಾದವು.

ಮದ್ರಾಸ

ಆಂಧ್ರದ ಪ್ರಮುಖ ಕಾಂಗ್ರೆಸ ಕಾರ್ಯಕರ್ತರೂ ಆಂಧ್ರ ಪಿತಾಮಹರೆಂದು ಖ್ಯಾತಿ ಹೊಂದಿದವರೂ ಆಗಿದ್ದ ಶ್ರೀ ಕೊಂಡಾ ವೆಂಕಟಪ್ಪಯ್ಯನವರು ೧೫ ನೇ ತಾರೀಕು ಬೆಳಗಿನ ಜಾವದಲ್ಲಿ ಸ್ವರ್ಗಸ್ಥರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಆಂಧ್ರ ಪ್ರಾಂತೀಕರಣ ಚಳವಳಿಯಲ್ಲಿ ಇವರು ಪ್ರಮುಖ ಪಾತ್ರವಹಿಸಿದ್ದರು. ಮರಣ ಸಮಯದಲ್ಲಿ ಇವರಿಗೆ ೮೪ ವರುಷಗಳಾಗಿದ್ದವು. ೧೯೨೧ ನೇ ಇಸ್ವಿಯಲ್ಲಿಯೇ ಗಾಂಧೀಜಿಯ ಅಸಹಕಾರದ ಕರೆಗೆ ಓಗೊಟ್ಟು ಇವರು ವಕೀಲಿಗೆ ಶರಣು ಹೊಡೆದು ಗಾಂಧಿಯವರ ಅನುಯಾಯಿಗಳಾಗಿದ್ದರು.

ಸ್ವಾತಂತ್ರ್ಯೋತ್ಸವದ ನಿಮಿತ್ತ ೧೫ ನೇ ತಾರೀಕು ಕೊಯಿಮತ್ತೂರಿನಲ್ಲಿ ಸೇರಿದ್ದ ಸಾರ್ವಜನಿಕ ಸಭೆ ಮುಗಿದ ಬಳಿಕ ಮದರಾಸದ ಆಹಾರಮಂತ್ರಿ ಶ್ರೀ ವಿಕ್ಟೋರಿಯಾ ಇವರ ಮೋಟಾರದ ಮೇಲೆ ದೇಶೀ ಪಟಾಕಿ ಒಗೆಯಲ್ಪಟ್ಟಿತು. ಇದರಿಂದ ಅವರ ಕಾರಿಗೆ ಸ್ವಲ್ಪ ಧಕ್ಕೆ ತಟ್ಟಿತು. ಒಳಗಿನವರಿಗೆ ಯಾರಿಗೂ ಗಾಯಗಳಾಗಿಲ್ಲ.

ಸ್ವಾತಂತ್ರ್ಯೋತ್ಸವದ ದಿನ ಪಾಂಡೀಚೆರಿಯಲ್ಲಿ ಕಳೆದ ನಲವತ್ತು ವರುಷಗಳಿಂದ ನೆಲೆಸಿರುವ ಶ್ರೀ ಅರವಿಂದ ಯೋಗಿಗಳ ೭೭ ನೇ ಜನ್ಮ ದಿನವೂ ಒದಗಿ ಬಂದಿದ್ದಿತು. ಅಲ್ಲಿ ನೆರೆದಿದ್ದ ೩೦೦೦ ಜನರಿಗೆ ಅರವಿಂದರು ದರ್ಶನವನ್ನಿತ್ತರು.

ಚಂದ್ರನಗರದ ಹಸ್ತಾಂತರದ ಪೂರ್ವಸಿದ್ಧತೆಯೆಂದು ಫ್ರೆಂಚ ಸರಕಾರದವರು ಪೋಲೀಸ ಆಡಳಿತೆಯ ಮೇಲಿನ ಅಧಿಕಾರವನ್ನು ೧ ರಿಂದ ಬಿಟ್ಟುಗೊಟ್ಟಿರುವರು.

ಮದರಾಸ ಪ್ರಾಂತದ ಒಕ್ಕಲತನದ ಅಭಿವೃದ್ಧಿಗಾಗಿ ೨೧ ಕೋಟಿ ರೂಪಾಯಿಗಳ ಎರಡು ವರುಷಗಳ ಯೋಜನೆಯೊಂದನ್ನು ಸರಕಾರವು ಯೋಜಿಸಿದೆ. ಈ ಯೋಜನೆಯಿಂದ ಪ್ರತಿ ವರ್ಷ ೭ ಲಕ್ಷ ಟನ್ ಆಹಾರ ಧಾನ್ಯವು ಹೆಚ್ಚಿಗೆ ಬೆಳೆಯುವದೆಂದು ನಿರೀಕ್ಷಿಸಲಾಗಿದೆ. ಯೋಜನೆಯ ವೆಚ್ಚವನ್ನು ಪ್ರಾಂತ ಮತ್ತು ಕೇಂದ್ರ ಸರಕಾರಗಳು ವಹಿಸುವವು.

ಹೊಸದಿಲ್ಲಿ

ಹಿಮಾಲಯದಲ್ಲಿ ೨೫ ವರ್ಷ ತಪಸ್ಸು ಮಾಡಿದ ಸ್ವಾಮೀ ಕರಪಾತ್ರಿಜಿಯವರು ಸ್ವಾತಂತ್ರ್ಯದಿನದ ನಿಮಿತ್ತ ಹೊರಡಿಸಿದ ೭ ಪುಟಗಳ ಪ್ರಕಟನೆಯಲ್ಲಿ ಹಿಂದೂ ಕಾಯದೆ ಮಸೂದೆಯನ್ನು ಹಿಂತೆಗೆದುಕೊಳ್ಳಬೇಕೆಂದೂ ಗೋವಧೆಯನ್ನು ನಿಲ್ಲಿಸಬೇಕೆಂದೂ ಹಿಂದ-ಪಾಕಿಸ್ತಾನಗಳು ಪುನಃ ಒಂದುಗೂಡುವಂತೆ ಮಾಡತಕ್ಕದ್ದೆಂದೂ ಸಾರಿದ್ದಾರೆ. ಇವೆಲ್ಲ ಸಾಧಿಸಿದಾಗ ಹಿಂದುಸ್ತಾನದ ಸ್ವಾತಂತ್ರ್ಯಕ್ಕೆ ನಿಜವಾದ ಬೆಲೆ ಬರುತ್ತದೆ ಎಂದೂ ಅವರು ಬರೆದಿರುವರು.

ಸ್ವಾತಂತ್ರ್ಯ ದಿನದ ನಿಮಿತ್ತ ಹೊಸದಿಲ್ಲಿ ಕರ್ನಾಟಕ ಸಂಘದಲ್ಲಿ ಶ್ರೀ ದಿವಾಕರ ರಂಗರಾಯರು ಪ್ರಜಾಪ್ರಭುತ್ವದ ಮೂಲತತ್ವಗಳು ಎಂಬ ವಿಷಯದ ಮೇಲೆ ಮಾತಾಡಿದರು. ಭಾಷಾಪ್ರೇಮ ಸ್ವದೇಶಪ್ರೇಮಕ್ಕೆ ಅಡ್ಡಿಯನ್ನುಂಟುಮಾಡಬಾರದು ಎಂದು ಅವರು ಅಭಿಪ್ರಾಯಪಟ್ಟರು. ಕೊಂಕಣಿ ಸಂಘದಲ್ಲಿಯೂ ಅವರ ಭಾಷಣವಾಯಿತು.

ಹೊಸದಿಲ್ಲಿಯ ಮಹಾರಾಷ್ಟ್ರೀಯ ಸಮಾಜದಲ್ಲಿ ಪಂಡಿತ ಜವಾಹರಲಾಲ ನೆಹರು ಇವರು ಸ್ವಾತಂತ್ರ್ಯ ದಿನದ ನಿಮಿತ್ತ ಭಾಷಣ ಮಾಡಿದರು. ಎಲ್ಲ ಭಾಷೆಗಳಿಗೂ ಸರಕಾರದವರು ಅಷ್ಟೇ ಪ್ರೋತ್ಸಾಹನ ಕೊಡುವರೆಂದು ಹೇಳಿದರು. ಹಿಂದುಸ್ತಾನದಲ್ಲಿ ವಿವಿಧ ಭಾಷೆಗಳಿದ್ದರೂ ಐಕ್ಯವನ್ನು ನಮಗೆ ಸಾಧಿಸಬೇಕಾಗಿದೆ ಎಂದೂ ಅವರು ಹೇಳಿದರು.

ಹಿಂದುಸ್ತಾನ ಸರಕಾರದ ಮುಖ್ಯ ಮಂತ್ರಿಗಳಾದ ಪಂಡಿತ ಜವಾಹರಲಾಲ ನೆಹರು ಇವರು ಸಧ್ಯದ ಕಾರ್ಯಕ್ರಮದ ಮೇರೆಗೆ ಅಕ್ಟೋಬರ ೭ ಕ್ಕೆ ಅಮೇರಿಕೆಗೆ ಹೊರಡುವರು. ದಾರಿಯಲ್ಲಿ ಅವರು ಲಂಡನದಲ್ಲಿ ಎರಡು ದಿನ ಉಳಿಯುವರು. ಜವಾಹರಲಾಲರೊಂದಿಗೆ ಅವರ ಮಗಳು ಇಂದಿರಾ ಇವಳೂ ಹೋಗುವಳು. ಅಮೇರಿಕೆಯಲ್ಲಿ ಅವರು ಒಟ್ಟಿಗೆ ೨೦ ದಿನ ಉಳಿಯುವರು. ಮರಳುವಾಗ ಅವರು ಕಾನಡಾದಲ್ಲಿ ಮೂರು ದಿನ ತಂಗುವರು.

ಬರುವ ವರ್ಷ ಆಹಾರೋತ್ಪಾದನೆಗಾಗಿ ಹೆಚ್ಚು ಶ್ರಮಿಸಬೇಕೆಂದು ಕಾಂಗ್ರೆಸ ಕಾರ್ಯದರ್ಶಿಗಳಾದ ಶ್ರೀ ಕಳಾ ವೆಂಕಟರಾಯರು ಪ್ರಾಂತೀಯ ಕಾಂಗ್ರೆಸ ಸಮಿತಿಗಳಿಗೆ ಆದೇಶಿಸಿದ್ದಾರೆ.

ಸಂಯುಕ್ತಪ್ರಾಂತ

ತನ್ನ ಸ್ಥಾನಬದ್ಧತೆಯ ವಿರುದ್ಧವಾಗಿ ಸಂಯುಕ್ತಪ್ರಾಂತದ ಕಮ್ಯುನಿಸ್ಟ ಧುರೀಣರೂ ಅ. ಭಾ. ಟ್ರೇಡಯುನಿಯನ್ ಕಾಂಗ್ರೆಸ್ಸಿನ ಉಪಾಧ್ಯಕ್ಷರೂ ಆಗಿರುವ ಎಸ್ ಎಸ್. ಯುಸುಫರು ಮಾಡಿಕೊಂಡ ಹೇಬಸ್‌ಕಾರ್ಪಸ ಅರ್ಜಿಯು ಅಲಹಾಬಾದ ಹಾಯಕೋರ್ಟಿನಿಂದ ತಿರಸ್ಕೃತವಾಯಿತು.

ಸ್ವಾತಂತ್ರ್ಯ ದಿನದ ನಿಮಿತ್ತ ಸಂಯುಕ್ತಪ್ರಾಂತದಲ್ಲಿ ಗ್ರಾಮಪಂಚಾಯತ ರಾಜ್ಯಗಳ ಸ್ಥಾಪನೆ ಮಾಡಿದರು. ೧೧೪ ಸಾವಿರ ಹಳ್ಳಿಗಳಲ್ಲಿ ಸುಮಾರು ೧೫ ಲಕ್ಷ ಜನರು ರಾಷ್ಟ್ರನಿಷ್ಠೆಯ ಪ್ರತಿಜ್ಞೆಯನ್ನು ಸ್ವೀಕರಿಸಿದರು.

ಅಲಹಾಬಾದ ಸೀದಾಶಾಪಿನ ನೌಕರರು ದೇಶದಲ್ಲಿಯ ಆಹಾರ ಕೊರತೆಯನ್ನು ಲಕ್ಷಿಸಿ ಸ್ವಾತಂತ್ರ್ಯದಿನದ ದಿವಸ ಪ್ರತಿ ತಿಂಗಳೂ ಒಂದು ದಿನದ ತಮ್ಮ ಸೀದಾವನ್ನು ಬಿಟ್ಟುಬಿಡುವ ಪ್ರತಿಜ್ಞೆಯನ್ನು ತೆಗೆದುಕೊಂಡರು. ಈ ಊರಲ್ಲಿ ಸೀದಾ ಶಾಪಿಯಲ್ಲಿ ಒಂದು ಸಾವಿರ ನೌಕರರಿದ್ದು ಅವರು ಒಂದು ದಿನದ ಸೀದಾ ಧಾನ್ಯವು ಸುಮಾರು ೫೦೦ ಸೇರಿನಷ್ಟು ಆಗುವದು.

ಸಾರ್ವತ್ರಿಕ ಚುನಾವಣೆಗಳನ್ನು ಬೇಗ ನಡೆಸಬೇಕೆಂದು ಯುಕ್ತಪ್ರಾಂತದ ಹಿಂದುಮಹಾಸಭೆಯ ಕಾರ್ಯಸಮಿತಿಯು ತನ್ನ ಸಭೆಯಲ್ಲಿ ನಿರ್ಣಯಿಸಿತು.

ಪಾಕಿಸ್ತಾನ

ಸಿಂಧದ ಹಿಂದಿನ ಮುಖ್ಯ ಮಂತ್ರಿಗಳಾದ ಶ್ರೀ ಖುರ್ರೋ ಇವರು ತಮ್ಮ ಮೇಲಿನ ಅಪಾತ್ರತೆಯನ್ನು ದೂರ ಮಾಡಬೇಕೆಂದು ಕೇಳಿಕೊಂಡಿರುವರು. ಮೂರು ವರುಷಗಳ ವರೆಗೆ ಇವರು ಯಾವ ಅಧಿಕಾರಸ್ಥಾನದಲ್ಲಿಯೂ ಇರಬಾರದೆಂದು ನಿರ್ಬಂಧಿಸಲಾಗಿದ್ದಿತು. ತಮ್ಮನ್ನು ಯಾವ ಕಾಯದೆಯನ್ವಯ ಕೆಲಸದಿಂದ ತೆಗೆದುಹಾಕಿತೋ ಆ ಕಾಯದೆಗೆ ಗವರ್ನರ ಜನರಲ್‌ರ ಸಹಿಯೆ ಆಗಿಲ್ಲೆಂದೂ ಎರಡು ತಿಂಗಳಲ್ಲಿ ನಿರ್ಬಂಧ ತೆಗೆದುಕೊಳ್ಳದಿದ್ದರೆ ತಾವು ಹಾಯಕೋರ್ಟಿನಲ್ಲಿ ದೂರಿಕೊಳ್ಳುವುದಾಗಿಯೂ ಅವರು ತಿಳಿಸಿದ್ದಾರೆ.

ಹಿಂದುಸ್ತಾನದ ಗವರ್ನರ ಜನರಲ್‌ರಾಗಿರುವ ಶ್ರೀ ಚಕ್ರವರ್ತಿ ರಾಜಗೋಪಾಲಾಚಾರ್ಯರವರು ಪಾಕಿಸ್ತಾನಿಗಳಿಗೆ ಸ್ವಾತಂತ್ರ್ಯೋತ್ಸವದ ಶುಭ ಸಂದೇಶವನ್ನು ಕಳಿಸುತ್ತ ಎಲ್ಲ ವಿಷಯಗಳಲ್ಲಿಯೂ ಸಹಕಾರ ಮನೋಭಾವನೆಯ ಬಗ್ಗೆ ತೊಂದರೆಗಳುಂಟಾಗುತಿವೆಯೆಂದು ತೋರುತಿದ್ದರೂ ಉಭಯ ರಾಷ್ಟ್ರಗಳಲ್ಲಿ ಸಹಕಾರ ಮನೋಭಾವನೆ ಹೆಚ್ಚಲೆಂದು ಹಾರೈಸಿದ್ದಾರೆ.

ಹುಬ್ಬಳ್ಳಿಯಲ್ಲಿ ಗಂಗಾಧರ ವಾಣಿಜ್ಯ ಕಾಲೇಜಿನ ಪ್ರಿನ್ಸಿಪಾಲರಾಗಿದ್ದ ಶ್ರೀ ಮುತಾಲಿಕಯವರು ಬೆಳಗಾವಕ್ಕೆ ವರ್ಗವಾಗಿ ಹೋಗಿದ್ದರಿಂದ ಅವರನ್ನು ಬೀಳ್ಕೊಡುವ ಸಮಾರಂಭವು ಕಳೆದ ವಾರ ಕಾಲೇಜಿನಲ್ಲಿ ಮತ್ತು ವಕೀಲ ಸಂಘದಲ್ಲಿ ಜರುಗಿತು. ಪ್ರಿನ್ಸಿಪಾಲರು ಮೇಧಾವಿಗಳೂ ಲೋಕಪ್ರಿಯರೂ ಆಗಿದ್ದರು. ಕಾಲೇಜ ಪ್ರಾರಂಭದಿಂದ ಇವರು ಪ್ರಿನ್ಸಿಪಾಲರಾಗಿದ್ದರು.

ಹಿಂದುಸ್ತಾನ

ವಿವರ
೧. ವಿಲಾಸಪೂರ
೨. ರಾಮಪೂರ
೩. ತೆಹರಿ ಘಡವಾಲ
೪. ಬನಾರಸ
೫. ಕೂಚಬಹಾರ
೬. ಖಾಸಿ
೭. ಸಿಕ್ಕಿಂ
೮. ತ್ರಿಪುರಾ.

ಸಂಸ್ಥಾನಗಳ ರಾಜಕೀಯ ಏಕೀಕರಣ
- ಸಂಸ್ಥಾನ ಒಕ್ಕೂಟ ಪ್ರದೇಶ
- ಪ್ರಾಂತದಲ್ಲಿ ವಿಲೀನವಾದ ಪ್ರದೇಶ
- ಕೇಂದ್ರದ ಆಡಳಿತಕ್ಕೊಳಪಟ್ಟ ಪ್ರದೇಶ
- ಪ್ರತ್ಯೇಕ ಉಳಿದ ಸಂಸ್ಥಾನ

ಪುನಾರಚಿತ ಭಾರತದ ನಕಾಶೆ

[illegible]ಉರುಳುತ್ತಿರುವ ಕುಮಿಂಟಾಂಗ್

[illegible] ಒಳಜಗಳಗಳಲ್ಲಿಯ ತೀವ್ರ ಪೈಪೋಟಿ, ಚಿಯಾಂಗರ ಮತ್ತು [illegible] ಕಮ್ಯುನಿಸ್ಟ ಮಾಜಿ ಮಯೋಶ್ವೇತಂಗನ ಮುತ್ಸದ್ದಿತನ [illegible] ಹೇಗೆ ಕುಮಿಂಟಾಂಗಿನ ಅಧಃಪತನಕ್ಕೆ ಕಾರಣಗಳಾದುವು ಎಂಬ ಅಂಶವನ್ನು [illegible] ಅಭಿಪ್ರಾಯದಿಂದ ತಿಳಿದುಕೊಳ್ಳಲು ಸಾಧ್ಯವಾಗುತ್ತದೆ. 'ನೇಶನ್' [illegible] ಅವರ ಒಂದು ಬರಹವೇ ಇದಕ್ಕೆ ಆಧಾರ.

[illegible] ಈಗ ಮುಗಿ[illegible] ಎಂದು ಕೆಲ[illegible] ಎಣಿಸಿದ್ದರೆ, ಮತ್ತೆ [illegible] ರಾಷ್ಟ್ರೀಯ ದಳಗಳು [illegible] ಕುಮಿಂಟಾಂಗ್ ಸೈನಿಕರ [illegible] ಎನಿಸ[illegible]. ನಮ್ಮ ಉಭಯ ಪಕ್ಷಗಳಲ್ಲಿ [illegible] ನಡೆಯುತ್ತಲೇ ಇದೆ. [illegible] ಒಂದೊಂದೇ ಪೆಟ್ಟು ಒಳ[illegible]. ರಾಷ್ಟ್ರೀಯ ದಳಗಳು [illegible] ಪ್ರತಿಭಟನೆ ಮಾಡುತ್ತಿವೆ; [illegible] ಸೈನಿಕರು ತಮ್ಮ ರಾಜತಂತ್ರ[illegible] ಪ್ರಯೋಗಿಸುತ್ತಿ[illegible]. [illegible] ಕಮ್ಯುನಿಸ್ಟ [illegible] ಪ್ಯಾಸಿಫಿಕ್ ಪಕ್ಷವನ್ನು ಸ್ಥಾಪಿಸುವ [illegible], ದಕ್ಷಿಣ ಕೊರಿಯದ ಅಧ್ಯಕ್ಷ[illegible] ಅದಕ್ಕೆ ಬೆಂಬಲ ಪಡೆದಿ[illegible]. ಹೀಗೆ ಅವರ ಭಗೀರಥ ಪ್ರಯತ್ನ[illegible] ನಡೆ ಸಾಗುತ್ತಿದೆ, ಅವರ ಸೈನ್ಯದ [illegible] ಅವಿರತವಾಗಿ ನಡೆ[illegible]. ಕುಮಿಂಟಾಂಗಿನ ಒಳಗಣ ಅವ್ಯವಸ್ಥೆ, [illegible], ಒಳಪಟ್ಟುಗಳು ಈ ಉರು[illegible] ಕಾರಣಗಳೆನಿಸಿವೆ. ಚಿಯಾಂಗ್ [illegible] ನಿವೃತ್ತರಾದವರಂತೆ ನಟಿಸಿ ಕ್ಯಾಂಟ[illegible]ಗೆ ಹೋಗಿ ಅಜ್ಞಾತವಾಸ ಮಾಡಿದ ಕಾಲ[illegible] ಸರಕಾರದ [illegible] ವ್ಯವಹಾರ[illegible] ನಡೆಯುತ್ತಿತ್ತು, ಅವರ ಪರಿಣಾಮ [illegible] ಎಂಬುದನ್ನು ಅವಲೋಕಿಸಿದರೆ [illegible] ಸರಕಾರದ ಅಪಜಯದ ಮೂಲ [illegible]ಗಳು ತೋರಬರುತ್ತವೆ.

ಚಿಯಾಂಗರ ಚಾಣಕ್ಯ ನೀತಿ

[illegible] ಅಧ್ಯಕ್ಷ ಚಿಯಾಂಗರು [illegible] ಜೆನ್ನರನ್ನು ಕಾರ್ಯಾಧ್ಯಕ್ಷರನ್ನಾಗಿ [illegible] ಮನಸ್ಸಿನಿಂದ ಕ್ಯಾಂಟ[illegible]ಗೆ ಹೋಗಲು ಕಾರಣವಿಷ್ಟೆ: ದಣಿದ ಜನರು [illegible] ಶಾಂತಿ ಎಂದು ಚಾತಕದಂತೆ ಬಾಯ್ಬಿ[illegible]. ತನ್ನ ಮಿಲಿಟರಿ ನೇತೃತ್ವವಿದ್ದುದ[illegible] ಕುಮಿಂಟಾಂಗಿಗೆ ಸೋಲಾಯಿತು [illegible] ಹಲವರು ತಿಳಿದುದರಿಂದ ಅದನ್ನು [illegible]ಸಲು ಅದೊಂದು ಸುಸಂಧಿ ಎಂಬುದೂ [illegible]. ಅಲ್ಲದೆ, ಕುಮಿಂಟಾಂಗಿನಲ್ಲಿ [illegible] ಪಕ್ಷದವರಿಗೆ ತಮ್ಮ ಆಸೆಯನ್ನು [illegible]ಕೊಳ್ಳಲು ಅವಕಾಶ ಕೊಟ್ಟಂತೆಯೂ [illegible]. ಅಸ್ತವ್ಯಸ್ತವಾದ ಕುಮಿಂಟಾಂಗ್ [illegible], ಯುದ್ಧೋಪಕರಣ ಮುಂತಾದವನ್ನು [illegible]ಕೊಳ್ಳಲು ಸಮಯ ದೊರಕಿದಂತಾ[illegible]. ಈ ಅಂಶಗಳನ್ನು ಗಮನಿಸಿ [illegible] ಚಿಯಾಂಗರು ಕುಮಿಂಟಾಂಗ್ ಆಡಳಿತೆಯ[illegible]ಗದಿಂದ ಕೆಲಕಾಲ ಅಸ್ತರಾದರು. ಆಗ [illegible] ಹೋದರೂ ಕುಮಿಂಟಾಂಗಿನ [illegible] ಜನರಲ್ಲರ ಪದವನ್ನು ಅವರು [illegible] ಆ ವಿಶ್ರಾಂತಿ ಕಾಲದಲ್ಲಿ [illegible] ಶಾಂಘಾಯಿ ಸ್ವಾಪ್ ಶಿಂಗ್ ಪ್ರದೇ[illegible] ತನ್ನ [illegible] ತಾಂಗ್ ಎನ್ ಪೋ[illegible] ಸೇನಾಪತಿಯನ್ನಾಗಿ ನಿಯಮಿಸಿ[illegible] ರಾಜಕೀಯ, ಸೈನಿಕ, ಮತ್ತು ಗುಪ್ತ [illegible] ಸಂಸ್ಥೆಗಳಲ್ಲಿ ತಮ್ಮ ಭಕ್ತರಾದ [illegible]ಗಳನ್ನು ಯಥೇಚ್ಛವಾಗಿ ತುಂಬಿ[illegible]. [illegible], [illegible], ಕ್ಯಾಂಟಿಂಗ್ ಎಂಬ ಸ್ಥಳಗಳಲ್ಲಿ [illegible] ಅನ್ಯಾಯಕವಾಗಿ ಸಾಗಿತು.

ಮತ್ತೆ ಮಹಾಯುದ್ಧದ ನಿರೀಕ್ಷೆ

[illegible] ಗುಪ್ತ [illegible]ದಿಂದ ಚಿಯಾಂ[illegible] ಸರಕಾರೀ ಅಧಿಕಾರಿಗಳಿಗೆ [illegible] ಸಂದೇಶಗಳನ್ನು ಕಳಿಸು[illegible]. ಸಂಧಿ[illegible]ಧಿಕಾರಿಗಳಿಗೆ ಅವರು [illegible] ದಿನವೂ ಇರಲಿಲ್ಲ. [illegible] ಒಪ್ಪಂದ ಅಸಾಧ್ಯ. [illegible] ಹಣವನ್ನು

ಪಡೆಯಬೇಕು ಎಂಬುದು ಅವರ ದೃಢ ನಿರ್ಧಾರ. ಅಗ್ನೇಯ[illegible] ಹೋಗಿ [illegible] ಪ್ರದೇಶ[illegible] (ಫೈರ್ ವಾಲ್) ಪಕ್ಷಿ [illegible] ಪರಿಗಣಿಸಬೇಕು ಎಂಬುದು ಅವರ ಯೋಜನೆ. ಅಂಥ ಸಮಯದಲ್ಲಿ ಗುಪ್ತ ದಳಗಳ ಕಮ್ಯುನಿಸ್ಟರಿಗೆ ಹಗಲಿರುಳೂ ತೊಂದರೆ ಕೊಡುವಂತೆ ಏರ್ಪಡಿಸಿ ಕಾದಿರುವುದು; ಮೊದಮೊದಲು ಕಮ್ಯುನಿಸ್ಟರ ಆಡಳಿತೆಯಲ್ಲಿ ಶಾಂತಿ ಸೌಖ್ಯವುಂಟಾದರೂ ಆಡಳಿತೆಯಲ್ಲಿ ಅವರಿಗೆ ಪರಿಜ್ಞಾನವಿಲ್ಲದ ಕಾರಣ ಪುನಃ ಪರಿಸ್ಥಿತಿ ಹದಗೆಟ್ಟು ತಮ್ಮ ಅನುಯಾಯಿಗಳು ಕ್ರಾಂತಿ ನಡೆಸಿ ಅವರ ಮೂಲಕ್ಕೆ ಕೊಡಲಿ ಪ್ರಹಾರ ಹಾಕಬಹುದು; ಇನ್ನೇನು ಎರಡು ಮೂರು ವರ್ಷಗಳಲ್ಲಿ ಮೂರನೆಯ ಜಾಗತಿಕ ಮಹಾಯುದ್ಧ ಪ್ರಾರಂಭವಾಗುವುದು ನಿಶ್ಚಿತ. ಆಗ ಅಮೇರಿಕದ ನೆರವು ಪಡೆದು ಫಾರ್ಮೋಸಾದಿಂದ ಹೊರಬಿದ್ದು ಕಮ್ಯುನಿಸ್ಟರನ್ನು ನಿರ್ಮೂಲ ಮಾಡಿ ಕುಮಿಂಟಾಂಗಿನ ಗದ್ದುಗೆಯನ್ನು ಪುನಃ ಏರಬಹುದು ಎಂಬುದು ಚಿಯಾಂಗರ ಕನಸು.

ಜನರಲ್ ಲಿ ವರ ಅಯಶಸ್ಸಿನ ಕಾರಣ

ಕಾರ್ಯಾಧ್ಯಕ್ಷ ಜನರಲ್ ಲಿ ತ್ಸುಂಗ್ ಜೆನ್ನನು ಚಿಯಾಂಗರ ಕನಸನ್ನು ಅನುಮೋದಿಸುವವನಲ್ಲ. ಕಮ್ಯುನಿಸ್ಟರೊಡನೆ ಕರಾರುಮಾಡಿಕೊಂಡು ಆಡಳಿತೆಯಲ್ಲಿ ಅಲ್ಪಭಾಗವನ್ನಾದರೂ ಪಡೆಯುವಂತಾದರೆ ಸ್ವಲ್ಪವಾದರೂ ಉಳಿದಂತೆ, ಹಾಗಲ್ಲದೆ ಯುದ್ಧವನ್ನೇ ಸಾಗಿಸಿದರೆ ಸರ್ವಲೋಪ ಖಂಡಿತ ಎಂಬುದು ಅವನ ಮತ. ಆದುದರಿಂದ ಮಯೋತ್ಸೇತಂಗನ ಎಂಟು ಅಂಶಗಳ ಶಾಂತಿಯ ಕರಾರಿಗೆ ಏನು ಉತ್ತರ ಕೊಡಬೇಕೆಂಬುದನ್ನು ನಿರ್ಣಯಿಸಲು ಸರಕಾರೀ ಮುತ್ಸದ್ದಿಗಳಿಗೆ ಹೇಳಿದನು. ಅವರಾದರೋ ಚಿಯಾಂಗರಿಂದ ಪದವಿ ಹೊಂದಿದ ಪಕ್ಕಾ ಸನಾತನಿಗಳು. ಕಮ್ಯುನಿಸ್ಟರೊಡನೆ ಅವರು ಆ ಶರಣಾಗತಿಯ ಶರ್ತಿನ ಪ್ರಕಾರ ಒಪ್ಪಂದ ಮಾಡಿಕೊಳ್ಳಕೂಡದು ಎಂದು ತಮ್ಮ ತೀರ್ಪನ್ನು ಅವರು ಪ್ರಕಟಿಸಿದರು. ಸರಕಾರೀ ಅಧಿಕಾರಿಗಳು, ಸೈನಿಕರು ಮತ್ತು ಗುಪ್ತಪೋಲೀಸರು ಇವರಲ್ಲಿ ಬಹುಸಂಖ್ಯರು ಚಿಯಾಂಗರ ಚೀಟಿ ಬಾರದೆ ಇತರ ಯಾರ ಆಜ್ಞೆಯನ್ನೂ ಪಾಲಿಸರು. ಹೀಗೆ ಅಸಹಾಯನಾಗಿ ಲಿ ತ್ಸುಂಗ್ ಜೆನ್ನನು ಕಮ್ಯುನಿಸ್ಟರೊಡನೆ ಕರಾರು ಮಾಡಿಕೊಳ್ಳುವುದರಲ್ಲಿ ಅಯಶಸ್ವಿಯಾದನು. ಕಮ್ಯುನಿಸ್ಟ ಮಯೋತ್ಸೇತಂಗನಾದರೂ, ಚಿಯಾಂಗ್ ಪಕ್ಷದ ಒಳಗುಟ್ಟನ್ನರಿತವನಿದ್ದುದರಿಂದ ಕುಮಿಂಟಾಂಗಿನ ಶಾಂತಿಪ್ರಯತ್ನವನ್ನು ಸಂಶಯ ದೃಷ್ಟಿಯಿಂದ ನೋಡಿದ್ದಲ್ಲದೆ, ಅವರ ಚಾರಕರು ಮಾಡಿದಂತೆಯೇ ತಾನಾದರೂ ಶಾಂತಿ ಪ್ರಯತ್ನದ ಕಾಲದಲ್ಲಿ ತನ್ನ ಸೈನ್ಯದ ಆಹಾರ ಉಪಕರಣಾದಿಗಳ ಪುನರ್ವ್ಯವಸ್ಥೆಯನ್ನು ಮಾಡಿಕೊಂಡು ತನ್ನ ಕರಾರಿನಲ್ಲಿ ಒಂದು ಅಂಶವನ್ನೂ ಬಿಡದೆ, ಸಡಿಲಿಸಗೊಡದೆ ಬಿಗಿಮಾಡಿಕೊಂಡಿದ್ದು ಸಂಧಾನ ವಿಫಲವಾದೊಡನೆ ದ್ವಿಗುಣೀಭೂತ ಸಾಹಸದಿಂದ ತನ್ನ ಸೈನ್ಯವನ್ನು ಮುಂಬಿಟ್ಟು ಪಟ್ಟಣಗಳಮೇಲೆ ಪಟ್ಟಣಗಳನ್ನು ಹಿಡಿದು ಶಾಂಘಾಯಿ ನಗರದಲ್ಲಿಯೂ ತನ್ನ ಜಯಭೇರಿಯನ್ನು ಹೊಡೆಯಿಸಿಬಿಟ್ಟನು. ಕುಮಿಂಟಾಂಗಿನ ಸೇನಾಪತಿಗಳು ಪೀಕಿಂಗನ್ನು ಕಮ್ಯುನಿಸ್ಟರಿಗೆ ವಹಿಸಿ ಅವರೊಡನೆ ಸೇರಿಕೊಂಡದ್ದು ಅವರ ಉತ್ಸಾಹ ಸಾಮರ್ಥ್ಯಗಳನ್ನು ಇಮ್ಮಡಿಸಿತು. ಪೀಕಿಂಗ್ ಸಂಧಾನದಲ್ಲಿ ಮಯೋತ್ಸೇತಂಗನು-ಒಟ್ಟು ಅಧಿಕಾರ ಸ್ಥಳಗಳಲ್ಲಿ ಮೂರನೆ ಒಂದಂಶ ತನ್ನ ಅಧ್ಯಕ್ಷತೆಗೊಳಪಟ್ಟು ಕಮ್ಯುನಿಸ್ಟರಿಂದ ತುಂಬಲ್ಪಡಬೇಕು, ಮಿಕ್ಕ ಮೂರನೆಯ ಎರಡಂಶದಲ್ಲಿ ಒಂದಂಶವನ್ನು ಲಿ ತ್ಸುಂಗ್ ಜೆನ್ನರ ಉಪಾಧ್ಯಕ್ಷತೆಯಲ್ಲಿ ಕಮ್ಯುನಿಸ್ಟರ ಒಪ್ಪಿಗೆ ಪಡೆದ ಕುಮಿಂಟಾಂಗ್ ಮುಖಂಡರೂ ಮತ್ತೊಂದಂಶವನ್ನು ಮಾರ್ಶಲ್ ಲಿ[illegible]ನರ ದ್ವಿತೀಯ ಉಪಾಧ್ಯಕ್ಷತೆಯಲ್ಲಿ "ಪ್ರಜಾತಂತ್ರವಾದಿ ಪಂಗಡವರೂ" ತುಂಬಬೇಕು-ಎಂದು ವಿಧಿಸಿದನು. ಇದಕ್ಕೆಲ್ಲ ಯಾಂಗ್ ತ್ಸೀ ನದಿಯನ್ನು ದಾಟಲು ಸರಕಾರ



ಲಂಡನ್ನಿನ ಅಗ್ನಿಶಾಮಕಗಳು: ಈಚೆಗೆ ಅರ್ಗೆಂಟಿನದ ರಾಯಭಾರಿಯ ಸಮಕ್ಷಮದಲ್ಲಿ ಲಂಡನ್ ನಗರದ ಅಗ್ನಿಶಾಮಕ ದಳಗಳು ತಮ್ಮ ಜಲ ಧಾರಾ ಪ್ರದರ್ಶನವನ್ನೇರ್ಪಡಿಸಿದಾಗಿನ ಚಿತ್ರ.



ಸಂಜೀವಿನಿ ಗಡ್ಡೆ— ಈ ಗಡ್ಡೆಯು ಸತ್ವಯುತವಾಗಿದ್ದು ಇದರ ಹಿಟ್ಟನ್ನು ಆಹಾರ ಧಾನ್ಯಗಳ ಹಿಟ್ಟಿನೊಂದಿಗೆ ಸೇರಿಸಿ ಪುರಿ, ಚಪಾತಿ, ಬಿಸ್ಕೀಟುಗಳನ್ನು ಮಾಡಲು ಉಪಯೋಗಿಸಬಹುದು. ಇದರಲ್ಲಿ ವಿಪುಲ ಪಿಷ್ಟ ಪದಾರ್ಥ ದೊರೆಯುವದರಿಂದ ಗ್ಲುಕೋಜ ತಯಾರಿಸಲೂ ಉಪಯೋಗಿಸಬಹುದು.

ಕಮ್ಯುನಿಸ್ಟರಿಗೆ ಮೊದಲು ಅವಕಾಶ ಕೊಡಬೇಕೆಂಬುದು ಕರಾರು. ಆ ಕರಾರನ್ನು ಹಾಕಿದ ಅವಧಿಯೊಳಗೆ ಪೂರಯಿಸದ ಕಾರಣ ಮಯೋತ್ಸೇತಂಗ್‌ನು ಬಲಾತ್ಕಾರದಿಂದ ನದಿಯನ್ನು ದಾಟುವಂತೆ ತನ್ನ ಸೈನಿಕರಿಗೆ ಆಜ್ಞಾಪಿಸಿ ಯುದ್ಧವನ್ನು ಯಥಾಪೂರ್ವ ಸಾಗಿಸಲು ಅವಕಾಶಕೊಟ್ಟನು. ಕಾರ್ಯಾಧ್ಯಕ್ಷ ಲಿ ತ್ಸುಂಗ್ ಜೆನ್ನನಿಗೆ ತನ್ನವರನ್ನು ಆ ಕರಾರಿಗೆ ಒಪ್ಪಿಸಲು ಸಾಧ್ಯವಾಗದಿರಲು ಚಿಯಾಂಗರ ಸನಾತನ ಅನುಯಾಯಿಗಳ ಪ್ರಬಲ ವಿರೋಧವೇ ಕಾರಣ. ಅವರು ಹಾಗೆ ಕರಾರನ್ನು ವಿರೋಧಿಸಲು ಅದರ ಮುಖ್ಯಾಂಗವಾದ ಕುಮಿಂಟಾಂಗ್ ಸೈನ್ಯವನ್ನು ಕಮ್ಯುನಿಸ್ಟ ದಲಗಳಲ್ಲಿ ಪುನರ್ವ್ಯವಸ್ಥೆಯಿಂದ ಸೇರಿಸಿಕೊಳ್ಳುವ ಅಂಶವಿದ್ದುದೇ ಹೇತು. ಅಂತೂ ಸಂಧಾನ ವಿಫಲವಾಯಿತು; ಕಮ್ಯುನಿಸ್ಟರು ಮುನ್ನುಗ್ಗುತ್ತಲೇ ಇದ್ದಾರೆ.

ಲೀಯ ವಾನಪ್ರಸ್ಥ

ಕುಮಿಂಟಾಂಗಿನ ಇಬ್ಬರು ಮುಖ್ಯ ಸಂಧಾನ-ಕರ್ತೃಗಳಾದ ಚಾಂಗ್ ಚಿಹ್ ಚುಂಗನೂ ಶಾಪೋಲಿಟ್ಸಿಯೂ ಕಮ್ಯುನಿಸ್ಟರೊಡನೆ ಸಹಕರಿಸುವ ನಿರ್ಧಾರದಿಂದ ಅವರಿಗೆ ತಮ್ಮ ಅಧಿಕಾರ ಬಲಾದಿಗಳನ್ನು ವಹಿಸಿ ಪೀಕಿಂಗಿನಲ್ಲಿ ಉಳಿದಿದ್ದಾರೆ. ಕಾರ್ಯಾಧ್ಯಕ್ಷ ಲೀ ತನ್ನ ಸಂಧಾನ ಧೋರಣೆ ವಿಫಲವಾದುದರಿಂದ ರಾಜೀನಾಮೆ ಕೊಡಲು ನಿರ್ಧರಿಸಿದನು; ಆದರೆ ಚಿಯಾಂಗರು ಅದಕ್ಕೊಪ್ಪಲಿಲ್ಲ. ಮತ್ತು ಎಲ್ಲ ಅಧಿಕಾರವನ್ನು ಮುಖ್ಯ ಮಂತ್ರಿಗೆ ವರ್ಗಾಯಿಸಿ ಅವನನ್ನು ಹೆಸರಿಗೆ ಮಾತ್ರ ಅಧ್ಯಕ್ಷನಾಗಿ ಉಳಿಯುವಂತೆ ಮಾಡಿದರು. ಆದದರಿಂದ ನಿರ್ವಿಣ್ಣನಾದ ಲಿ ತ್ಸುಂಗ ಜೆನ್ನನು ಕ್ಯಾಂಟನ್ನಿಗೆ ಹೋಗುವೆನೆಂದು ಗಂಟುಮೂಟೆಕಟ್ಟಿಕೊಂಡು ಸ್ವಪ್ರಾಂತವಾದ ಕ್ವಾಂಗ್ಸಿಯಲ್ಲಿಯ ಕ್ವಿಲಿನ್ ಎಂಬ ಸ್ಥಳಕ್ಕೆ ಹೋಗಿ ಸ್ವಸ್ಥವಾಗಿ ಇರತೊಡಗಿದ್ದಾನೆ. ತಾನೂ ತನ್ನ ಗೆಳೆಯ ಪೈಚಂಗ್‌ಹ್ಸಿಯೂ ಸಂಧಾನದಿಂದ ಕಮ್ಯುನಿಸ್ಟರನ್ನು ಒಲಿಸಿಕೊಂಡು ಕುಮಿಂಟಾಂಗಿನ ಮರ್ಯಾದೆಯನ್ನು ಯಥಾಶಕ್ತಿ ಉಳಿಸಬಲ್ಲೆವೆಂದು ಅವನ ನಂಬಿಕೆ. ಆದರೆ ಚಿಯಾಂಗರೂ ಅವರ ಬಾಲಬಡಿಕರೂ ಅದಕ್ಕೆ ಅವಕಾಶ ಕೊಡದುದರಿಂದ ಅವರೂ ಅವರ ಮಿತ್ರ ಹೋಯಿಂಗ್ ಚಿನ್ನನೂ ಕಮ್ಯುನಿಸ್ಟರಿಂದ ಬಡಿತ ತಿನ್ನುತ್ತ ಒದ್ದಾಡುತ್ತ ಬಿದ್ದಿರಲಿ ಎಂದು ತಾಟಸ್ಥ್ಯ ವಹಿಸಿ ತಣ್ಣಗೆ ಕುಳಿತಿದ್ದಾನೆ.

ಚಿಯಾಂಗರ ಮೂರನೆಯ ಮಹಾಯುದ್ಧದ ಕನಸು, ಅಮೇರಿಕದ ನೆರವಿನ ಹಂಬಲು, ಪುನಃ ಕುಮಿಂಟಾಂಗಿನ ಗದ್ದುಗೆಯೇರುವ ಆಸೆ ಇವುಗಳು ಫಲಿಸುವ ಸಂಭವವನ್ನು ಕಮ್ಯುನಿಸ್ಟರ ಮುನ್ನಡೆ ಕಡಿಮೆ ಮಾಡುತ್ತಿದೆ; ಅಮೇರಿಕದ ತಾಟಸ್ಥ್ಯ ಮುಂಬರಿಯುವ ಸಂಭವ ಅವರ ಕನಸಿಗೆ ಬಿನ್ನಾಣ ಹಿಡಿಸಿದೆ. ಕಮ್ಯುನಿಸ್ಟರ ಅತ್ಯಂತಿಕ ವಿಜಯ ಅವರೆಣಿಕೆಯಂತೆ ೧೯೫೦ ರ ಒಳಗೆ ಸಾಧ್ಯವಾದರೆ ಚಿಯಾಂಗರ ಅವತಾರ ಮುಗಿಯಿತೆಂದೇ ಹೇಳಬೇಕು. —ಅರ್ಜುನ

ಕೇಡಿ ಮಕ್ಕಳು

Juvenile delinquents— ಎಳಕೇಡಿಗಳು ಎಂಬ ಒಂದು ವರ್ಗದ ಹೆಸರು ಭಾರತೀಯರಿಗೆ ಹೊಸದು. ಪಾಶ್ಚಾತ್ಯ ದೇಶಗಳಲ್ಲಿ ಅಪ್ರಾಯಸ್ಥ ಕೇಡಿಗಳನ್ನು ಸಾಮೂಹಿಕವಾಗಿ ಸಾಕುವ, ಶಿಕ್ಷಣ ಕೊಡುವ ವಿಶೇಷ ಶಾಲೆಗಳು ಹಲಗಾಲದಿಂದ ರೂಢಿಯಲ್ಲಿ ಬಂದಿವೆ. ಹಿಂದುಸ್ತಾನದಲ್ಲೂ ಅಂಥ ಶಾಲೆಗಳನ್ನೀಗ ತೆರೆಯಲಾಗುತ್ತಿದೆ. ಮದ್ರಾಸ್ ಸರಕಾರ ಇತ್ತೀಚೆಗೆ ಈ ಪ್ರಶ್ನೆಯತ್ತ ಹೆಚ್ಚು ಲಕ್ಷ್ಯ ಹಾಕುತ್ತಿದೆಯೆಂದು ತಿಳಿದು ಬಂದಿದೆ.

ಸಾಮಾಜಿಕ ಹೊಣೆಗಾರಿಕೆಯ ಅಭಾವ

ಕೆಸರನ್ನು ಮುಟ್ಟಿ ಅನಂತರ ಕೈತೊಳೆದುಕೊಳ್ಳುವುದಕ್ಕಿಂತ ಮುಟ್ಟದೆ ಇರುವುದೇ ಲೇಸು ಎಂಬೊಂದು ಹಳೆಯ ಗಾದೆಯಿದೆ. ಅಪ್ರಾಯಸ್ಥರನ್ನು ಪಾಲಿಸುವ, ಪೋಷಿಸುವ ಕೆಲಸ ತಾಯ್ತಂದೆಯರದು. ಹಿಂದೆ ಎಳಕೇಡಿಗಳೇ ಇದ್ದಿಲ್ಲವೆಂದಲ್ಲ. ಇದ್ದರೆ ಅನಾಥರಾಗಿ ಬೀದಿಗೆ ಬೀಳುವ ಎಳಕೇಡಿಗಳ ಸಂಖ್ಯೆ ಇಷ್ಟಿರಲಿಲ್ಲ. ಸಾಮಾಜಿಕ ಕಟ್ಟುಪಾಡುಗಳ ಬಲದಿಂದ, ಮತ್ತು ನೀತಿ ಧರ್ಮಗಳ ಪ್ರಾಚುರ್ಯದ ದೆಸೆಯಿಂದ ಅರಕ್ಷಿತರಾದ ಮಕ್ಕಳನ್ನು ಸಾಮಾಜಿಕರು ಅಲಕ್ಷಿಸಿ ಬೀದಿಗೆ ಬಿಡುವುದು ಬಹಳ ಕಡಿಮೆಯಾಗಿತ್ತು. ಅದರಿಂದಲೇ ಅಂಥ ಎಳಕೇಡಿಗಳ ಸರಕಾರೀ ಅಥವಾ ಸಾರ್ವಜನಿಕ ಶಾಲೆಗಳ ಅವಶ್ಯಕತೆ ಅಷ್ಟಿರಲಿಲ್ಲ. ಈಗ ಪಾಶ್ಚಾತ್ಯ ಸಂಸ್ಕೃತಿಯ ಹಲವಾರು ಕಲ್ಪನೆಗಳನ್ನು ವ್ಯವಹಾರದಲ್ಲಿ ತಂದುಕೊಂಡು ನೀತಿ ಧರ್ಮ ಔದಾರ್ಯಗಳ ಶೈಥಿಲ್ಯವನ್ನು ಸಾಮಾಜಿಕರು ಉಂಟು ಮಾಡಿಕೊಂಡುದರಿಂದ ಅಪರಾಧ ಮಾಡುವ ಮಕ್ಕಳ ಸಂಖ್ಯೆ ಹೆಚ್ಚಿದೆ; ಅವರ ಅನಾಥತೆಯೂ ಬೆಳೆಯುತ್ತಿದೆ. ಮದುವೆಯ ಕಲ್ಪನೆಯಲ್ಲಿರುವ ಪಾವಿತ್ರ್ಯದ ಶ್ರದ್ಧೆ, ಮಾತಾಪಿತೃತ್ವದ ಹೊಣೆಯಾಗಿರುವ ಮಹತ್ವ, ಗೃಹಸ್ಥರ ಸಾಮಾಜಿಕ ಜವಾಬುದಾರಿ ಇವುಗಳನ್ನು ಶಿಕ್ಷಣ, ಉಪನ್ಯಾಸ, ಪ್ರಚಾರ ಲೇಖನಗಳಿಂದ ಶಿಥಿಲಗೊಳಿಸಿದ ಪರಿಣಾಮವಾಗಿ ಇಂಥ ಮನೋರೋಗಿಗಳ (Mental—patients) ಸಂಖ್ಯೆ ಬೆಳೆಯ ತೊಡಗಿದೆ. ಇವುಗಳನ್ನು ಬೆಳೆಸಿ ಅನಂತರ ಪ್ರತೀಕಾರೋಪಾಯವನ್ನು ಚಿಂತಿಸುವುದಕ್ಕಿಂತ ಇವುಗಳ ಬೆಳೆ ಏರದಂತೆ ಮೂಲಭೂತವಾದ ಸಾಮಾಜಿಕ ನೀತಿ, ಕರ್ತವ್ಯ ಭಾವನೆ, ಹೊಣೆಗಾರಿಕೆಗಳನ್ನು ಶಿಕ್ಷಣ, ಕಲೆ, ಸಾಹಿತ್ಯ, ಪ್ರಚಾರಲೇಖನಗಳ ಮೂಲಕ ಸಾಮಾಜಿಕ ವ್ಯಕ್ತಿಗಳಲ್ಲಿ ಬೇರೂರುವಂತೆ ಮಾಡುವ ಪ್ರಯತ್ನ ಯೋಗ್ಯವೆಂಬುದು ಮೇಲಿನ ಗಾದೆಯಿಂದ ತಿಳಿದು ಬರುವುದಿಲ್ಲವೆ!

ಧರ್ಮಶೀಲತೆ ಬೆಳೆಯಬೇಕು

ಅನಾರೋಗ್ಯಕರ ವಾತಾವರಣವನ್ನು ಬೆಳೆಯಗೊಟ್ಟು ಅದರಿಂದ ರೋಗರುಜೆಗಳು ಅಂಟಲು ಆಸ್ಪದಕೊಟ್ಟು ಅನಂತರ ವೈದ್ಯೋಪಚಾರದ ಸೌಲಭ್ಯವನ್ನು ಕಲ್ಪಿಸುವುದಕ್ಕಿಂತ ಅಂಥ ವಾತಾವರಣ ಉಂಟಾಗದಂತೆ ಎಚ್ಚರಿಕೆ ತೆಗೆದುಕೊಳ್ಳುವ ಬುದ್ಧಿ ಸರಕಾರದಲ್ಲೂ, ಸಮಾಜ ನೇತೃಗಳಲ್ಲೂ ಉದಯಿಸಬೇಕಾಗಿದೆ. ಮಡಿವಂತಿಕೆಯೆಂದು ಧರ್ಮಶೀಲತೆಯನ್ನು ಹಳಿಯುವ ಪ್ರವೃತ್ತಿಯನ್ನು ಬಿಟ್ಟಲ್ಲದೆ ಸಮಾಜದ ನೀತಿಯ ನೆಲೆಗಟ್ಟನ್ನು ಭದ್ರಗೊಳಿಸುವುದು ಅಸಾಧ್ಯ. ಯಾವುದಾದರೂ ಅತಿಯಾದರೆ ಕೆಟ್ಟದೆಂಬುದು ನಿಜ; ಆದರೆ ಈಗ ಅತಿಶಯ ಒತ್ತಟ್ಟಿಗಿರಲಿ, ಕನಿಷ್ಠಾವಧಿಯ ನೀತಿಮತ್ತೆಗೂ ವಾಕ್ಯದಲ್ಲಲ್ಲದೆ ಕಾರ್ಯದಲ್ಲಿ ಪ್ರೋತ್ಸಾಹ ಸಿಕ್ಕುತ್ತಿಲ್ಲ. ಸಂಸ್ಕಾರಕ್ಕೆ ಗೆದ್ದಲು ಹಿಡಿಯುವಂತೆ ಮಾಡುವ ವೈಲಾಸಿಕ "ಕಲೆಗಾರಿಕೆ", "ನಾಗರಿಕ" ನಡೆನುಡಿ ನಮ್ಮಲ್ಲಿ ಪ್ರವೇಶ ದೊರಕಿಸಿಕೊಂಡು ನಮ್ಮ ಜನರ ದೂರದರ್ಶಿತ್ವ ಅನಾಗತವಿಧಾತತೆ, ಪರಿಣಾಮ ಚಿಂತನ ಪ್ರವೃತ್ತಿಗಳನ್ನು ಕುಂಠಿತಗೊಳಿಸಿ ಅವರಲ್ಲಿ ಸಂಕುಚಿತತೆ ಹುಟ್ಟಿ, ಯದೃಚ್ಛವಿಷ್ಕೃತ್ಯ, ಸದ್ಯಃ ಫಲನಿಷ್ಠತೆಗಳನ್ನು ಬೆಳೆಯಗೊಟ್ಟಿವೆ. ಇದರಿಂದ ಕುಟುಂಬ, ಅದರ ಪರಸ್ಪರ ವೈಯಕ್ತಿಕ ಮತ್ತು ಸಾಮಾಜಿಕ ಹೊಣೆಗಾರಿಕೆ ಕರ್ತವ್ಯ ದೃಷ್ಟಿಗಳು ಲುಪ್ತವಾಗಿ ಅಪರಾಧಿತ್ವವು ಹಿರಿಕಿರಿಯರಿಬ್ಬರಲ್ಲೂ ವಿವಿಧಾಂಶದಲ್ಲಿ ಮನೆಮಾಡಿಕೊಳ್ಳತೊಡಗಿದ್ದು ಇಂದು ನಮ್ಮ ವಿವಿಧ ವ್ಯವಹಾರ ಕ್ಷೇತ್ರಗಳಲ್ಲಿ ಕಂಡುಬರುತ್ತದೆ. ಇದು ಇಲ್ಲದಂತಾಗಲು ಮೂಲವನ್ನೇ ಹಿಡಿದು ನಮ್ಮ ಸಾಮಾಜಿಕ ಮತ್ತು ಕೌಟುಂಬಿಕ ಹೊಣೆಗಾರಿಕೆ ಪರಿಣಾಮದರ್ಶಕತೆಗಳನ್ನು ತರ್ಕಿಸುವ, ಆಚರಿಸುವ ಪ್ರವೃತ್ತಿಯನ್ನು ಜನರಲ್ಲಿ ಬೆಳೆಸುವ ಸಾಹಿತ್ಯ ಉದಯವಾಗಬೇಕು.

—ಭವರೋಗ ಭೇಷಜ

ರಾಷ್ಟ್ರೀಯ ವ್ಯಕ್ತಿತ್ವವಿಲ್ಲದ ರಾಷ್ಟ್ರ

ವ್ಯಕ್ತಿತ್ವ ಬೆಳೆಯುವುದು ಸದ್ಗುಣಗಳ ಪೋಷಣೆಯಿಂದ. ಅಂಥ ಸದ್ಗುಣಗಳು ನಮ್ಮಲ್ಲಿಂದು ಅಲ್ಪಸಂಖ್ಯವಾಗಿವೆ ಎಂಬ ಅಂಶವನ್ನು ಲಾಲಾ ಸುರಂ ರಾಯರು "ಟ್ರಿಬ್ಯೂನಿ" ನಲ್ಲಿ ವಿಶದಪಡಿಸಿದ್ದಾರೆ.

ನಮ್ಮ ನೈರ್ಮಲ್ಯದತ್ತ ಲಕ್ಷಹಾಕಿದರೆ ಏನು ಕಾಣಬೇಕು? ಪ್ರಾಮಾಣಿಕತೆಯತ್ತ ದೃಷ್ಟಿತಿರುಗಿಸಿದರೆ ನೋಡುವದೇನನ್ನು? ಪದಾರ್ಥ ಮೂಲ್ಯ ನಿರ್ಣಯದ ಬುದ್ಧಿಯತ್ತ ಗಮನಿಸಿದರೆ ಏನೆನ್ನಬೇಕು?

ನಗರಗಳಿಂದ ಬೆಳೆದು ಬರುತ್ತಿರುವ ನಮ್ಮೀ ನಾಗರಿಕತೆಯ ಹೊಲಸುಗಳನ್ನು ಬಣ್ಣಿಸಲು ಸಾಧ್ಯವೆ? ಹೊರನಾಡಿನವನು ಭಾರತದ ಕೀರ್ತಿಯನ್ನು ಕೇಳಿ ಒಳ ಹೊಕ್ಕರೆ, ಅಲ್ಲಿ ಆತನಿಗೆ ಕಾಣಿಸುವುದೇನು? 'ದೂರತಃ ಪರ್ವತೋರಮ್ಯಃ' —ಸಮೀಪಿಸಿದರೆ ಕಲ್ಲು ಮುಳ್ಳು, ಹಳ್ಳತಿಟ್ಟು! ಇಲ್ಲಿರುವುದು ದುಃಖ, ದಾರಿದ್ರ್ಯ, ದೈನ್ಯ; ಆದರೂ ಸುಳ್ಳು ಸುಳ್ಳೆ ದೇವರನಾಮ ಹಾಡುವುದು, ಭಜನೆ ಪೂಜೆಗಳನ್ನು ಮಾಡುವುದು! ಇದನ್ನು ಕಂಡು ಆತನೆಂದ " ಈ ಅಧ್ಯಾತ್ಮಿಕತೆ ಮತ್ತು ಈ ಕೊಳೆ ಸ್ವಲ್ಪ ಕಡಿಮೆಯಾದರೆ ಒಳಿತು" ಹೀಗೆ ದೇವತಾರಾಧನೆಮಾಡುವ ವೇಳೆಯನ್ನು ಸೆಗಣಿಯ ರಾಶಿ, ಕೊಳೆತು ನಾರುವ ಕೆರೆ, ವೈತರಣಿಯಂಥ (ಚರಂಡಿ) ಗಟಾರಗಳು ಇವುಗಳನ್ನು ಹಳ್ಳಿ ಪಟ್ಟಣಗಳ ಓಣಿ ಓಣಿಗಳಿಂದ ತೆಗೆದೊಗೆಯಲು ಬಳಸಿದರೆ ಜನ್ಮ ಸಾರ್ಥಕವಾದೀತು.

ವ್ಯಾಪಾರ ವ್ಯವಹಾರವನ್ನು ಕಂಡರೆ ಕಣ್ಣು ಮುಚ್ಚಿಕೊಳ್ಳಬೇಕು! ಅದರಲ್ಲಿಯ ನೀತಿಯೋ ಕೇವಲ ದುರ್ನೀತಿ. ನಮ್ಮ ಕೇಂದ್ರ ಸರಕಾರದ ವಾಣಿಜ್ಯ ಮಂತ್ರಿ ಕೆ. ಸಿ. ನಿಯೋಗಿಯವರಿಗೆ ಬಂದ ಅಮೇರಿಕದ ಪತ್ರದಲ್ಲಿರುವಂತೆ ಕಳಿಸಿದ ಸಾಮಾನುಗಳಲ್ಲಿ ಸಜೀವ ಮತ್ತು ನಿರ್ಜೀವ ಹುಳುಗಳು, ಕಲ್ಲುಗಳು, ಇಲಿ ಹೆಗ್ಗಣಗಳ ಹಿಕ್ಕೆಗಳು ಇವು ತುಂಬಿದ್ದುವಂತೆ. ಕಲ್ಲುಗಳನ್ನು ಬೇಕೆಂದೇ ನೆಲಗಡಲೆಯೊಡನೆ ಬೆರಸಲಾಗಿತ್ತು. ಕತ್ತ ಮತ್ತು ಕತ್ತದ ಸಾಮಾನುಗಳು ಹರಕು ಹರಕಾಗಿದ್ದವು. ಹೀಗೇ ಇತರ ಸಾಮಾನುಗಳೂ ವಸ್ತ್ರ ಬಟ್ಟೆಗಳೂ ಬಹಳ ಕೆಳಮಟ್ಟದವಿದ್ದವಂತೆ.

'ನಿರ್ವೀರ್ಯಮುರ್ವೀತಳಂ'

ದಿವಂಗತ ರವೀಂದ್ರನಾಥ ಠಾಕೂರರೆಂದಂತೆ ನಮ್ಮದು ನಿಜವಾಗಿಯೂ ದೇವರ ತಿರಸ್ಕಾರಕ್ಕೆ ಗುರಿಯಾದ ದೇಶವೆನಿಸುತ್ತದೆ. ನಮ್ಮಲ್ಲಿ ಕಾರ್ಯಪ್ರಯತ್ನವೇ ಇಲ್ಲ; ನಮ್ಮಲ್ಲಿ ಜೀವಕಳೆಯನ್ನು ತುಂಬುವವರು ಯಾರೂ ಇಲ್ಲ. ನಮ್ಮ ಸುತ್ತುಮುತ್ತಿನಲ್ಲಿ ಯಾರೂ ವಿಚಾರ ಮಾಡುವಂತೆ, ಭಾವಿಸುತ್ತಿರುವಂತೆ, ಕೆಲಸ ಮಾಡುತ್ತಿರುವಂತೆ ತೋರುವುದಿಲ್ಲ. ಯಾರಿಗೂ ಮಹತ್ಕಾರ್ಯ ಸಾಧನೆ, ನಿಜವಾಗಿ ಬಾಳುವುದು ಎಂಬುದರ ಅರಿವಿರುವಂತೆ ತೋರುವುದಿಲ್ಲ. ಎಲ್ಲರೂ ಉಣ್ಣುತ್ತಾರೆ, ಕಚೇರಿಯ ಕೆಲಸ ಮಾಡುತ್ತಾರೆ, ಹೊಗೆಬತ್ತಿ ಸೇದುತ್ತಾರೆ, ಮಲಗುತ್ತಾರೆ, ಅರ್ಥವಿಲ್ಲದ ಮಾತುಗಳನ್ನು ಆಡುತ್ತಾರೆ; ಭಾವನೆ ಎದ್ದರೆ ಭಾವನಾಪರವಶರಾಗುತ್ತಾರೆ. ಸಂಪೂರ್ಣ ಚೈತನ್ಯಮಯರಾದ, ಬಲಿಷ್ಠರಾದ, ಕಾರ್ಯದಕ್ಷರಾದ ವ್ಯಕ್ತಿಗಳಿಲ್ಲವಲ್ಲ ಎಂದು ಸಂತಾಪವಾಗುತ್ತದೆ. ಇವರೆಲ್ಲರೂ ನೆರಳುಗಳು, ಜಗತ್ತನ್ನು ಮುಟ್ಟದೆ ಮೇಲಿಂದ ಮೇಲೆ ಹೋರಾಡುವ ಹತ್ತಿಯ ಹಾಳೆಗಳು!

ರವೀಂದ್ರನಾಥರೆಂದುದು ಸತ್ಯ; ಅವರೆಂದೂ ಅಸತ್ಯವಾಡುವವರಲ್ಲ. ಭಾರತೀಯ ಸಮಾಜದ ಯಾವ ನೆಲೆಯನ್ನು ನೋಡಿದರೂ ಸರಿ; ಒಂದೂ ಭಾರತೀಯ ರಾಷ್ಟ್ರೀಯ ವ್ಯಕ್ತಿತ್ವಕ್ಕೆ ನಿದರ್ಶನವಾಗಿ ನಿಲ್ಲುವಂಥ ವ್ಯಕ್ತಿಗಳನ್ನೊಳಗೊಂಡಿಲ್ಲ. ರಾಧಾಕೃಷ್ಣ, ನೆಹರು, ಪಟೇಲರಂತಹ ಪ್ರತಿಭಾವಂತರಿರುವದು ನಿಜ; ಆದರೆ ಅವರ ಸಂಖ್ಯೆ ಬೆರಳಲ್ಲಿ ಎಣಿಸುವಷ್ಟೇ ಸರಿ. ದಕ್ಷಿಣ ಅಫ್ರಿಕದ ಬಿಳಿಯನೊಬ್ಬ ಹೇಳಿದ್ದ: "ನೀವು ಹೇಳುತ್ತೀರಿ, ಗಾಂಧಿ ಠಾಕೂರರಂಥವರನ್ನು ನಮ್ಮ ದೇಶ ಪಡೆದಿದೆಯೆಂದು; ಆದರೆ ನಿಮಗಿಷ್ಟು ಗೊತ್ತಿಲ್ಲ-ನಾವು ಸೆಣಸಬೇಕಾಗಿ ಬಂದಿರುವದು ಅವರ ಹತ್ತಿರ ಅಲ್ಲ ನಿಮ್ಮ ಹತ್ತಿರ" ಈ ಮಾತು ಕ್ರೂರವಾಗಿದ್ದರೂ ಸತ್ಯಕ್ಕೆ ಹತ್ತಿರವಾಗಿಲ್ಲವೆ?

ಹಣಕ್ಕಲ್ಲದೆ ಗುಣಕ್ಕೆ ಪುರಸ್ಕಾರವಿಲ್ಲ

ನಮ್ಮ ಧ್ಯೇಯಗಳು, ಆದರ್ಶಗಳು ನಮ್ಮ ಗುಣವನ್ನು ರೂಪಿಸುವುವು. ಆದರೀಗ ನಮ್ಮ ಪ್ರಾಚೀನ ಉದಾತ್ತ ಧ್ಯೇಯಗಳೆಲ್ಲಿ? ಎಲ್ಲ ಮಣ್ಣು ಪಾಲಾಗಿವೆ. ನಮ್ಮ ಜೀವನಕ್ರಮ ಬದಲಾಗಿದೆ, ವಸ್ತುಗಳಿಗೆ ಬೆಲೆ ಕೊಡುವ ನಮ್ಮ ಬುದ್ಧಿ ಪರಿವರ್ತನ ಹೊಂದಿದೆ. "ಗುಣಾಃ ಪೂಜಾಸ್ಥಾನಂ" ಎಂಬ ತತ್ವವನ್ನು ಬಿಟ್ಟು ನಾವೀಗ "ಸರ್ವೇ ಗುಣಾಃ ಕಾಂಚನಮಾಶ್ರಯಂತೇ" ಎಂಬ ಮಾತನ್ನು ಅನುಮೋದಿಸುತ್ತಿದ್ದೇವೆ. ಸೇವೆ, ತ್ಯಾಗ, ಸರಳಜೀವನ, ಉದಾತ್ತ ವಿಚಾರ ಎಂಬ ಸನಾತನ ಧರ್ಮಗಳನ್ನು ಗಾಳಿಗೆ ತೂರಿಬಿಟ್ಟಿದ್ದೇವೆ. ನಮ್ಮ ವೈಭವಪೂರ್ಣವಾದ ಇತಿಹಾಸ ಮತ್ತು ಆಧ್ಯಾತ್ಮಿಕ ಪಿತ್ರಾರ್ಜಿತಗಳಲ್ಲಿ ಇಂದು ಉಳಿದಿರುವುದೇನು? ಈ ಯಂತ್ರಯುಗದ ನಿರ್ದಯ ವಾಸ್ತವತೆ ಅವನ್ನೆಲ್ಲ ಕುಟ್ಟಿಪುಡಿಮಾಡಿ ಚೆಲ್ಲಿದೆ.

ಹೀಗೆ ನಮ್ಮ ಪ್ರಾಚೀನ ಧ್ಯೇಯಗಳೆಲ್ಲ ತಿರಸ್ಕೃತವಾಗುತ್ತ ಬಂದಿರುವುದು ಶುಭ ಲಕ್ಷಣವೆ? ಹಾಗೆ ತಿರಸ್ಕರಿಸಿದರೆ ಮತ್ತಾವ ಧ್ಯೇಯಗಳನ್ನಿಟ್ಟುಕೊಳ್ಳಬೇಕು? ನಮ್ಮ ರಾಷ್ಟ್ರೀಯ ವ್ಯಕ್ತಿತ್ವ ಎಂಥದಾಗಬೇಕು? ನಮ್ಮ ಸರಕಾರವೀಗ ಲೌಕಿಕವಾಗಿದೆ. ಹಾಗಿದ್ದರೆ ಅದು ಪಾಶ್ಚಾತ್ಯರಿಂದ ಹೇಗೆ ಭಿನ್ನವೆನಿಸಬೇಕು? ನಮ್ಮ ಸಂಸ್ಕೃತಿ ಎಂಬುದು ಇರುವುದೇ ಆದರೆ ಅದು ಹೇಗೆ ಬೆಳೆಯಬೇಕು? ಅದರ ರಚನೆ ಎಂತಿರಬೇಕು? ಅಥವಾ ಅದು ಪಾಶ್ಚಾತ್ಯ ಸಂಸ್ಕೃತಿಯ ಬಣ್ಣಗೆಟ್ಟ ಛಾಯೆಯಾಗಬೇಕೆ? ನಮ್ಮ ದೈನಂದಿನ ಆಚಾರವಿಚಾರಗಳನ್ನು ಅವಲೋಕಿಸಿದರೆ ನಾವು ಬಾಯಿಂದ ಒಪ್ಪಿಕೊಳ್ಳದಿದ್ದರೂ ಅತಿ ಶೀಘ್ರಗತಿಯಿಂದ ಪಾಶ್ಚಾತ್ಯ ಸಂಸ್ಕೃತಿಯನ್ನು ಅಪ್ಪುತ್ತಿದ್ದೇವೆ ಎಂಬುದು ಗೊತ್ತಾಗುತ್ತದೆ. ಹೊರಹೊರಗೆ ನಾವು ಗಾಂಧೀವಾದವನ್ನು ಹೊಗಳಿದರೂ ಜಪಾನು ತುರ್ಕಿಗಳಂತೆ ನಾವಾದರೂ ಪಾಶ್ಚಾತ್ಯಾನುಕರಣದಿಂದಲೇ ನಮ್ಮ ಉದ್ಧಾರವೆಂದು ಒಳಗೆ ನಂಬಿಗೆ ತಾಳಿದ್ದೇವೆ. ಕಾಪಟ್ಯ ಮತ್ತು ಆಧ್ಯಾತ್ಮಿಕ ವಿನಾಶವನ್ನು ಕಡೆಗಟ್ಟಿ ರಾಷ್ಟ್ರೀಯ ವ್ಯಕ್ತಿತ್ವವನ್ನು ರೂಪಿಸಬೇಕಾದರೆ ತಡಮಾಡದೆ ನಾವು ಮೇಲಿನ ಸಂಗತಿಗಳತ್ತ ಲಕ್ಷ್ಯಹಾಕಿ ಕಾರ್ಯಾಸಕ್ತರಾಗಬೇಕಾಗಿದೆ.

ಮೂಲೆ ಮೂಲೆಗಳಿಂದ

ಗ್ರೀಕ್ ಸರಕಾರೀ ದಲಗಳು ಎರಡು ಸಲ ಅಲ್ಬೇನಿಯದ ಗಡಿಯಲ್ಲಿ ನುಗ್ಗಲು ಪ್ರಯತ್ನಿಸಿ ರಕ್ಷಕದಲದವರೊಡನೆಸೆಣಸಿ ಹಿಮ್ಮೆಟ್ಟಿದವೆಂದು ಅಲ್ಬೇನಿಯದ ಸೈನ್ಯದವರಿಂದ ತಿಳಿದುಬಂದಿದೆ.

ವಾಯವ್ಯಪ್ರದೇಶದಲ್ಲಿ ದೊಡ್ಡ ಆಘಾತವನ್ನು ಹೊಂದಿದ **ಗ್ರೀಕ್ ದಂಗೆಗಾರರು** ಹಿಮ್ಮೆಟ್ಟುತ್ತಿದ್ದಾರೆಂದೂ ಸರಕಾರೀ ದಲಗಳು ಪ್ರೆಸ್ಪ ಸರೋವರದ ಸಮೀಪದಲ್ಲಿರುವ ಅವರ ರಾಜಧಾನಿಯತ್ತ ಧಾವಿಸುತ್ತಿದ್ದಾರೆಂದೂ ಸುದ್ದಿ.

ಯುರೋಪ್ ಸಮಿತಿಯ 'ಮಂತ್ರಿಮಂಡಲ'ದ ವಿದೇಶಮಂತ್ರಿಗಳು ವಿಚಾರವಿನಿಮಯ ಸಭೆಯ ಕಾರ್ಯಾಂಗದ ಪಟ್ಟಿಯ ಕರಡನ್ನು ಸ್ವೀಕರಿಸಿತು. ಈ ಸಮಿತಿಗೆ ಸೇರಲು ಐಸಲೆಂಡಿನ ಸರಕಾರವು ತನ್ನ ಒಪ್ಪಿಗೆಯಿತ್ತಿದೆಯೆಂದೂ ತಿಳಿಸಿದೆ.

ಬಲಾತ್ಕಾರದಿಂದ ಸಿರಿಯದ ಆಡಳಿತೆಯನ್ನು ವಹಿಸಿಕೊಂಡ ಅಧ್ಯಕ್ಷ ಹುಸ್ನಿ ಜೈಮನನ್ನೂ ಅವನ ಮುಖ್ಯಮಂತ್ರಿ ಡಾ. ಮೋಸೇನ ಬರಾಜಿಯನ್ನೂ ಪ್ರತಿಕ್ರಾಂತಿಕಾರರು ಗುಂಡು ಹಾಕಿಕೊಂದರು. ಕರ್ನಲ್ ಸಮಿಹಿನ್ನವಿ ಪ್ರತಿಕ್ರಾಂತಿಕಾರರ ಮುಖಂಡನು; ಮೊದಲು ಅವನು ಜೈಮನ ಕೈಕೆಳಗಿನ ಸೈನಿಕ ಅಧಿಕಾರಿಯಾಗಿದ್ದನು.

ಹೇಗಿನಲ್ಲಿ ನಡೆಯಲಿರುವ ದುಂಡುಮೇಜಿನ ಪರಿಷತ್ತಿನ **ಇಂಡೊನೇಶಿಯನ್ ಪ್ರತಿನಿಧಿಗಳು** ಸ್ವತಂತ್ರ ಸಾರ್ವಭೌಮ ಮಹಾಮಂಡಲಿಯ ಸಡುಗಾಲ ಸರಕಾರವನ್ನು ರಚಿಸಲು ಮೂರು ಜನರ ಒಂದು ಸಮಿತಿಯನ್ನು ನಿಯಮಿಸಲಿದ್ದಾರೆ.

ಮೇಕ್ಸಿಲದಲ್ಲಿಯ ದಂಗೆಗಾರರ ಬಲಿಷ್ಠ ಠಾಣೆಗಳಾದ ವುಂಡ್ವಿನ್ ಮತ್ತು ಥೀಡಾ ಎಂಬೆರಡನ್ನು **ಬ್ರಹ್ಮೀ ಸರಕಾರೀ ದಲಗಳು** ಆಕ್ರಮಿಸಿವೆಯೆಂದು ಸರಕಾರೀ ಸೈನಿಕ ಆಕಾಶವಾಣಿ ತಿಳಿಸುತ್ತದೆ. ಮೌಲ್ಮೇನ್ ಜಿಲ್ಹೆಯಲ್ಲಿ ೨೦ ಜನ ದಂಗೆಗಾರರನ್ನು ಕೊಲ್ಲಲಾಯಿತು, ೮ ಜನರನ್ನು ಸೆರೆಹಿಡಿಯಲಾಯಿತಂತೆ.

ಯುಗೋಸ್ಲೇವಿಯದ ಸರಕಾರವು ತನ್ನ ತಪ್ಪಲ್ಲವೆಂದು ಇದೀಗ ಸೋವಿಯಟ್ ರಶಿಯವು ಧಂಕಿಯ ಬೀಳುವಾಗ ನುಡಿದ, ವಿದೇಶೀಯರ ಬಂಧನಗಳ ಬಿಡುಗಡೆಯೆಂದು ಅದನ್ನು ಧಿಕ್ಕರಿಸಿ ಪ್ರಕಟವಾಗಿದೆ.

ಅಮೇರಿಕದ ಪ್ರತಿನಿಧಿಗಳ ಸಭೆಯಲ್ಲಿ ದೂರಪ್ರಾಚ್ಯಕ್ಕೆಂದು ಮಾರ್ಶಲ್ ಯೋಜನೆಯಾಗಬೇಕೆಂದು ಡೆಮೊಕ್ರೆಟಿಕ್ ಪಕ್ಷದ ಇಬ್ಬರೂ ರಿಪಬ್ಲಿಕನ್ ಪಕ್ಷದ ಇಬ್ಬರೂ ಸೂಚಿಸಿದ್ದಾರೆ.

ಸಂ. ರಾ. ಸಂಘಕ್ಕೆ ಕೈದಿಗಳನ್ನು ನಡೆಸಿಕೊಳ್ಳುವುದರ ಬಗ್ಗೆ ಸಲಹೆಕೊಡಲು ಲೇಕ್ ಸಕ್ಸೆಸ್ಸಿನಲ್ಲಿ ಸೇರಿದ ತಜ್ಞರು ಕೈದಿಗಳ ಬಗ್ಗೆ ಸಹಾನುಭೂತಿದೋರುವ ಹಲವಾರು ಅಂಶಗಳನ್ನು ಚರ್ಚಿಸಿದರು. ಕೂಡಿದ ಐದು ತಜ್ಞರಲ್ಲಿ ಒಬ್ಬರಾದ ಫ್ರೆಂಚ್ ಅಪರಾಧಶಾಸ್ತ್ರಜ್ಞರಾದ ಪ್ರೊ. ದೊನ್ನೆದಿ ದಿ. ವಾಬ್ರೆಯವರು ಅಧ್ಯಕ್ಷರಾಗಿದ್ದರು. ಮುಂಬಯಿಯ ಟಾಟಾ ಸಮಾಜವಿಜ್ಞಾನ ಸಂಸ್ಥೆಯ ನಿರ್ದೇಶಕರಾದ ಡಾ. ಜೆ. ಎಂ. ಕುಮಾರಪ್ಪನವರು ಏಶಿಯದ ಪ್ರಾದೇಶಿಕ ಪ್ರತಿನಿಧಿಗಳಾಗಿದ್ದರು.

ಮುಂದಿನ ವರ್ಷದ **ಐರೋಪ್ಯ ಸಹಾಯಕ ಕಾರ್ಯಕ್ರಮಕ್ಕಾಗಿ** ಮತ್ತು ಅಕ್ರಾಂತ ರಾಷ್ಟ್ರಗಳ ಆಡಳಿತೆ ನಡೆಸುವುದಕ್ಕಾಗಿ ೬೯೬,೮೨೪೦೦೦ ಡಾಲರುಗಳನ್ನು ವೆಚ್ಚ ಮಾಡಲು ಅಮೇರಿಕದ ಸಿನೇಟ್ ಸಭೆಯು ತನ್ನ ಅನುಮತಿಯನ್ನು ಕೊಟ್ಟಿತು.

ಅಗಸ್ಟ ಅಂತ್ಯದಲ್ಲಿ **ಬ್ರಿಟನ್ನಿನ** ವಿದೇಶಮಂತ್ರಿ ಬೆವಿನ್ನರೂ ಹಣಕಾಸಿನ ಮಂತ್ರಿ ಸರ್ ಸ್ಟಾಫರ್ಡ್ ಕ್ರಿಪ್ಸರೂ ಅಗ್ನೇಯ ಏಶಿಯದ ಆರ್ಥಿಕ ಪರಿಸ್ಥಿತಿಯನ್ನು ಕುರಿತು ವಿಚಾರ ಮಾಡಲು ವಾಶಿಂಗಟನ್ನಿಗೆ ಹೋಗಲಿದ್ದಾರೆಂದು ಸುದ್ದಿ.

ಭಾರತ ಸರಕಾರದ ಹಿರಿಯ ಮಿಲಿಟರಿ ಸಲಹೆಗಾರರಾದ **ಲೆಫ್ಟಿನೆಂಟ್ ಜನರಲ್ ಡಡ್ಲಿ ರಸೆಲ್ಲರು** ಅಮೇರಿಕದ ಸಂಯುಕ್ತ ಸಂಸ್ಥಾನದ ವೆಸ್ಟ್ ಪಾಯಿಂಟಿನಲ್ಲಿರುವ ಮಿಲಿಟರಿ ವಿದ್ಯಾಲಯಕ್ಕೆ ಸಂದರ್ಶನವಿತ್ತರು. ಪುಣೆಯ ಹತ್ತಿರ ಇರುವ ಖಡಕ್‌ವಸ್ಲದಲ್ಲಿ ರಾಷ್ಟ್ರೀಯ ಮಿಲಿಟರಿ ವಿದ್ಯಾಲಯವನ್ನು ಸ್ಥಾಪಿಸಲು ಉಪಯುಕ್ತವಾಗಬಹುದಾದ ಅಂಶಗಳನ್ನು ತಿಳಿದುಕೊಂಡು ಬರುವುದೇ ಅವರ ಪ್ರವಾಸದ ಉದ್ದೇಶ.

ಕೊರಿಯದ ಸ್ವತಂತ್ರ ಪಕ್ಷದ ಹಿಂದಿನ ಮುಖಂಡರೂ ಕೊರಿಯದ ಹಿಂದಿನ ಅಧ್ಯಕ್ಷರೂ ಆದ ಡಾ. ಕಿಮ್ಕೂ ಅವರ ಕೊಲೆ ಮಾಡಿದ ಅರ್ಟಿಲರಿ ಲೆಫ್ಟಿನೆಂಟ್ ಅನ ದ್ರೋಹಿಗೆ ಜೀವಾವಧಿ ಕಾರಾಗ್ರಹ ವಾಸವನ್ನು ವಿಧಿಸಲಾಯಿತು.

ಕಾಮನ್‌ವೆಲ್ತಿನಲ್ಲಿ ಸಮರ್ಥವಾಗಿ ಸಕ್ಕರೆಯನ್ನು ತಯಾರಿಸುವವರಿಗೆ ಮಾರಾಟಕ್ಕೆ ಮಾರ್ಕೆಟ್ಟನ್ನು ಖಾತ್ರಿ ಮಾಡಿಕೊಡುವುದಾಗಿ ಬ್ರಿಟಿಶ್ ಸರಕಾರ ಸಾರಿದೆ. ಸಕ್ಕರೆಯ ಬೆಲೆಯನ್ನು ಸರಕಾರವೇ ನಿರ್ಧರಿಸುವುದು.

ಪಶ್ಚಿಮ ಬಂಗಾಲದ ಮುಖ್ಯ ಮಂತ್ರಿ **ಡಾ. ಬಿ. ಸಿ. ರಾಯರು** ಸ್ವಿಟ್ಜರ್‌ಲೆಂಡಿನಿಂದ ಲಂಡನ್ನಿಗೆ ತೆರಳಿದರು. ಅಲ್ಲಿ ಸಾರಿಗೆಯ ಮಂತ್ರಿಯೊಡನೆ ಕಲಕತ್ತದಲ್ಲಿ ಸುರಂಗ ಮಾರ್ಗದ ರಚನೆ ಮಾಡುವ ವಿಷಯದಲ್ಲಿ ಚರ್ಚೆ ನಡೆಸುವರೆಂದು ತಿಳಿಯುತ್ತದೆ.

ದರ್ಬಾನಿನಲ್ಲಿ ದಂಗೆಯಿಂದ ಸತ್ತ ೮೪ ಐರೋಪ್ಯೇತರರ ಮರಣದ ಸನ್ನಿವೇಶ ಮತ್ತು ಕೊಲೆಗಡುಕರ ಶೋಧಕ್ಕಾಗಿ ವಿಚಾರಣೆ ನಡೆದುದು ನಿಷ್ಪ್ರಯೋಜಕವಾಯಿತೆಂದು ಗೊತ್ತಾಗಿದೆ.

ಬ್ರಿಟನ್ನಿಗೂ ಅಮೇರಿಕದ ಸಂಯುಕ್ತ ಸಂಸ್ಥಾನಕ್ಕೂ ಹಾಂಕಾಂಗಿನ ರಕ್ಷಣೆಯ ಬಗ್ಗೆ ಒಪ್ಪಂದವಾಗಿದೆಯೆಂದೂ ಚೀನದಿಂದ ಅದನ್ನು ಮುತ್ತಿದರೆ ಎಚ್ಚರಿಕೆ ನೀಡಲು ಅಮೇರಿಕದ ವಿದೇಶಮಂತ್ರಿ ಡೀನ್ ಆಚೆಸನ್ನರು ಚೀನೀ ಕಮ್ಯುನಿಸ್ಟರಿಗೆ ತಿಳಿಸಿದ್ದಾರೆ.

—ಪೂರ್ವ ಪಾಕಿಸ್ತಾನದಲ್ಲಿ ಪೋಲೀಸರಿಗೂ ನ್ಯಾಯಾಧಿಕಾರಿಗಳಿಗೂ ಒಂದು ಬಗೆಯ ಶೀತಲ ಯುದ್ಧ ನಡೆದಿದೆಯೆಂತೆ. ನ್ಯಾಯಾಧಿಕಾರಿಗಳು ಪೋಲೀಸರನ್ನು ಗೌರವದಿಂದ ನಡೆಸಿಕೊಳ್ಳುತ್ತಿಲ್ಲ. ಇದರ ಕಾರಣಗಳನ್ನು ಕಂಡುಹಿಡಿಯಲು ಢಾಕಾ ಹೈಕೋರ್ಟ ನ್ಯಾಯಾಧೀಶರಾದ ಶಹಾಬುದ್ದೀನರ ಅಧ್ಯಕ್ಷತೆಯಲ್ಲೊಂದು ವಿಚಾರಣಾಮಂಡಲ ನೇಮಿಸಲ್ಪಟ್ಟಿದೆ.

ಕರ್ನಾಟಕದಲ್ಲಿ

ಧಾರವಾಡ

ಮೈಸೂರು ಘಟನಾಸಮಿತಿಯ ಅಧ್ಯಕ್ಷರೂ ಕಾಂಗ್ರೆಸ ಪ್ರಮುಖರೂ ಆಗಿರುವ ಶ್ರೀ ಸುಬ್ರಹ್ಮಣ್ಯಂ ಇವರು ನವಯುಗ ಪತ್ರಿಕೆಯ ದ್ವಿತೀಯ ವಾರ್ಷಿಕೋತ್ಸವಕ್ಕಾಗಿ ಹುಬ್ಬಳ್ಳಿಗೆ ಬಂದಿದ್ದರು. ೧೫ಕ್ಕೆ ಮಧ್ಯಾಹ್ನ ಪ್ರಾಂತೀಯ ಕಾಂಗ್ರೆಸ ಸಮಿತಿಯಲ್ಲಿ, ಸಾಯಂಕಾಲ ವಾಣಿಜ್ಯ ಸಂಘದಲ್ಲಿ ಕರ್ನಾಟಕ ಏಕೀಕರಣದ ಬಗ್ಗೆ ಚರ್ಚೆ ನಡೆಯಿತು. ರಾತ್ರಿ ಜಿಲ್ಲಾ ಕಾಂಗ್ರೆಸ್ಸ ಸಮಿತಿಯ ಪರವಾಗಿ ನಗರ ಸಭೆಯ ಆಟ್ಟದ ಮೇಲೆ ಅವರ ಭಾಷಣವಾಯಿತು.

ಈಗ ನಾಶಿಕದ ಕಲೆಕ್ಟರರಾಗಿದ್ದ ಶ್ರೀ ಜೆ. ಎ. ಸಾಲ್ಡಾನಾ ಇವರು ೧೫ ನೇ ತಾರೀಕು ಮುಂಜಾನೆ ಸ್ವಾತಂತ್ರ್ಯೋತ್ಸವದಲ್ಲಿ ಭಾಗ ವಹಿಸಿಬಂದನಂತರ ಒಮ್ಮೆಲೆ ಹೃದಯಕ್ರಿಯೆ ನಿಂತು ಸ್ವರ್ಗವಾಸಿಗಳಾದರೆಂದು ತಿಳಿಸಲು ವಿಷಾದಿಸುತ್ತೇವೆ. ಇವರು ಹಿಂದೆ ಹುಬ್ಬಳ್ಳಿಯಲ್ಲಿ ಸಬ್‌ಡಿವಿಜನಲ್ ಮ್ಯಾಜಿಸ್ಟ್ರೇಟರೂ ಜಿಲ್ಲಾ ಪೂರೈಕೆ ಅಧಿಕಾರಿಗಳೂ ಆಗಿದ್ದರು. ಇವರ ಶವವನ್ನು ಹುಬ್ಬಳ್ಳಿಗೆ ತಂದು ಅಂತ್ಯಸಂಸ್ಕಾರ ಮಾಡಲಾಯಿತು.

ಹುಬ್ಬಳ್ಳಿಯಲ್ಲಿ ಸ್ವಾತಂತ್ರ್ಯೋತ್ಸವದ ದಿನ ಧ್ವಜಾರೋಹಣದ ಕಾಲಕ್ಕೆ ಅತಿ ಪ್ರಸಂಗ ಒಂದು ನಡೆಯಿತು. ತಾಲೂಕ ಕಾಂಗ್ರೆಸ ಸಮಿತಿಯ ಪರವಾಗಿ ಏರ್ಪಡಿಸಿದ್ದ ಧ್ವಜಾರೋಹಣ ಸಮಾರಂಭದ ಕಾಲಕ್ಕೆ ಅಧ್ಯಕ್ಷ ಶ್ರೀ ವಾಸುದೇವ ಮುಂದೆ ಬರಬೇಕಾಗಿದ್ದಾಗ ಜಿಲ್ಲಾ ಕಾಂಗ್ರೆಸ ಅಧ್ಯಕ್ಷ ಶ್ರೀ ಗಂಡ್ಲೆಪ್ಪನವರೂ ಬಂದರು. ಇಬ್ಬರಲ್ಲಿಯೂ ಸ್ವಲ್ಪ ತಿಕ್ಕಾಟ ನಡೆಯಿತು. ಕಾಂಗ್ರೆಸ್ಸಿನವರು ಇವರು ತನ್ನನ್ನು ಒದೆಯುತ್ತಾರೆ ನೋಡಿರೆಪ್ಪ ಎಂದು ವಾಯುಚಳರು ಅರಚಿಕೊಂಡಿದ್ದು ಕೇಳಬಂದಿತು. ಇಬ್ಬರೂ ಧ್ವಜವನ್ನೇರಿಸಿದರು. ಸಾಯಂಕಾಲ ತಾಲೂಕ ಹಾಗೂ ಜಿಲ್ಲಾ ಕಾಂಗ್ರೆಸ ಸಮಿತಿ ಪರವಾಗಿ ಪ್ರತ್ಯೇಕ ಸಭೆಗಳೇರ್ಪಟ್ಟಿದ್ದವು. ಬೇರೆ ಬೇರೆ ಸಂಸ್ಥೆಗಳಲ್ಲಿಯೂ ಸ್ವಾತಂತ್ರ್ಯೋತ್ಸವ ಜರುಗಿತು.

ಹುಬ್ಬಳ್ಳಿಯ ಗಣೇಶಪೇಟೆಯ ನಿವಾಸಿ ಜನಾಬ ಅಬ್ದುಲ್‌ಖಾನ ಇಬ್ರಾಹಿಮ್‌ಖಾನ ಬಳ್ಳಾರಿ ಉರ್ಫ ಎ. ಎ. ಮೋತೀವಾಲಾ ಉರ್ಫ ದಾದಾಪೀರ ಬೊಗದಾದಿ ಇವರ ಮನೆಯನ್ನು ಕಳೆದ ಮಾರ್ಚ ತಿಂಗಳಲ್ಲಿ ಝಡತಿ ಮಾಡಿದಾಗ ೮೩ ಸಾವಿರ ರೂ. ನೋಟುಗಳು ಮತ್ತು ನಾಲ್ಕೈದು ಸಾವಿರ ರೂ. ಬೆಲೆಯ ಆಭರಣಗಳು ದೊರೆತಿದ್ದವಷ್ಟೆ. ಆ ಬಗ್ಗೆ ರೆಸಿಡೆಂಟ ಮ್ಯಾಜಿಸ್ಟ್ರೇಟ ಕೋರ್ಟಿನಲ್ಲಿ ಖಟ್ಲೆ ಪ್ರಾರಂಭವಾಗಿದೆ. ಮುಂಬಯಿಯ ಬ್ಯಾ. ಕರ್ನೀವಾಲಾ ಇವರು ವಕೀಲಿ ವಹಿಸಿರುವರು.

ಅಕ್ಷ್ಮೇಶ್ವರ ಕೋರ್ಟಿನ ಉದ್ಘಾಟನ ಸಮಾರಂಭವು ಜಿಲ್ಲಾನ್ಯಾಯಾಧೀಶ ಶ್ರೀ. ಶಿಂದೆಯವರ ಹಸ್ತದಿಂದ ಕಳೆದವಾರ ಜರುಗಿತು. ಶ್ರೀ ನಾಡಗೌಡರವರು ಅತಿಥಿಗಳನ್ನು ಸ್ವಾಗತಿಸುತ್ತ, ಸರಕಾರದವರು ಎಲ್ಲವನ್ನೂ ಸಂತೋಷ ಪಡಿಸಲು ಹೋಗಿ ಯಾರನ್ನೂ ಸಮಾಧಾನಪಡಿಸಲಿಲ್ಲ. ಆದರೂ ಇನ್ನುಮೇಲೆ ಎಲ್ಲರೂ ಒಟ್ಟಾಗಿ ಸೇರಿ ತಾಲೂಕಿನ ಹಿತದೃಷ್ಟಿಯಿಂದ ಕಾರ್ಯಮಾಡುವಾ ಎಂದು ಹುರುಪಿನಿಂದ ಹೇಳಿದರು. ಶ್ರೀ ಶಿಂದೆಯವರು ಸಮಯೋಚಿತ ಉಪದೇಶಮಾಡಿದರು.

ಕಾಶೀಪೇಟದ ಗುಡಿಗಳು ಮತ್ತು ಓಣಿಯ ಸಾರ್ವಜನಿಕ ತೊಟ್ಟಿಯಲ್ಲಿ ಕಳವಾದ ಹಿತ್ತಾಳೆ ಸಾಮಾನುಗಳನ್ನು ಅಮಾಜ ಕಾಂಗೀದಲ್ಲಿ ಮಾರಾಟ ಮಾಡಿದ್ದವರನ್ನು ತಕೋಜಿಗೆ ಸಿಹಿಕ ಓಣೀಯವರ ಸಹಾಯದಿಂದ ಪೋಲೀಸರು ನೀರು ಮನೆಯಿಂದ ಪತ್ತೆಹಚ್ಚಿ ಹಿಡಿದು ಮುಂದಿನ ಕ್ರಮ ನಡೆಸಿದ್ದಾರೆ.

ಹುಬ್ಬಳ್ಳಿಯಲ್ಲಿ ಸೊಬ್ಬರಿಯನ್ನು ಯಲ್ಲಿ ಕಳ್ಳತನವನ್ನು ಪರಿಸಿ ಮಾಡಿದ್ದಕ್ಕೆ ಲಕ್ಷ್ಮಣ ಹಿರಾಪುರ ಕೇಲಿ ಇವರಿಗೆ ೩೦ ರೂಪಾಯಿ ದಂಡ ವಿಧಿಸಲಾಯಿತು.

ಮುಂಬಯಿ ಕರ್ನಾಟಕಕ್ಕೆ ಯೋಗದಿಂದ ವಿಷ್ಣುಸಹಸ್ರ ನಾಮವನ್ನು ತರಿಸುವ ಬಗ್ಗೆ ಮೈಸೂರು ಹಾಗೂ ಮುಂಬಯಿ ಸರಕಾರಗಳಲ್ಲಿ ಒಪ್ಪಂದವಾಗಿದೆ. ಇದನ್ನು ಕಾರ್ಯರೂಪದಲ್ಲಿ ತರುವ ಬಗ್ಗೆ ಮುಂಬಯಿ ಸರಕಾರದ ಎಲೆಕ್ಟ್ರಿಕಲ್ ಕಮೀಶನರರು ತಯಾರಿಸಿದ ಯೋಜನೆಗೆ ಮುಂಬಯಿ ಸರಕಾರದ ಮನ್ನಣೆ ದೊರೆತಿದೆಯೆಂದು ತಿಳಿಯುತ್ತದೆ.

ಸವಣೂರಲ್ಲಿ ಜಿಲ್ಲಾ ನ್ಯಾಯಾಧೀಶರಿಂದ ಹೊಸ ನ್ಯಾಯಾಲಯದ ಸಂಸ್ಥಾಪನೆಯ ಪ್ರಾರಂಭೋತ್ಸವ ಜರುಗಿತು. ವಕೀಲ ಸಂಘದವರು ಜಿಲ್ಲಾ ನ್ಯಾಯಾಧೀಶರಿಗೆ ಮನವಿಯೊಂದನ್ನರ್ಪಿಸುತ್ತ ಬಂಕಾಪೂರ ತಾಲೂಕಿನ ಯಾವತ್ತೂ ಹಳ್ಳಿಗಳ ಸಿವಿಲ್ ಜ್ಯುರಿಸ್‌ಡಿಕ್ಶನ್ ಕೊಡಬೇಕೆಂದೂ ಶಿಗ್ಗಾವಿಯಲ್ಲಿದ್ದ ರೆಸಿಡೆಂಟ ಕೋರ್ಟನ್ನು ಸವಣೂರಿಗೆ ಸ್ಥಳಾಂತರಿಸಬೇಕೆಂದೂ ವಿನ್ನವಿಸಿಕೊಂಡರು. ನ್ಯಾಯಾಧೀಶರು ಉತ್ತರ ಕೊಡುತ್ತ ಈ ಬೇಡಿಕೆಯನ್ನು ಸರಕಾರದ ಮುಂದೆ ಇಟ್ಟು ಮನ್ನಣೆ ಪಡೆಯಬೇಕೆಂದು ಸೂಚಿಸಿದರು. ಶ್ರೀ ಗೋಕಾಕ ವಕೀಲರು ಪುಷ್ಪಮಾಲೆಯನ್ನು ಅರ್ಪಿಸಿದರು. ಶ್ರೀ ರಿತ್ತಿ ವಕೀಲರು ಆಭಾರ ಮನ್ನಿಸಿದ ಬಳಿಕ ಸಭೆ ಕೊನೆಗೊಂಡಿತು. ಶ್ರೀ ಎಸ್. ಆರ್. ಕುಲಕರ್ಣಿಯವರು ಸವಣೂರಿಗೆ ನ್ಯಾಯಾಧೀಶರಾಗಿ ಬಂದಿರುವರು.

ಬರುವ ಅಕ್ಟೋಬರ ೧೭ ರಿಂದ ೩೧ ರ ವರೆಗೆ ಹುಬ್ಬಳ್ಳಿಯಲ್ಲಿ ಕರ್ನಾಟಕ ಮಾಧ್ಯಮಿಕ ಶಿಕ್ಷಕ ಸಂಘದ ಪರವಾಗಿ ಶಿಕ್ಷಕರ ಪುನರುಜ್ಜೀವನ ವರ್ಗವು ನಡೆಯುವದು. ಪ್ರಮುಖ ಶಿಕ್ಷಕ ತಜ್ಞರ ಉಪನ್ಯಾಸಗಳು ಆ ಕಾಲಕ್ಕೆ ಏರ್ಪಡಿಸಲ್ಪಡುವವು. ನಿಶ್ಚಿತ ಸ್ಥಳ ಮತ್ತು ಕಾರ್ಯಕ್ರಮಗಳನ್ನು ಹಿಂದುಗಡೆ ಪ್ರಸಿದ್ಧಿಸಲಾಗುವದು.

ಗದಗಿನಲ್ಲಿ ಕಳವುಗಳು ಬಹಳಾಗಲಿಕ್ಕೆ ಸುರುವಾದ್ದರಿಂದ ಪೋಲೀಸರು ಟಗರಕಾರು ಜನರನ್ನು ಹಿಡಿದು ಹಾಕಿದ್ದಾರೆ ಮತ್ತು ೧೫-೨೦ ಸಾವಿರ ರೂಪಾಯಿಗಳ ಸಾಮಾನನ್ನು ಪತ್ತೆ ಹಚ್ಚಿದ್ದಾರೆ. ಕಳವಿನ ಸಾಮಾನುಗಳನ್ನು ಮಾರಲಿಕ್ಕೆ ಹತ್ತಿದವರು, ಇಟ್ಟುಕೊಂಡವರು ಇವರ ಮನೆಗಳನ್ನು ಶೋಧ ನಡೆಸಿದ್ದಾರೆ.

ಬಳ್ಳಾರಿ

ಶ್ರೀ ಮಂತ್ರಾಲಯದಲ್ಲಿ ಶ್ರೀ ರಾಘವೇಂದ್ರ ಸ್ವಾಮಿಗಳ ಆರಾಧನಾ ಮಹೋತ್ಸವವು ಕಳೆದ ವಾರ ಪೀಠಸ್ಥ ಸ್ವಾಮಿಗಳಾದ ಶ್ರೀ ಸುಯಮೀಂದ್ರ ತೀರ್ಥ ಶ್ರೀಪಾದಂಗಳವರ ನೇತೃತ್ವದಲ್ಲಿ ಯಥಾಕ್ರಾರಿಗ ಜರುಗಿತು. ಹೈದರಾಬಾದದ ಶ್ರೀಕಳ್ಕೇರಿ ಬಂಧುಗಳು ಧ್ವನಿವಾಹಕ ಯಂತ್ರದ ವ್ಯವಸ್ಥೆಯನ್ನು ಮಾಡಿದ್ದರಿಂದ ಭಾಷಣ ಮತ್ತು ಪದಗಳನ್ನು ಕೇಳಲು ಭಕ್ತರಿಗೆ ಅನುಕೂಲವಾಯಿತು. ಈ ಸಲ ಮಳೆಯಿಂದ ಜನರಿಗೆ ಸ್ವಲ್ಪ ತೊಂದರೆಯಾಯಿತು.

ಮದರಾಸಿನ ಮುಖ್ಯ ಮಂತ್ರಿಗಳಾದ ಮಾನ್ಯ ಕುಮಾರಸ್ವಾಮಿ ರಾಜಾ ಹಾಗು ಕಂದಾಯ ಮಂತ್ರಿ ಮಾನ್ಯ ಎಚ್. ಸೀತಾರಾಮ ರೆಡ್ಡಿಯವರು ಹೊಸಪೇಟೆ ಭಾಗದಲ್ಲಿ ಕಲೆಕ್ಟರರೊಂದಿಗೆ ಕಳೆದ ವಾರ ಎರಡು ದಿನ ಸಂಚಾರ ಮಾಡಿದರು. ಪುರಸಭೆಯವರು ಅವರಿಗೆ ಮಾನಪತ್ರ ಸಮರ್ಪಿಸಿದರು. ವಿವಿಧ ಸಂಘ ಸಂಸ್ಥೆಗಳನ್ನು ಅವರು ಸಂದರ್ಶಿಸಿದರು. ರಾತ್ರಿ ಶಿಷ್ಟಮಂಡಲವೊಂದು ಮಂತ್ರಿಗಳನ್ನು ಕಂಡು ಬಳ್ಳಾರಿಯಲ್ಲಿ ಸರಕಾರೀ ಕಾಲೇಜನ್ನು ತೆರೆಯಲು ಪ್ರಾರ್ಥಿಸಿತು.

ಬಳ್ಳಾರಿ ಜಿಲ್ಲಾ ಬೋರ್ಡಿಗೆ ಡಾ. ಸಾವಿತ್ರಿ ಬಾಯಿ ಆರ್. ನಾಗನಗೌಡ, ಎಂ. ಎ. ಜಿ. ಸಿದ್ಧಯೋಗೆಪ್ಪ ಕೊಟ್ಟೂರು, ಸೆಂಡೀಯೂರಿನ ಮೋತೀಲಾಲ, ಎಸ್. ಎಂ. ಕರಿಯಪ್ಪ, ಕೂಡ್ಲಿಗಿ ತಾಲೂಕು ವೀರಾಪುರ ಫಿರ್ಕಾ ಇವರು ಅವಿರೋಧ ಆರಿಸಿ ಬಂದಿದ್ದಾರೆ.

ಹೂವಿನಹಡಗಲಿ ಫಿರ್ಕಾದಿಂದ ಎಚ್. ಅನ್ನದಾನಗೌಡರು, ಹೊಳಲು ಫಿರ್ಕಾದಿಂದ ಜಿ. ಶಿವಲಿಂಗಪ್ಪನವರು, ಇಟಗಿ ಫಿರ್ಕಾದಿಂದ ಸ್ವಿದ್ದಲಿಂಗಪ್ಪನವರು; ತಂಬ್ರಹಳ್ಳಿ ಫಿರ್ಕಾದಿಂದ ಕೆ. ಚೆನ್ನಬಸನಗೌಡರು ಜಿಲ್ಲಾ ಬೋರ್ಡಿಗೆ ಅವಿರೋಧವಾಗಿ ಆರಿಸಿ ಬಂದಿದ್ದಾರೆ.

ಬಳ್ಳಾರಿ ಹಾಗು ರಾಯದುರ್ಗ ತಾಲೂಕುಗಳಲ್ಲಿ ಈ ಸಲ ಮಳೆಯಾಗದ್ದರಿಂದ ಸೂರಮಾಕ ಅಧಿಕಾರಿಗಳು ಆಹಾರ ಸಮಿತಿಯ ಸಭೆಯಲ್ಲಿ ಚಿಂತೆಯನ್ನು ವ್ಯಕ್ತಪಡಿಸಿದರು. ಆಹಾರ ಪದಾರ್ಥಗಳ ಸಂಗ್ರಹವೂ ಕಡಮೆಯದೆ ಇದರಿಂದ ಚಿಂತೆಗೆ ಅವಕಾಶವುಂಟಾಗಿದೆ.

ಬೆಳಗಾವಿ

ಕಳೆದ ಬುಧವಾರ ಬೆಳಗಾವಿಯ ಜಿ ಎ ಹಾಯಸ್ಕೂಲಿನಲ್ಲಿ ಮಕ್ಕಳಕೂಟದ ಉದ್ಘಾಟನವು ರಸಿಕ ಕವಿಗಳಾದ ಪ್ರೊ. ವಿ. ಎಸ್. ಕರ್ಕಿ ಇವರ ಹಸ್ತದಿಂದ ಜರುಗಿತು. ಶ್ರೀ ಹಲಗಲಿಮಠ ಇವರು ಮಕ್ಕಳಕೂಟದ ಉದ್ದೇಶವನ್ನು ವಿವರಿಸಿದ ಬಳಿಕ ಶ್ರೀ ಕರಡಿಯವರ ಕಾವ್ಯಗಾಯನವಾಯಿತು. ಅತಿಥಿಗಳು ಕಾವ್ಯಗಾಯನ ಹಾಗು ಭಾಷಣ ಮಾಡಿದರು. ಮಕ್ಕಳಲ್ಲಿ ಜಾತೀಯತೆ ತಲೆದೋರಲೆಂದು ಅತಿಥಿಗಳು ಹೇಳಿದರು.

ಕುರಂದವಾಡ ಗುಂಪಿನಿಂದ ಮುಂಬಯಿ ಶಾಸನಸಭೆಗೆ ಶ್ರೀ ಶಾಮರಾವ ಪಾಟೀಲ ಮತ್ತು ಬಿ ಬಿ ಬಿಡಕಾ ಇವರನ್ನು ಸಾವಂತವಾಡಿ ಗುಂಪಿನಿಂದ ಶ್ರೀ ಪ್ರತಾಪರಾವದೇವರು ವಭೋಸಲೆ ಮತ್ತು ಅನಂತ ಸದಾಶಿವ ಪಂಡಿತ ಇವರನ್ನು ನಾಮಕರಣ ಮಾಡಲಾಗಿದೆ.

ಚಕ್ಕಮುನವಳ್ಳಿ ಶಾಲೆಯ ಎಲ್ಲ ವಿದ್ಯಾರ್ಥಿಗಳು ಒಮ್ಮನಸ್ಸಿನಿಂದ ಶ್ರೀ ಶಾರದಾದೇವಿಯ ಆರಾಧನೆಯನ್ನು ಬಳ್ಳಿ ವಿಜೃಂಭಣೆಯಿಂದ ಆಚರಿಸಿದರು. ಶಿಕ್ಷಣದ ವಿಷಯವಾಗಿ ಹಲವರು ಭಾಷಣಮಾಡಿದರು.

ಮುಂಬಯಿ ಸರಕಾರದ ಅರ್ಥಸಚಿವರಾದ ಮಾನ್ಯ ವೈಕುಂಠಲಾಲ ಮೆಹತಾ ಇವರು ಸರ್ವೋದಯ ಯೋಜನೆಯ ಹಳ್ಳಿಗಳಿಗೆ ಇದೇ ಸೋಮವಾರ ೨೩ಕ್ಕೆ ಭೆಟ್ಟಿ ಕೊಡುವರು. ಸರ್ವೋದಯ ಯೋಜನೆಯ ಎಲ್ಲ ಹಳ್ಳಿಗಳ ಜನರು ಇದರ ಲಾಭ ಪಡೆಯಬೇಕೆಂದು ಸರ್ವೋದಯ ಯೋಜನೆಯ ಸಂಚಾಲಕರಾದ ಶ್ರೀ ಶ್ರೀರಂಗ ಕಾಮತರು ಬಿನ್ನವಿಸುತ್ತಾರೆ.

ಮುಂಬಯಿ ಸರಕಾರದ ಅರ್ಥಸಚಿವರಾದ ಮಾನ್ಯ ವೈಕುಂಠಲಾಲ ಮೆಹತಾ ಇವರು ಬಾಗಲಕೋಟೆಯಲ್ಲಿ ... ಇಂಡಸ್ಟ್ರಿಯಲ್ ಸಂಸ್ಥೆಯ ... ಕಾರ್ಯಕ್ರಮವನ್ನು ೨೦ ಕ್ಕೆ ಮುಗಿಸಿಕೊಂಡು ಕಲಾದಗಿಯಲ್ಲಿ ಸರ್ವೋದಯ ಯೋಜನೆಯ ಚಟುವಟಿಕೆಗಳನ್ನೀಕ್ಷಿಸಿ ಬೆಳಗಾವಿಗೆ ಹೋಗುವರು.

ವಿಜಾಪುರ

ಇಳಕಲ್ಲಿನ ಗೃಹರಕ್ಷಕದಲದ ಜನರು ಜೂಜು ಆಡುತಿದ್ದವರನ್ನು ಭಟ್ಟಿ ಕೆರೆಮಾಡುತಿದ್ದವರನ್ನು ಹಿಡಿಯುವಲ್ಲಿ ಪೋಲೀಸರಿಗೆ ಸಹಾಯ ಮಾಡಿರುವರು.

ಜಮಖಂಡಿ ಗುಂಪಿನಿಂದ ಮುಂಬಯಿ ಶಾಸನಸಭೆಗೆ ಶ್ರೀ ಡಿ. ಬಿ. ಟಂಕಸಾಲಿ ಮತ್ತು ಬಿ. ಡಿ. ಜತ್ತಿಯವರನ್ನು ನಾಮಕರಣ ಮಾಡಲಾಗಿದೆ. ಜತ್ತ ಸಂಸ್ಥಾನದಿಂದ ಶ್ರೀ ಜೆ. ವಾಗೋಳಿ ಇವರನ್ನು ನಾಮಕರಣ ಮಾಡಿದ್ದಾರೆ. ಅಕ್ಕಲಕೋಟೆಯಿಂದ ಬಿ. ಆರ್. ಜಂಗಮ ಇವರನ್ನು ನಾಮಕರಣ ಮಾಡಲಾಗಿದೆ.

ಬಾಗೇವಾಡಿ ತಾಲೂಕಿನ ನರಸಲಗಿ ಕೊಲೆಯ ಖಟ್ಲೆಯಲ್ಲಿ ಶಿದ್ರಾಮಪ್ಪ ರಾಮಪ್ಪ ಹೊಸಗೌಡರ, ಭೀಮಪ್ಪ ಈರಪ್ಪ ಹೊಸಗೌಡರ, ಹನಮಪ್ಪ ಹೊಸಗೌಡರ ಮತ್ತು ಗೌಡಪ್ಪ ಈರಪ್ಪ ಹೊಸಗೌಡರ ಇವರಿಗೆ ಹಾಯಕೋರ್ಟಿನವರಿಂದ ಶಿಕ್ಷೆ ಸ್ಥಿರಪಡಿಸಲ್ಪಡುವದಕ್ಕೆ ಒಳಪಟ್ಟು ಜಿಲ್ಲಾ ಸೆಶನ್ಸ ಜಜ್ಜರು ಗಲ್ಲಿನ ಶಿಕ್ಷೆಯನ್ನು ವಿಧಿಸಿದರು.

ಬಳಬಟ್ಟಿಯಲ್ಲಿ ಹೊಸದಾಗಿ ಸ್ಥಾಪಿತವಾಗಿರುವ ಹೆಣ್ಣುಮಕ್ಕಳ ಶಾಲೆಯ ಉದ್ಘಾಟನ ಸಮಾರಂಭವು ಪೆನಶನ್ ಮಾಸ್ತರರಾದ ಶ್ರೀ ಬ. ಕೆ. ಬಾಡಗಿಯವರ ನೇತೃತ್ವದಲ್ಲಿ ಸಾಂಗವಾಯಿತು. ಸ್ತ್ರೀಶಿಕ್ಷಣದ ಬಗ್ಗೆ ಪ್ರಮುಖರ ಭಾಷಣಗಳಾದವು.

ದಕ್ಷಿಣ ಕನ್ನಡ

ಮಂಗಳೂರು ಭಗಿನೀ ಸಮಾಜ... ಕೋತ್ಸವವು ದಿನಾಂಕ ೬ ರಂದು ಶ್ರೀಮತಿ ಎಂ. ಬಹಾದ್ದೂರ ಅವರ ... ಯಲ್ಲಿ ಜರಗಿತು. ಎಂ. ಎಸ್. ... ಇ. ರಾಯರು ಸ್ವಾಗತ ಭಾಷಣ ... ಕಾರ್ಯದರ್ಶಿ ಶ್ರೀಮತಿ ... ಸಮಾಜದ ಕಾರ್ಯಕಲಾಪಗಳ ... ದರು. ಬಹುಮಾನ ವಿತರಣೆ... ಶ್ರೀ ಎಲ್. ಸಿ. ಪಾಯಿಸ ಎಂ. ... ಮತ್ತು ಮಂಜೇಶ್ವರ ಪಾರ್ವತಿ... ಲಾದವರ ಭಾಷಣಗಳಾದುವು. ... ಭಾಷಣ ವಿವಿಧ ವಿನೋದಗಳ... ಸಮಾರಂಭವು ಕೊನೆಗೊಂಡಿತು.

ದಕ್ಷಿಣ ಕನ್ನಡ ಜಿಲ್ಲಾ ... ವೈದ್ಯ ಸಂಘದ ಆಡಳಿತ ಮಂಡ... ಯೊಂದು ದಿನಾಂಕ ೬ ರಂದು ... ಶೇಖರನ್‌ರವರ ಅಧ್ಯಕ್ಷತೆಯಲ್ಲಿ ... ಆಸ್ಪತ್ರೆಗಳನ್ನು ಶಾಸನಸಭೆ... ನಿಗೆ ಒಳಪಡಿಸಿದ್ದರಿಂದ ಸಾರ್ವಜನಿ... ತೊಂದರೆಗಳನ್ನು ವಿವರಿಸಿ, ... ಧೋರಣೆಯನ್ನು ಖಂಡಿಸುತ... ಮುಂಬಯಿ ರಾಜ್ಯದಲ್ಲಿ ... ಮದ್ಯಪಾನ ನಿರೋಧ ಶಾಸನದಿಂದ ... ಗೊಳಿಸಬೇಕೆಂದು ಸರಕಾರವನ್ನು ... ಆಯಿಂತು.

ಮಂಗಳೂರು ಪೌರಸಭಾ ... ದಿನಾಂಕ ೬ ರಂದು ಶ್ರೀ ಎಲ್. ... ಸರ ಅಧ್ಯಕ್ಷತೆಯಲ್ಲಿ ಜರಗಿತು. ... ಕಸ್ತೆಗಳಿಗೆ ಡಾಮರು ಹಾಕಲು ... ೩,೧೦,೩೫೫ ರೂಪಾಯಿಗಳ ತಿದ್ದಿದ ... ಪಟ್ಟಿಯನ್ನು ಮಂಜೂರು ಮಾಡಲಾ...

ದಿನಾಂಕ ೯ ರಂದು ಮಂಗಳೂರಲ್ಲಿ ... ಯಲಿಸ್ಟ ಪಾರ್ಟಿಯವರಿಂದ ಕಾರು... ವಿರೋಧ ದಿನಾಚರಣೆಯು ಶ್ರೀ ... ಭೂಷಣರವರ ಅಧ್ಯಕ್ಷತೆಯಲ್ಲಿ ... ಡಾ. ಸಂಜೀವನಾಥ, ಎಂ. ಡಿ. ... ಮುಂತಾದವರು ಆಗೋಸ್ತು ... ಮಾಡಿ, ಕಾಮನ್‌ವೆಲ್ತಿನೊಳಗೆ ... ಸೇರಿಸಿದ್ದಕ್ಕಾಗಿ ಕಾಂಗ್ರೆಸಿನ ಧೋರಣೆ... ಖಂಡಿಸಿದರು.

ದಿನಾಂಕ ೯ ರಂದು ಮಂಗಳೂರಲ್ಲಿ ... ಸಮಾಜವಾದಿ ಪಕ್ಷದ ಸಭೆಯಲ್ಲಿ ಸಮ... ಗಳು ಮುಂಬರುವ ಜಿಲ್ಲಾ ಬೋರ್ಡು... ವಣೆಯಲ್ಲಿ ಭಾಗ ವಹಿಸಬೇಕೆಂ... ವಾಗಿದೆ.

ಉಡುಪಿ ಸಂಸ್ಕೃತ ಕಾಲೇಜಿನ ... ಸಮಾರಂಭವು ದಿನಾಂಕ ೧೦ ರಂದು ... ಶ್ರೀ ಅನಂತೇಶ್ವರ ದೇವಸ್ಥಾನದ ... ಯಲ್ಲಿ ಸೋದೆಮಠದ ಶ್ರೀ ವಿಶ್ವೋ... ತೀರ್ಥ ಸ್ವಾಮಿಗಳವರ ಅಧ್ಯಕ್ಷತೆಯ... ಗಿತು. ಇತರ ಮಠಗಳ ಸ್ವಾಮಿಗಳೂ ... ದ್ದರು.

ಉತ್ತರ ಕನ್ನಡ

ಟಿಕಾಯಿ ಎಂಬ ಹರಿಕಂತ್ರ ಹೆಣ್ಣು... ಕಳ್ಳತನದಿಂದ ಕಳ್ಳಿ ಸಾಗಾಟ ಮಾಡು... ಬಂಧಿಸಲ್ಪಟ್ಟು ವಿಚಾರಣೆ ಮುಗಿದು ... ಆರು ತಿಂಗಳು ಸಶ್ರಮ ಶಿಕ್ಷೆ ಹಾಗು ... ಸಾವಿರ ರೂಪಾಯಿ ದಂಡ ಕೊಡದಿದ್ದ... ಎರಡು ತಿಂಗಳು ಶಿಕ್ಷೆ ವಿಧಿಸಲಾಯಿತು.

ಉತ್ತರ ಕನ್ನಡ ಜಿಲ್ಲೆಯಲ್ಲಿ ಜುಲೈ ... ಭಟ್ಟಿ ಶರೆ ತಯಾರಿಸುವ ಹಾಗು ಅಕ್ರ... ಸಾಗಾಟ ಮೊದಲಾದ ೩೬ ಗುನ್ಹೆಗಳನ್ನು ... ಹಚ್ಚಲಾಯಿತು. ಒಟ್ಟು ಸುಮಾರು ... ಶರೆ ೨೦೦ ಗ್ರಾ. ಭಟ್ಟಿ ಶರೆ ತಯಾರಿ... ಮಿಶ್ರಣ ಮತ್ತು ಸ್ವಲ್ಪ ಗಾಂಜಾ ... ಶಿರ್ಸಿ ತಾಲೂಕಿನಲ್ಲಿ ಎಲ್ಲಕ್ಕೂ ಹೆಚ್ಚು... ಗಳಾಗಿವೆ.

ಕನ್ನಡ ಸಂಸ್ಥಾನ

ಸಾಗರಿಕ ಪೂರಯಿಕೆ ... ಅರಸೀಕೆರೆಗೆ ಬಂದಾಗ ಊಟ ಪ್ರ... ಕೆಲವೊಂದು ದೂರುಗಳನ್ನು ... ಅವನ್ನು ವಿಚಾರಿಸಲು ಪೂರೈಕೆ ಅಧಿ... ಬಂದು ಸುಮಾರು ೬ ಜನರು ಸಿಮೆಂಟ... ಯೋಗ ಪ್ರಾಡಿರುವದನ್ನು ಹಿಡಿದು ... ನಡೆಸಿ ತಿರುಗಿಹೋದರು.

ಸೆಂಟ್ರಲ್ ಕರ್ನಾಟಕ ಹೋಟೆಲ ... ಪ್ರಾಯದವರ ಸಯ್ಯದ ಹಯಾತ ಇವ... ನಲ್ಲಿ ಹೆಚ್ಚು ಜನರನ್ನು ಕೂಡಿಸಿದ್ದ... ಮಾಗ್ಗಿಯ ಮ್ಯಾಜಿಸ್ಟ್ರೇಟರು ೫೦ ರೂ... ವಿಧಿಸಿದರು. ಡಾಯರೆಕ್ಟರರು ... ಲಕ್ಷ ಕೊಡದೆ ಜನಹಿತವನ್ನು ಲಕ್ಷಿಸಿ... ಜನರನ್ನು ಕೂಡ್ರಿಸುವ ಪದ್ಧತಿಯನ್ನು ... ಬೇಕೆಂದು ಮ್ಯಾಜಿಸ್ಟ್ರೇಟರು ... ದಿರುವರು.

ಜನತೆಯ ಧ್ವನಿ

ಸರಕಾರಿ ಅಧಿಕಾರಿಗಳಿಗೆ—

ಇದನ್ನು ನಾನು ಸಂತೋಷಪಡುತ್ತ ಬರೆಯುತ್ತ ಇಲ್ಲ. ಬರೆಯುವ ಪ್ರಸಂಗ ಬಂದುದಕ್ಕಾಗಿ ನನಗೆಷ್ಟೋ ನೋವೆನಿಸುತ್ತಿತ್ತು. ಆದರೆ ಹೆಚ್ಚುಕಡಿಮೆ ಭಾರತದ ಎಲ್ಲ ಕಡೆಗಳಿಂದಲೂ ನನಗೆ ಮೇಲಿಂದ ಮೇಲೆ ಬರುತ್ತಿರುವ ದೂರುಗಳನ್ನು ಕುರಿತು ನಿಮಗೆ ನೇರವಾಗಿ ಕೆಲ ಮಾತುಗಳನ್ನು ಹೇಳದೆ ಬೇರೆ ಹಾದಿಯೇ ಇಲ್ಲದಾಗಿದೆ. ನಾವು ನಮ್ಮ ಸ್ವಾತಂತ್ರ್ಯದ ಹೋರಾಟದ ದಶೆಯಲ್ಲಿ ಕಾಲಿಟ್ಟಿದ್ದೇವೆ. ಇದು ಮೊದಲಿನಿಂದ ವಿಶೇಷವಾಗಿ ಪ್ರಯೋಜನ ಹೊಂದಿದ ಒಂದೇ ವರ್ಗವನ್ನು ಹೆಸರಿಸಬೇಕಾದರೆ, ಆ ವರ್ಗ ನಿಮ್ಮದೆಂದು ಅತಿಶಯೋಕ್ತಿಯಿಲ್ಲದೆ ಹೇಳಬಹುದು. ವಿದೇಶಿ ಅಧಿಕಾರಿಗಳಲ್ಲಿ ಅಧಿಕಾಂಶ ಜನರು ನಿವೃತ್ತರಾದುದು, ಅನೇಕರು ಮುಸ್ಲಿಮ ಅಧಿಕಾರಿಗಳು ಪಾಕಿಸ್ತಾನಕ್ಕೆ ಹೋಗಬಯಸಿದ್ದು, ಅನೇಕ ವಿದೇಶಗಳಲ್ಲಿ ನಮ್ಮ ರಾಯಭಾರಗೃಹಗಳು ತೆರೆಯಲ್ಪಟ್ಟದ್ದು, ಹೊಸ ಶಾಖೆಗಳ ಪ್ರಾರಂಭವಾದುದೇ ಮೊದಲಾದವುಗಳ ಫಲವಾಗಿ, ಅನ್ಯಥಾ ಇನ್ನೂ ಕಿರಿಯ ವರ್ಗದ ಅಧಿಕಾರಿಗಳಾಗಿಯೇ ಉಳಿಯಬಹುದಾಗಿದ್ದ ಹಲವರು ಬೇಗ ಬೇಗನೆ ಮಹತ್ವದ ಹುದ್ದೆಗಳಿಗೆ ಬಡತಿಯನ್ನೂ ಹೆಚ್ಚಿನ ಸಂಬಳಗಳನ್ನೂ ಪಡೆಯಲು ಸಮರ್ಥರಾದಿರಿ. ಸ್ವಾತಂತ್ರ್ಯಪ್ರಾಪ್ತಿಯಾದ ಮೇಲೆ ನಿಮ್ಮ ಸಾಂಪತ್ತಿಕ ಸ್ಥಿತಿ ಖಂಡಿತವಾಗಿ ಸುಧಾರಿಸಿದೆ. ಬ್ರಿಟಿಶ ಸರಕಾರದ ಉತ್ತರಾಧಿಕಾರಿಯಾಗಿ ಬಂದ ಸರ್ವಥಾ ಹೊಸ ಮಾದರಿಯ ಸರಕಾರ ಮನಸು ಮಾಡಿದ್ದರೆ ಸರಕಾರಿ ನೌಕರಿಗಳ ಪದ್ಧತಿಯನ್ನು ಬದಲಿಸಿಬಿಡಬಹುದಾಗಿತ್ತು; ಅಥವಾ ನಿಮ್ಮಲ್ಲಿ ಹೆಚ್ಚಿನವರನ್ನು ಕೆಲಸದಲ್ಲಿ ಉಳಿಸಿಕೊಂಡಿದ್ದರೂ ನೂತನ ಭಾರತದ ನಿರ್ಮಾಣಕ್ಕೆ ಬೇಕಾದ ಹೊಸ ಧೋರಣೆಗಳನ್ನು ಆಚರಣೆಗೆ ತರುವ ಸಲುವಾಗಿ ನಿಮ್ಮ ಮೇಲೆ ಮಹತ್ವದ ಅಧಿಕಾರ ಸ್ಥಾನಗಳಿಗೆ ಹೊಚ್ಚಹೊಸಬರನ್ನು ನೇಮಿಸಿಕೊಳ್ಳಬಹುದಾಗಿತ್ತು. ಚರಕಸಂಘ ಮನೋವೃತ್ತಿಯ ಸರಕಾರವಿದು ನಿಮ್ಮ ಸಂಬಳಗಳಲ್ಲಿಯೂ ಸೌಕರ್ಯಗಳಲ್ಲಿಯೂ ಎಷ್ಟೋ ಕಡಿತಗಳನ್ನು ಮಾಡಲೂಬಹುದಾಗಿತ್ತು.

ನೌಕರಶಾಹಿಯೆಂಬ ನಿಮಗಿಡಲ್ಪಟ್ಟ ಹೆಸರು ಎಂಥ ತಿರಸ್ಕಾರದ ಅಭಿಧಾನವಾಗಿತ್ತೆಂದು ನಿಮಗೆ ಗೊತ್ತೇ ಇದೆ. "ಲಂಚಗುಳಿಗಳು" "ಟೊಳ್ಳು ಬುರುಡೆಯವರು", "ದರ್ಪದವರು", "ಪ್ರತಿಗಾಮಿಗಳು", "ಸೋಮಾರಿಗಳು", "ಮತ್ತರು", "ಜನತೆಯ ಅವಶ್ಯಕತೆಗಳನ್ನು ಕಾಣದ ಕುರುಡರು"—ಇವೀಗ ಅನೇಕ ಕಾಂಗ್ರೆಸಿಗರು, ಈಗ ವಿವಿಧ ಮಂತ್ರಿಮಂಡಳಗಳಲ್ಲಿರುವವರು ಕೂಡ, ನಿಮಗೆ ಉಪಯೋಗಿಸುತ್ತಿದ್ದ ವಿಶೇಷಣಗಳು. ಸ್ವತಂತ್ರ ಭಾರತವೆಂದರೆ ನೌಕರಶಾಹಿಯ ಆಳಿಕೆಯಿಂದ ಮುಕ್ತವಾದ ಭಾರತವೆಂದು ಸಾಮಾನ್ಯವಾಗಿ ನಂಬಲಾಗಿತ್ತು. ಕಾಂಗ್ರೆಸ್ಸಿನಲ್ಲಿದ್ದ ಎಳೆಹರೆಯದವರೆಲ್ಲರೂ ತೀವ್ರತರವಾದ ಬದಲಾವಣೆಗಳನ್ನು ನಿರೀಕ್ಷಿಸಿದ್ದರು. ನಿಜವಾಗಿ ಕಾಂಗ್ರೆಸ್ ಸಂಸ್ಥೆಯ ವಿರುದ್ಧ ಅವರಲ್ಲಿ ಮತ್ತು ಜನಸಾಮಾನ್ಯದಲ್ಲಿ ಅಸಂತೋಷ ಹಬ್ಬಲು ಹಿರಿ ಕಾಂಗ್ರೆಸ್ಸಿಗರು ಹಾಗೆ ಬದಲಾವಣೆ ಮಾಡದೆ ಹಳೆಯ ಪ್ರಣಾಲಿಯನ್ನೆ ಉಳಿಸಿಕೊಂಡು ಬಂದುದೂ ಒಂದು ಕಾರಣ. ಅಧಿಕಾರಸ್ವೀಕಾರ ಮಾಡಿದನಂತರ, ಮುಂದಾಳುಗಳು ವಿಕಾರವಶರಾಗದೆ ತೂಕದ ಬುದ್ಧಿಯಿಂದಲೂ ಹೊಣೆಗಾರಿಕೆಯ ಅರಿವಿನಿಂದಲೂ ಪ್ರೇರಿತರಾಗಿ ಹಳೆಯ ಪ್ರಣಾಲಿಯನ್ನೇ ಇರಗೊಟ್ಟರು. ಅಧಿಕಾರದ ಹಸ್ತಾಂತರವಾದ ಸ್ಥಿತಿಗತಿಗಳಲ್ಲಿ ಇದು ಅಪರಿಹಾರ್ಯವೇ ಆಗಿತ್ತೇನೊ. ಅಥವಾ ಗಾಂಧೀಜಿಯ ತೀವ್ರಗಾಮಿ ಧ್ಯೇಯಗಳಾಗಲಿ ಅವುಗಳ ಪ್ರತಿಸ್ಪರ್ಧಿಯಾದ ಮಾರ್ಕ್ಸ್‌ವಾದವಾಗಲಿ ಕಾಂಗ್ರೆಸ್ಸಿನ ಹಿರಿಯರಿಂದ ಹೃತ್ಪೂರ್ವಕವಾಗಿ ಸ್ವೀಕರಿಸಲ್ಪಡದಿದ್ದುದೇ ಇದಕ್ಕೆ ಕಾರಣವಾಗಿರಲೂಬಹುದು. ಹೀಗಾಗಿ ಸಾಂಸ್ಕೃತಿಕ ರಂಗದಲ್ಲಿ ಪ್ರಾಚೀನ ಹಿಂದೂ ಅಥವಾ ಇಸ್ಲಾಮ ಧರ್ಮದ ಪುನರುಜ್ಜೀವನ ಮತ್ತು ಆರ್ಥಿಕ ಮತ್ತು ಸಾಮಾಜಿಕ ಕ್ಷೇತ್ರಗಳಲ್ಲಿ, "ಔದ್ಯೋಗಿಕ ಪ್ರಗತಿ" ಮತ್ತು ರೂಢಪದ್ಧತಿಯಿಂದ ತೀರ ಭಿನ್ನವಾಗಿರದ ರೀತಿಯಲ್ಲಿ "ಸಾವಕಾಶ, ಸುವ್ಯವಸ್ಥಿತ ಸಾಮಾಜಿಕ ಉದ್ಧಾರ" ಇವೇ ನಮಗೆ ಉಳಿದ ಧ್ಯೇಯಗಳಾದವು. ಇದಕ್ಕೆ [illegible] ಪರಿಗ್ರಹಿಸಲಾಯಿತು.

ಈ ಪ್ರಕಾರ, ಈ ವಿಚಾರಧಾರೆಗೂ ಬ್ರಿಟಿಶರು ಇಲ್ಲಿ ಸ್ಥಾಪಿಸಿಹೋದ ಮತ್ತು ನೀವು ಆತ್ಮಸಾತ್ತಾಗಿ ಮಾಡಿಕೊಂಡ ಪದ್ಧತಿಗೂ ಅಂಥ ಅಂತರವೇನೂ ಇದ್ದಿಲ್ಲ. ವ್ಯವಹಾರದಲ್ಲಿ ಬ್ರಿಟಿಶ ಸರಕಾರವೇ ಯಥಾವತ್ತಾಗಿ ಮುಂದೆ ಸಾಗಿ ನಿಮಗೂ ಕಾಂಗ್ರೆಸ್ ಮುಂದಾಳುಗಳಿಗೂ ಬೆರೆತು ಕೆಲಸಮಾಡಲು ಸಂದರ್ಭ ಒದಗಿಸಿತೆನ್ನಬಹುದು. ಹೀಗೆ, ನಿಮಗೂ ಹೊಸ ಸರಕಾರಕ್ಕೂ ಕಠಿನ ಸಮಸ್ಯೆಯಾಗಬಹುದಾಗಿದ್ದುದು ಬಹಳ ಸರಳವಾದ ಮಾತಾಗಿಬಿಟ್ಟಿತು.

ಈ ಸರಳತನದ ಅರ್ಥವನ್ನು ಸರಿಯಾಗಿ ಗ್ರಹಿಸಿಕೊಂಡಿದ್ದರೆ ಶಾಂತರೀತಿಯಲ್ಲಿ ಅಧಿಕಾರ ಹಸ್ತಾಂತರವಾದ್ದರಿಂದ ವಿಭಜನೆಯಿಂದಲೂ ಅದರ ಬೆಂಬತ್ತಿ ಬಂದ ಮಹಾ ಜನಯಾತ್ರೆಯಿಂದಲೂ ಉದ್ಭವಿಸಿದ ಹೊಸ ಸಮಸ್ಯೆಗಳ ಮಧ್ಯದಲ್ಲಿಕೂಡ, ಜನತೆಗೆ ತುಂಬ ಕಲ್ಯಾಣವಾಗುತಿತ್ತು. ನಿಮ್ಮಲ್ಲಿ ವಯೋವೃದ್ಧರಾದವರನ್ನು ಕೂಡ ತೀರ ಎಳೆಯನೊಬ್ಬ ನೆಡುರು ದೀನಾವಸ್ಥೆಗಿಳಿಸಿಬಿಡುತಿದ್ದ ಆ ಬಿಳಿ ಚರ್ಮದ ಭೀತಿ ಇಲ್ಲದಂತಾಗಿದೆ. ನೀವೀಗ ನಿಮ್ಮವರೊಡನೆಯೆ, ನಿಮ್ಮವರೇ ಆದವರ ಕೆಳಗೆ ಕೆಲಸಮಾಡುತ್ತಿದ್ದೀರಿ. ನಿಮ್ಮನ್ನು ನಿಮ್ಮ ಮೇಲಧಿಕಾರಿಗಳಿಂದಲೂ ನಿಮ್ಮ ಅಧೀನರಾಗಿ ಕೆಲಸಮಾಡುತಿದ್ದ ಕೆಳವರ್ಗದವರಿಂದಲೂ ಬೇರ್ಪಡಿಸಿಟ್ಟದ್ದ ಆ ಉಚ್ಚನೀಚ ತಾರತಮ್ಯದ ತೆರೆ ಹರಿದುಹೋಗಿದೆ. ನಿಮ್ಮಲ್ಲಿ ಅತಿ ಹಿರಿಯ ಅಧಿಕಾರಿಗಳು ಹಿಂದೀಯರಾಗಲಿ ನಾಗರಿಕರಾಗಲಿ ಜನರ ಸೇವಕರಂತೆ ಆಚರಿಸುವವರಾಗಲಿ ಆಗಿದ್ದಿಲ್ಲವಾದರೂ ನಿಮ್ಮನ್ನು "ಹಿಂದೀ ನಾಗರಿಕ ಸೇವಕ"ರೆಂದು ಕರೆಯಲಾಗುತ್ತಿತ್ತು. ಈಗಲಾದರೋ, ನೀವೆಲ್ಲರೂ ಹಿಂದೀಯರೇ ಆಗಿದ್ದೀರಿ, ನಾಗರಿಕರಂತೆ ನಡೆದುಕೊಳ್ಳಲು ಮತ್ತು ರಾಷ್ಟ್ರಕ್ಕೆ ಸೇವೆ ಸಲ್ಲಿಸಲು ನಿಮಗೆ ಅವಕಾಶವೂ ದೊರಕಿದೆ.

ಆದರೆ, ವಿವಿಧ ಸರಕಾರಗಳ ಮಂತ್ರಿಗಳಿಗೆ ನಿಮ್ಮ ಕಾರ್ಯದಕ್ಷತೆ, ಸ್ವಾಮಿಬುದ್ಧಿ ಮತ್ತು ನಡೆವಳಿಗಳು ಎಷ್ಟೇ ತೃಪ್ತಿಕರವೆನಿಸಿರಬಹುದಾದರೂ ಜನತೆಯ ಅಭಿಪ್ರಾಯ ಮಾತ್ರ ತದ್ವಿಪರೀತವಾಗಿದೆಯೆಂದು ಹೇಳಲು ವಿಷಾದವಾಗುತ್ತದೆ. ಅಷ್ಟೇ ಏಕೆ, ಜನರೊಡನೆ ನಿಮ್ಮ ಈಗಿನ ನಡೆವಳಿಕೆ ಹಿಂದಿನ ಆಳಿಕೆಯ ಕಾಲದಲ್ಲಿದ್ದಷ್ಟೂ ತೃಪ್ತಿಕರವಾಗಿಲ್ಲೆಂದು ದೂರುಗಳಿವೆ. ನೀವೀಗ ಮೊದಲಿಗಿಂತಲೂ ಒರಟರೂ ಲಂಚಗುಳಿಗಳೂ ಅಕ್ಷಮರೂ ವಿಲಂಬಕರೂ ಆರ್ಥಿಕ ಲಾಭ ಮತ್ತು ವಶೀಲಿಬಡಕತನದಿಂದ ಪ್ರೇರಿತರೂ ಆಗಿರುವಿರಲ್ಲದೆ ೧೯೪೭ಕ್ಕಿಂತ ಮೊದಲು ನಿಮ್ಮ ಕೆಳಗೇ ಇದ್ದ ಆಳಿಕೆಗಿಂತ ಈಗಿನದು ಹೆಚ್ಚು ಪ್ರಜಾಪೀಡಕವಾಗಿದೆಯೆಂದು ಹೇಳಲಾಗಿದೆ.

ಬ್ರಿಟಿಶ ಆಳಿಕೆಯಲ್ಲಿ ನೌಕರವರ್ಗ ಸರ್ವಥಾ ಲಂಚಮುಕ್ತವಾಗಿತ್ತೆಂದಲ್ಲ. ಆದರೆ ಹಿಂದೀ ಸಂಸ್ಥಾನಗಳು ಲಂಚಗುಳಿತನಕ್ಕೆ ಇನ್ನಷ್ಟು ಕುಪ್ರಸಿದ್ಧವಾಗಿದ್ದವು-ಮಾತ್ರ ಅವುಗಳ ಅಧಿಕಾರಿಗಳು ಉಳಿದವರಿಗಿಂತ ಅಲ್ಪಸಂತೋಷಿಗಳಾಗಿದ್ದರು. ಹಿಂದೀ ಸಂಸ್ಥಾನದಲ್ಲಿ ಕೆಲ ಆಣೆಗಳ ಲಂಚದಿಂದ ಮಾಡಿಸಿಕೊಳ್ಳಬಹುದಾಗಿದ್ದ ಕೆಲಸಕ್ಕೆ ಬ್ರಿಟಿಶ ಹಿಂದುಸ್ತಾನದಲ್ಲಿ ಅಷ್ಟೇ ರೂಪಾಯಿಗಳನ್ನು ಕೈಬಿಡಬೇಕಾಗುತ್ತಿತ್ತು. ಆದರೆ ಈಗ ವಿಲಯನಹೊಂದಿದ ಸಂಸ್ಥಾನಗಳಿಂದ ನನಗೆ ಬರುತ್ತಿರುವ ವರದಿಗಳೇಂಥವೆನ್ನುವಿರಿ? ಅವರ ಆಡಳಿತೆಯಲ್ಲಿ ನಿಮ್ಮ ಪ್ರವೇಶವಾದಂದಿನಿಂದ ಲಂಚದ "ಸ್ಕೇಲೂ" ಬಹಳ ಏರಿದೆಯಂತೆ. ಇವುಗಳಲ್ಲಿ ಕೆಲ ದೂರುಗಳಲ್ಲಿ ಅತಿಶಯೋಕ್ತಿಯಿರಬಹುದೆಂದು ಒಪ್ಪಲು ನಾನು ಸಿದ್ಧನೇ. ನ್ಯಾಯಸ್ಥಾನದ ಮುಂದೆ ಇವುಗಳಲ್ಲಿ ಅನೇಕವನ್ನು ಸಿದ್ಧಪಡಿಸಲು ಸಾಧ್ಯವಾಗಲಿಕ್ಕಿಲ್ಲ. ಆದರೆ ನನಗೆ ಬರುವ ದೂರುಗಳಲ್ಲಿ ಎಲ್ಲವೂ ಜನರಿಂದಲೇ ಬಂದಿರುವದಿಲ್ಲ; ಸ್ವತಃ ಸರಕಾರಿ ಅಧಿಕಾರಿಗಳಿಂದಲೂ ಹಲದೂರುಗಳು ಬಂದಿವೆ. ಉದಾಹರಣೆಗಾಗಿ, ರೇಲ್ವೆ ಖಾತೆಗಳಲ್ಲಿ, ಸೀದಾ ಅಂಗಡಿಗಳಲ್ಲಿ ಮೊದಲಾಗಿ ನಡೆಯುವ ಅನೇಕ ಕಣ್ಣುಕಟ್ಟು [illegible] ನಡೆಯುತ್ತಿರುವುದು ಅಯಾ ಖಾತೆಗಳ ಸರಕಾರಿ ನೌಕರರಿಂದಲೇ.

ನಾನು ಹೀಗೆ ನಿಮ್ಮನ್ನು ಕ[illegible]ಮಾಡುವುದನ್ನು ದಯವಿಟ್ಟು ತಪ್ಪು [illegible]ಕೊಳ್ಳದೇದಿರಿ. ನಿಮ್ಮಲ್ಲಿ ಪ್ರಾಮಾಣಿಕರು ಇಲ್ಲವೆಂದಾಗಲಿ, ಸ್ವಾತಂತ್ರ್ಯಸಿದ್ಧಿಯ ತರುವಾಯ ಪ್ರಾಮಾಣಿಕತೆಯಿಂದಲೇ ಗುಲಾಮರಂತೆ ದುಡಿವ ಅಧಿಕಾರಿಗಳು ನಿಮ್ಮಲ್ಲಿಲ್ಲವೆಂದಾಗಲಿ, ಮೇಲೆ ಹೇಳಿದ್ದೆಲ್ಲ ಎಲ್ಲ ಖಾತೆಗಳಿಗೂ [illegible] ನಿಜಕ್ಕೂ ನಿಮ್ಮಲ್ಲಿ ಅಧಿಕಾಂಶ ಜನರು ದುರ್ಗುಣವನ್ನು ಕೈಯಿಂದ ಮುಟ್ಟಿರಲಿಕ್ಕಿಲ್ಲ. ಆದರೆ ಇಂಥ ವಿಚಾರಗಳಲ್ಲಿ ನೂರಕ್ಕೆ ಹತ್ತು ಜನರು ಕೂಡ ನಿಮ್ಮ ವರ್ಗದ ಹೆಸರಿಗೆ ಮಸಿ ಬಳಿಯಲು ಸಾಕು. ಹತ್ತು ಜನ ಶಾಂತ ಸಭಿಕರ ಸಭೆಯನ್ನು ಮುರಿಯಲು ಹತ್ತಿಪ್ಪತ್ತು ಜನ ಪುಂಡರೇ ಸಾಲುವದಿಲ್ಲವೇ, ಹಾಗೆ. ನಾನು ವರ್ಣಿಸಿರುವುದು ಸ್ಥೂಲ ಚಿತ್ರ, ಸಾಮಾನ್ಯ ಅಭಿಪ್ರಾಯ. ಅದುದರಿಂದ ಪ್ರಾಮಾಣಿಕ ಜೀವಿಗಳೂ ಇದನ್ನು ಆಳವಾಗಿ ವಿಚಾರಿಸಲಿ.

ಇದರ ಅಂತಿಮ ಪರಿಣಾಮವೇನಾಗಬಹುದೆನ್ನುವಿರಿ? ನೀವು ಸರಕಾರಕ್ಕೂ ಜನತೆಗೂ ನಡುವೆ ಇರುವವರು. ನಿಮ್ಮ ಕೃತಿಗಳಿಂದಲೇ ಸರಕಾರದ ಆಳಿಕೆಯನ್ನು ಜನರು ಅಳೆಯುವರು; ನಿಮ್ಮಿಂದಲೇ ಸರಕಾರದ ಗೆಲವು— ಸೋಲು. ಜನರು ಅವಶ್ಯವಾಗಿ ನಿಮ್ಮ ಮೇಲೆ ಸರಕಾರದ ಪೂರ್ಣ ನಿಯಂತ್ರಣವಿದೆಯೆಂದು ತಿಳಿಯುತ್ತಾರೆ; ಅದು ಕಾರಣ, ನಿಮ್ಮ ಆಡಳಿತೆ ಅಸಮಾಧಾನಕರವಾಗಿದ್ದರೆ, ಸ್ವಾಭಾವಿಕವಾಗಿಯೆ ಅವರು ನಿಮ್ಮ ತಪ್ಪುಗಳಿಗೆ ಸರಕಾರವನ್ನು ದೂರುವರು. ಕಾಂಗ್ರೆಸ್ಸು ಸರಕಾರವನ್ನು ನಿಯಂತ್ರಿಸುತ್ತಿರುವಂತೆ ಕಂಡರೆ, ನಿಮ್ಮಲ್ಲಿದ್ದ ಭ್ರಷ್ಟಾಚಾರಗಳೆಲ್ಲವೂ ಕಾಂಗ್ರೆಸ್ಸಿನ ಕೊರಳಿಗೆ ಬೀಳುವವು. ನೀವೇನೋ ಹೇಳುವಿರಿ,— ಮತ್ತು ಅದು ನ್ಯಾಯ್ಯವೂ ಹೌದು- ಕಾಂಗ್ರೆಸ್ಸಿಗರಲ್ಲಿಯೂ ಲಂಚಗುಳಿಗಳಿದ್ದಾರೆ, ಇದರಲ್ಲಿ ನಾವು ಮಾತ್ರವೇ ದೋಷಿಗಳಲ್ಲ- ಎಂದು. ಅದರ ಪ್ರತಿಫಲವಾಗಿ, ಕಾಲ ಬಂದಾಗ ಕಾಂಗ್ರೆಸ್ಸು ಅಧಿಕಾರಚ್ಯುತವಾಗಿ ದಂಡ ತೆರಬೇಕಾಗುವುದು. ಆದರೆ ಈಗಿನ ಧೈರ್ಯಚ್ಯುತಿ ಮತ್ತು ನೀತಿಭ್ರಷ್ಟತೆ ಕಾಂಗ್ರೆಸ್ ಸರಕಾರದ ಪರಾಭವದಿಂದಲೇ ಪರಿಹಾರವಾಗದು. ಅವುಗಳ ಫಲ ನಿಮ್ಮ ತಲೆಯ ಮೇಲೂ ಉಳಿಯದಿರದು. ಇನ್ನೊಬ್ಬ ಗಾಂಧಿಯೇನಾದರೂ ಉದಯಿಸಿ ರಾಷ್ಟ್ರವನ್ನು ಅಹಿಂಸಾತ್ಮಕ ಪ್ರತೀಕಾರದ ಮಾರ್ಗದಲ್ಲಿ ಕರೆದೊಯ್ಯದೆ ಹೋದರೆ ದಬ್ಬಾಳಿಕೆಗೆ ಅರ್ಧಜಾಗೃತ ಜನತೆ ಕೈಕೊಳ್ಳುವ ಪ್ರತೀಕಾರವೊಂದೆ—ಅದೆಂದರೆ, ಫ್ರೆಂಚ್ ಕ್ರಾಂತಿಯ ಕಾಲದ ಘಟನೆಗಳ ಪುನರಾವರ್ತನೆ. ನಮ್ಮವರೊಡನೆ ಹೋಲಿಸಿದರೆ ಫ್ರಾನ್ಸು ತೀರ ಚಿಕ್ಕದೇಶ. ಐದಾರು ಫ್ರಾನ್ಸುಗಳನ್ನು ಕೂಡಿಸಿದರೂ ನಮ್ಮ ರಾಷ್ಟ್ರದಷ್ಟಾಗದು. ಅಂತೆಯೇ ನಮ್ಮಲ್ಲಾಗಬಹುದಾದ ದುರಂತಗಳೂ ಚೀನವೊಂದನ್ನು ಬಿಟ್ಟರೆ ಮತ್ತಾವ ದೇಶದಲ್ಲಿಗಿಂತಲೂ ಘೋರವಾಗುವವು. ಇದರ ಪೂರ್ವಸೂಚನೆ ನಮಗೆ ೧೯೪೬-೪೭ರ ಹತ್ಯಾಕಾಂಡದ ಕಾಲದಲ್ಲೆ ದೊರಕಿತ್ತು. ಇವು ಮರುಕಳಿಸಬೇಕೆಂದು ನಿಮ್ಮ ಬಯಕೆಯೆ?

ನೀವು ಸ್ವತಃ ಸುಧಾರಿಸದೆ ಜನರನ್ನು ಸುಖಿಗಳನ್ನಾಗಿ ಮಾಡಲಾರಿರಿ; ಮತ್ತು ಅಸುಖಿಗಳಾದ ಜನರು ನಿಮ್ಮ ದಬ್ಬಾಳಿಕೆ ಅಸಹನೀಯವಾದ ಮೇಲೆ ನಿಮ್ಮನ್ನು ಸುಮ್ಮನೆ ಬಿಡುವದಿಲ್ಲ. ಅರಗಿನ ಮನೆ ಸಿದ್ಧವಾಗಿರುವಾಗ ಒಂದು ಕಿಡಿಕಿಯೂ ಉರಿಯೆಬ್ಬಿಸಲು ಸಾಲುವದೆಂದು ಮರೆಯದಿರಿ.

ನಿಮ್ಮಲ್ಲಿ ನನ್ನ ಪ್ರಾರ್ಥನೆಯೊಂದೆ: ನಿಮ್ಮ ಜೀವನದಲ್ಲಿಯೂ ಆಚಾರದಲ್ಲಿಯೂ ದೇವರಿಗೊಂದು ಸ್ಥಾನವೀಯಿರಿ. ನಿಮ್ಮ ಸಂಪತ್ತನ್ನು ಹೆಚ್ಚಿಸಿಕೊಳ್ಳುವ ಆತುರದಲ್ಲಿ ನೀವು ಆತನನ್ನು ನಿಮ್ಮ ಮನೆಗಳಿಂದಲೂ ಕಚೇರಿಗಳಿಂದಲೂ ಹೊರಗಟ್ಟಬಿಟ್ಟು ಕಷ್ಟಕಾಲದಲ್ಲಿಯೂ ವೃದ್ಧಾಪ್ಯದಲ್ಲಿಯೂ ಹಣವೇ ದೇವರಿಗಿಂತಲೂ ಹೆಚ್ಚಾಗಿ ನಿಮ್ಮನ್ನು ರಕ್ಷಿಸೀತೆಂದು ಬಗೆ[illegible] [illegible] ರಾಗುವ ಸದ್ಬುದ್ಧಿಯನ್ನು [illegible] ದಯಪಾಲಿಸಲಿ.

ವರ್ಧಾ — ಕಿ. ಘ. ಮಶ್ರೂವಾಲಾ
೨೭—೭—೪೯

[illegible]

ಶ್ರೀ ಅರುಣಾ ಅಸಫಅಲ್ಲಿಗಾದ ಅಪಮಾನ

[illegible] ಪ್ರಕಟವಾದ "[illegible]" [illegible] ಅಸಫಅಲಿ [illegible] ಹೀಗೆ ಬರೆಯುತ್ತಾರೆ:

"ಸಂಯುಕ್ತ [illegible] ಪ್ರಾಂತಕ್ಕೆ [illegible] [illegible] [illegible] ಲಕ್ಷ್ಮಿಯು ನಾವು ಕೆಲ ಸಂಗತಿಗಳನ್ನು ತಿಳಿ ಬಯಸುತ್ತೇವೆ. ಶ್ರೀ ಅರುಣಾ ಅಸಫಅಲ್ಲಿಯವರಿಗೆ ಸಂಯುಕ್ತಪ್ರಾಂತದಲ್ಲಿ ಯಾವದೇ ಬಗೆಯ ಅಪಮಾನವಾಗಲಿಲ್ಲ. ಅಲ್ಲದೆ ಅವರ ಮೇಲೆ ಯಾರೂ ಕೈಮಾಡಲಿಲ್ಲ. ಇದಲ್ಲದೆ ಅವರು [illegible] ದಿನ [illegible] ಹೋಗಿರಲಿಲ್ಲ. [illegible] ಅವರು ಪ್ರಾಂತದಲ್ಲಿ ಸಂಚರಿಸಿದರು.

"ಶ್ರೀ ಅರುಣಾ ಇವರು ನನ್ನ ಭಗಿನಿಯೆಂಬುದು [illegible] ನಿಮಗೆ ಗೊತ್ತಿರಬಹುದು. ಮತ್ತು ನಾನು ಇದನ್ನು ನಿಮಗೆ ಬರೆಯುತ್ತಿರುವಾಗ ಅವರೂ ನನ್ನೊಡನೆಯೇ ಇರುವರು."

ವರ್ಧಾ ೬-೭-೧೯೪೯ — ಕಿ. ಘ. ಮ.

ಅಗ್ಗವಾಗುವದಕ್ಕೆ ಕಾರಣ

'ಗ್ರಾಮ ಮೂಲಕ ಖಾದಿ' ಎಂಬ ಲೇಖನದಲ್ಲಿ ನಾನು ಮಾಡಿದ ಟೀಕೆಯು ೩೦ ನೇ ಜುಲೈ ದಿನ ಹೊಸದಿಲ್ಲಿಯಲ್ಲಿ ಕೂಡಿದ್ದ ಖಾದಿ ಸಲಹೆ ಸಮಿತಿಯ ಸಭೆಯಲ್ಲಿ ನಡೆದ ಕಾರ್ಯಕಲಾಪಗಳಿಂದ ಕೂಡಲೆ ಸಮರ್ಥಿಸಲ್ಪಟ್ಟಿದೆ [illegible] ಮಿಲ್ ನೂಲಿಗೆ ಕ್ಷೇತ್ರ ನಿಗದಿಪಡಿಸಬೇಕೆಂದು ನಾನು ಭಾವಿಸಿರಲಿಲ್ಲ. ಹೋಟೇಲ ನಾಗಾಟದ ಅಭಿವೃದ್ಧಿಗಾಗಿ ಮತ್ತು ಅದಕ್ಕೆ ಪ್ರೋತ್ಸಾಹವೆ ಕೊಡುವದಕ್ಕಾಗಿ ಎಷ್ಟೊಂದು ದಕ್ಷತೆ ವಹಿಸಲಾಗಿದೆಯೆಂದೂ ನಾಗಾಟದ ಅವಶ್ಯಕತೆಯನ್ನೆಲ್ಲ ಸರಕಾರ ವಹಿಸಿ ಅದನ್ನು ಸಾಕಷ್ಟು ಅಗ್ಗವಾಗಿ ಪೂರೈಸಬೇಕೆಂಬ ಬಗ್ಗೆ ಎಷ್ಟು ಕಾಳಜಿ ತೆಗೆದುಕೊಳ್ಳಲಾಗುತಿದೆಂಬುದು ಸಭೆಯಲ್ಲಿ ನಡೆದ ಕಾರ್ಯಕಲಾಪಗಳಿಂದ ಗೊತ್ತಾಗುವದು. ಅವುಗಳನ್ನು ನಾಗಾಟದ ಕರದಿಂದ [illegible] ಮಾಡಲಾಗಿದೆ, ಚಿಲ್ಲಾಬೋರ್ಡ ಮುನಸಿಪಾಲಿಟಿಗಳ ಜಕಾತಿಯು ಅವುಗಳಿಗೆ ಅನ್ವಯಿಸುವದಿಲ್ಲ.

"ನಗರಗಳಲ್ಲಿ ಹಾಯ್ದು ಹೋಗುವ ರಾಜಮಾರ್ಗಗಳನ್ನು ಸುಸ್ಥಿತಿಯಲ್ಲಿಡುವದಕ್ಕೆ ಅವಶ್ಯವಾದ ವೆಚ್ಚವನ್ನು ಕೇಂದ್ರವು ವಹಿಸುವದಲ್ಲದೆ ನಗರಗಳ ಹೊರಗಿನ ಬೀದಿಗಳನ್ನು ಸುಸ್ಥಿತಿಯಲ್ಲಿ ಇಡುವದಕ್ಕಾಗಿ ಬೇಕಾಗುವ ವೆಚ್ಚದ ಅರ್ಧವನ್ನು [illegible] ಕೊಡುವದರ ಬಗ್ಗೆ ಕೇಂದ್ರವು ವಿಚಾರ ಮಾಡತಕ್ಕದ್ದೆಂದು ಸಮಿತಿಯ ಅಭಿಪ್ರಾಯ. ನಗರಗಳಲ್ಲಿಯ ಬೀದಿಗಳ ನೆಲಗಟ್ಟನ್ನು ಸುಧಾರಿಸಲು ಕೆಲವೊಂದು ಕರಾರುಗಳ ಮೇಲೆ ಹಣ ಕೊಡಬೇಕೆಂಬ ಬಗ್ಗೆಯೂ ಕೇಂದ್ರ ಸರಕಾರವು ವಿಚಾರ ಮಾಡತಕ್ಕದ್ದು.

"ಇದಲ್ಲದೆ ಸಹಾಯನಿಧಿಗಳಲ್ಲಿ [illegible] ಸುಸ್ಥಿತಿಯಲ್ಲಿ ಇಡುವ ಬಗ್ಗೆ [illegible] ಸಹಾಯ ಧನದಲ್ಲಿ ಮಾಡಿದ [illegible] ಅನೇಕ ಪ್ರಾಂತೀಯ ಸರಕಾರಗಳು [illegible] ಕೊಂಡದ್ದನ್ನು ಲಕ್ಷಿಸಿ ತಕ್ಕದ್ದು [illegible] ಸಹಾಯ ಧನವನ್ನು ಸರಕಾರವು [illegible] ಬೇಕೆಂದು ಸಮಿತಿಯು ಸೂಚಿಸಿದೆ.

"ರೇಲ್ವೆ-ವಾಹನ [illegible] ಸಂಬಂಧವಾಗಿ ಮತ್ತು ರೇಲ್ವೆ [illegible] ಪ್ರಾಂತೀಯ ಮೋಟರ ನಾಗಾಟದಲ್ಲಿ [illegible] ವಹಿಸುವದರ ಸಂಬಂಧದಲ್ಲಿ [illegible] ನಾಗಾಟ ಸಂಸ್ಥೆಗಳಲ್ಲಿ ರೇಲ್ವೆಗಳಿಗೆ [illegible] ೨೦ ರಷ್ಟು ಅಧಿಕ [illegible] ಕೊಡಬೇಕೆಂಬ ಬಗ್ಗೆ ಪ್ರಾಂತೀಯ [illegible] ಸಂಸ್ಥಾನ ಸರಕಾರಗಳು [illegible] ದನ್ನು ಸಮಿತಿಯು ಲಕ್ಷಿಸುತ್ತದೆ."

ಈ ರೀತಿಯಾಗಿ ಮೋಟರ ನಾಗಾಟವು [illegible]

[illegible]

ಗ್ರಹಗಳ ಮುನ್ನೋಟ

[ಜ್ಯೋತಿಷಿ:— ಶ್ರೀ ಕೃಷ್ಣಶಾಸ್ತ್ರಿ ಭಿಡೆ, ಬೆಳಗಾಂವಿ]

ಅಗಸ್ಟ್ ೨೨ ರಿಂದ ೨೮ ರ ವರೆಗೆ

ಮೇಷ

ನಿಮ್ಮ ಸ್ವಂತ ಪ್ರಕೃತಿ ಉತ್ತಮ. ಆದರೆ ಹೆಂಡತಿ ಮಕ್ಕಳದು ತುಂಬ ಕೆಡುವ ಸಂಭವ ವಿರುವದನ್ನು ನೀವು ಮರೆಯಕೂಡದು. ಅದಕ್ಕಿಂತಲೂ ಹೆಚ್ಚಾಗಿ ನಿಮಗೂ ಹೆಂಡತಿಗೂ ಬರುವ ತಪ್ಪು ತಿಳುವಳಿಕೆಗಳ ಬಗ್ಗೆ ನಿಮ್ಮ ತಪ್ಪೇನೂ ಇಲ್ಲೆಂದು ನಿಮಗನಿಸಬಹುದಾದರೂ ಅವನ್ನು ಆದಷ್ಟು ಸರಿಪಡಿಸಿಕೊಂಡು ಹೋಗುವ ಮುತ್ಸದ್ದಿತನವಿದ್ದರೆ ಮಾತ್ರ ಸಾಂಸಾರಿಕ ಸುಖದ ಸ್ವಲ್ಪಾಂಶವಾದರೂ ನಿಮಗೆ ದೊರೆತೀತು. ಉದ್ಯೋಗದಲ್ಲಿ ನಿಮ್ಮ ಪ್ರತಿಷ್ಠೆ ಬೆಳೆಯುವದೆಂಬ ಆಶ್ವಾಸನ ಕೊಡಲಾರೆವು. ಆದರೆ ಲಾಭಕ್ಕೆ ಮಾತ್ರ ತೊಂದರೆಯಿಲ್ಲೆಂದು ಹೇಳಬಲ್ಲೆವು. ವ್ಯಾಪಾರ ಮೊದಲಾದವುಗಳಲ್ಲಿ ಹಿಂದೆ ಸರಿಯುವದು ಉತ್ತಮ. ಆದರೆ ಶತ್ರುಗಳಿಗೆ ಅಕಸ್ಮಾತ್ತಾಗಿ ಆಪತ್ತು ಬಂದು ಸಾಕೋಸಾಕೆನಿಸಿಬಿಡುವವು. ಭೆಟ್ಟಿ ನಿಷ್ಫಲ ಪ್ರವಾಸ ಪತ್ರವ್ಯವಹಾರ ಲೇಸು. ಅಶ್ವಿನಿಯ ಕೊನೆಯ ೩ ಮತ್ತು ಭರಣಿಯ ೧ನೆ ಚರಣಗಳು ವಿಶೇಷ ಜಾಗರೂಕರಾಗಿರಲಿ ತಾ. ೨೪, ೨೫, ೨೮ ಅನುಕೂಲ.

ಆದರೆ ಈಗ ವಕ್ರಿ ರಾಶಿಯಲ್ಲಿರುವ ಗುರುವು ವಕ್ರಗತಿಯಿಂದ ಇದೇ ಅಗಸ್ಟ್ ೨೮ ಕ್ಕೆ (ಭಾ.ಪ್ರ.ಶು. ೫ ರವಿವಾರ ಸಾಯಂಕಾಲ ೩ ಘಂ ೫೩ ಕ್ಕೆ) ಧನು ರಾಶಿಯನ್ನು ಪ್ರವೇಶಿಸುವನು. ಕಳೆದ ಫೆಬ್ರುವರಿ ೨೮ ರಿಂದ ನಿಮ್ಮ ೧೦ ನೆಯ ಸ್ಥಾನದಲ್ಲಿದ್ದ ಗುರು ತಿರುಗಿ ೯ ಕ್ಕೆ ಬಂದು ಅಲ್ಲಿ ೮೩ ದಿನಗಳ ಮಟ್ಟಿಗೆ ಅಂದರೆ ಅಕ್ಟೋಬರ ೧೧ ರ ವರೆಗೆ ಉಳಿಯುವದರಿಂದ ಈ ಅವಧಿಯಲ್ಲಿ ನಿಮ್ಮ ಭಾಗ್ಯ, ಕೀರ್ತಿ, ಧರ್ಮಶ್ರದ್ಧೆ, ಬಂಧುಪ್ರೇಮ ಮತ್ತು ಆರೋಗ್ಯ ಅಭಿವೃದ್ಧಿ ಹೊಂದುವವೆಂದು ಸ್ಥೂಲವಾಗಿ ಹೇಳಬಹುದು.

ವೃಷಭ

ನಿಮ್ಮ ಮತ್ತು ನಿಮ್ಮ ಹೆಂಡತಿಯ ಆರೋಗ್ಯ ಭಾಗ್ಯ ಚನ್ನಾಗಿರುವದು. ಮಕ್ಕಳ ವರ್ತನೆಯಿಂದ ನಿಮ್ಮಿಬ್ಬರಿಗೂ ತುಂಬ ತ್ರಾಸವಾದೀತಾದರೂ ಉಳಿದ ಪ್ರಾಪಂಚಿಕ ಸುಖಕ್ಕೆ ಕುಂದಿಲ್ಲ. ಒಂದು ಸರಕಾರಿ ಯೋಜನೆಯ ಫಲವಾಗಿ ನಿಮ್ಮ ಸ್ಥಿರಾಸ್ತಿಯ ಬೆಲೆ ಬಹಳ ಹೆಚ್ಚುವಂತಿದೆ. ಉದ್ಯೋಗದಲ್ಲಿ ಪ್ರತಿಷ್ಠೆ ಒಳಿತಾಗಿಯೆ ಇದ್ದರೂ ಲಾಭ ಇಳಿಮುಖವಾಗಬಹುದಾದ್ದರಿಂದ ವೆಚ್ಚಗಳಲ್ಲಿ ಕಡಿತವನ್ನು ಮಾಡಿರೆಂದು ಸೂಚಿಸಬೇಕಾಗಿದೆ. ಮಿತ್ರರಲ್ಲೊಬ್ಬನಿಗೆ ಪ್ರಾಣಘಾತುಕ ಗಂಡಾಂತರ ಬರಬಹುದು. ವ್ಯಾಪಾರಾದಿ ವ್ಯವಹಾರಗಳಲ್ಲಿ ನಿಮಗೆ ಅಷ್ಟು ಶ್ರೇಯಸ್ಸಿಲ್ಲ. ಪ್ರವಾಸಕ್ಕೆ ಕೈಹಾಕಬೇಡಿರಿ. ಭೆಟ್ಟಿ ಮತ್ತು ಪತ್ರವ್ಯವಹಾರ ಒಳಿತು. ರೋಹಿಣಿಯ ಕೊನೆಯ ೩ ಮತ್ತು ಮೃಗಶಿರೆಯ ೧ ನೆ ಚರಣಗಳಿಗೆ ಅನಿಷ್ಟ ಫಲ ವಿಶೇಷ ಬಾಧೆ ಕೊಡದು. ತಾ. ೨೨, ೨೩, ೨೬, ೨೭ ಅನುಕೂಲ.

ತಾ. ೨೮ ಕ್ಕೆ ಗುರು ೮ ನೆ ಸ್ಥಾನಕ್ಕೆ ಬರುವ ಕಾರಣ ಆ ಅವಧಿಯಲ್ಲಿ ನಿಮ್ಮ ಮಕ್ಕಳಿಗೆ ಕ್ಲೇಶವಾಗಬಹುದು. ಕೆಟ್ಟ ರೀತಿಯಿಂದಲಾದರೂ ಒಂದಿಷ್ಟು ಅನಿರೀಕ್ಷಿತ ಲಾಭ ನಿಮಗೆ ದೊರಕಬಹುದು. ಮಿತ್ರ ಸುಖವೂ ಉತ್ತಮ.

ಮಿಥುನ

ನಿಮ್ಮಿಬ್ಬರ ಪ್ರಕೃತಿಯೂ ಚನ್ನಾಗಿದ್ದರೂ ಮಕ್ಕಳಿಗೆ ತುಂಬ ಕ್ಲೇಶಯೋಗವಿದೆ. ವಾಹನಗಳು ಅಪಘಾತಕ್ಕೆ ಸಿಲುಕಿ ಹಾಳಾದಾವು. ಸ್ಥಿರಾಸ್ತಿಯಲ್ಲಿಯೂ ಅಷ್ಟಿಷ್ಟು ನಷ್ಟವಾಗಬಹುದು. ಉದ್ಯೋಗದಲ್ಲಿ ಲಾಭ ಯಥೇಷ್ಟ. ಮಾತ್ರ ಪ್ರತಿಷ್ಠೆಯನ್ನುಳಿಸಿಕೊಳ್ಳಲು ನೀವು ತುಂಬ ಪ್ರಯಾಸಪಡಬೇಕು. ವ್ಯಾಪಾರ ಮೊದಲಾದವುಗಳಲ್ಲಿ ನಿಮಗೇ ಗೆಲವು. ಭೆಟ್ಟಿ ವಿರಸದಲ್ಲಿ ಕೊನೆಗಾಣಬಹುದಾದ್ದರಿಂದ ಪತ್ರವ್ಯವಹಾರವೇ ಲೇಸು. ಪ್ರವಾಸಕ್ಕೂ ಅಡ್ಡಿಯಿಲ್ಲ. ಆರ್ದ್ರೆಯ ಕೊನೆಯ ೩ ಮತ್ತು ಪುನರ್ವಸು ವಿನ ೧ ನೆ ಚರಣಗಳಿಗೆ ಅಷ್ಟೇನೂ ತೊಂದರೆಯಾಗದು. ತಾ. ೨೨, ೨೩, ೨೭, ೨೫ ಅನುಕೂಲ.

ತಾ. ೨೮ ಕ್ಕೆ ೭ ನೆಯ ಸ್ಥಾನವನ್ನು ಪ್ರವೇಶಿಸುವ ಗುರು ನಿಮಗೆ ಸ್ತ್ರೀಸುಖ, ಮಿತ್ರಸುಖ, ಬಂಧುಪ್ರೇಮ, ಲಾಭ, ಪರಾಕ್ರಮ ಮತ್ತು ಅಧಿಕಾರ ವೃದ್ಧಿಯ ದೃಷ್ಟಿಯಿಂದ ಅನುಕೂಲನಾಗಿದ್ದಾನೆ.

ಕರ್ಕ

ನಿಮ್ಮ ಹೆಂಡತಿ ಮಕ್ಕಳ ಆರೋಗ್ಯಕ್ಕಿಂತ ನಿಮ್ಮದೇ ಎಷ್ಟೋ ಮೇಲು. ಹೇಳಲಾಗಿ ನಿಮ್ಮ ನಿಮ್ಮೊಳಗಿನ ವೈಮನಸ್ಯಗಳು ಸಂಸಾರಸುಖದಲ್ಲಿ ವ್ಯತ್ಯಯವೊಡ್ಡಬಹುದು. ಉದ್ಯೋಗದಲ್ಲಿ ಲಾಭವೇನೋ ಇದ್ದದ್ದರಲ್ಲಿ ಚನ್ನಾಗಿಯೆ ಇದೆ. ಆದರೆ ಪ್ರತಿಷ್ಠೆ ಚೂರು ಚೂರಾಗದಂತೆ ನೀವು ತುಂಬ ಎಚ್ಚರವಿರಬೇಕು. ನೀವು ೨ ಕಟಿಯತ್ತಬೇಕಾದರೆ ಚನ್ನಾಗಿ ವಿಚಾರ ಮಾಡಿಕೊಳ್ಳಿರಿ. ನಿಮ್ಮಲ್ಪಬುದ್ಧಿಯಿಂದಲೇ ನೀವು ಅಡಿದ್ದೂ ತುಂಬ ವಿಶ್ರ್ವಾಸಕ್ಕೆ ಟ್ಟು ಕೊಳ್ಳುವಂತಿದೆ. ನಿಮ್ಮ ಮಕ್ಕಳ ಚರ್ಯೆಯಿಂದ ಜನರಲ್ಲಿ ಕ್ಷೋಭೆಯುಂಟಾದೀತು. ವ್ಯಾಪಾರಾದಿ ವ್ಯವಹಾರಗಳಲ್ಲಿ ೨ ನಿಮಗೆ ಹಿಂದೇಟು ಬೀಳುವಂತಿದೆ. ಪ್ರವಾಸ ಮತ್ತು ಪತ್ರವ್ಯವಹಾರಕ್ಕಿಂತ ಭೆಟ್ಟಿ ಒಳಿತು. ಪುಷ್ಯದ ಮೊದಲ ೩ ಮತ್ತು ಆಶ್ಲೇಷೆಯ ೧ನೆ ಚರಣಗಳಿಗೆ ತೊಂದರೆ ಹೆಚ್ಚು. ತಾ. ೨೨, ೨೪, ೨೬, ೨೭ ಅನುಕೂಲ.

ತಾ. ೨೮ ಕ್ಕೆ ಆಗಮಿಸ ಗುರುಚಾರದಿಂದ ಕೀರ್ತಿಗೂ ಮಿತ್ರಸುಖಕ್ಕೂ ಹಾನಿಯೊದಗಬಹುದಾದರೂ ಅಧಿಕಾರ, ಪ್ರತಿಷ್ಠೆ ಇತ್ಯಾದಿಗೆಗೆ ಹಿತಾವಹನಾಗುವನು.

ಸಿಂಹ

ನಿಮ್ಮೆಲ್ಲರ ಆರೋಗ್ಯವೂ ಸರಿಯಾಗಿರುವದು ಆದರೆ ನಿಮ್ಮ ಮುಖ ಹೂರ್ತಕ್ಕಾದರೆ ಕೈಹಿಡಿದವಳದು ಜಪ್ಪಿಮುಕ್ಕೆ. ಹೀಗಾಗಿ ನಿಮಗೆ ಕಷ್ಟವೆನಿಸಬಹುದು. ಮಕ್ಕಳ ಉನ್ನತಿ. ಉದ್ಯೋಗದಲ್ಲಿ ಬಯಸಿದಷ್ಟು ಲಾಭ ಮತ್ತು ಪ್ರತಿಷ್ಠೆ. ಖರ್ಚುಕೂಡ ಹಾಗೆಯೇ. ವ್ಯಾಪಾರ ಮೊದಲಾದವುಗಳಲ್ಲಿ ನಿಮಗೇ ಮೇಲ್ಗೈ. ಪ್ರವಾಸಾದಿ ಕಾರ್ಯಗಳೆಲ್ಲವೂ ಹಿತಕರ. ಮಘೆಯ ಕೊನೆಯ ೩ ಮತ್ತು ಪೂರ್ವದ ೧ ನೆ ಚರಣಗಳಿಗೆ ಸ್ವಲ್ಪ ಕಷ್ಟಪಟ್ಟರೇನೆ ಇಷ್ಟಸಿದ್ಧಿ. ತಾ. ೨೪, ೨೫, ೨೬, ೨೭ ಅನುಕೂಲ.

ತಾ. ೨೮ ಕ್ಕೆ ೫ ನೆ ಸ್ಥಾನವನ್ನು ಪ್ರವೇಶಿಸುವ ಗುರು ನಿಮಗೆ ಲಾಭ, ಸಂತತಿಸೌಖ್ಯ, ಯಶ, ಕೀರ್ತಿ ಮತ್ತು ಆರೋಗ್ಯಗಳಿಗೆ ಸಹಾಯಕನಾಗುವನು.

ಕನ್ಯಾ

ನಿಮ್ಮ ಸ್ವಂತ ಆರೋಗ್ಯದಲ್ಲಿ ತುಸು ಆತಂಕ ಬಂದೀತು ಮಕ್ಕಳದೂ ಹಾಗೆಯೆ. ಪ್ರಾಪಂಚಿಕ ಸುಖ ಸಾಧಾರಣ. ಸ್ಥಿರಾಸ್ತಿಯಲ್ಲಿ ಸ್ವಲ್ಪ ಅನುಕೂಲ ಸಂಗತಿಗಳು ಜರಗಬಹುದು. ಉದ್ಯೋಗದಲ್ಲಿ ಪ್ರತಿಷ್ಠೆಯನ್ನು ಕಾಯ್ದುಕೊಳ್ಳುವದೇ ನಿಮ್ಮ ಮುಖ್ಯ ಗುರಿಯಾಗಿರಲಿ. ಲಾಭದ ಬಗ್ಗೆ ನೀವು ಚಿಂತಿಸಬೇಕಾಗಿಲ್ಲ. ವ್ಯಾಪಾರ ಮೊದಲಾದ ವ್ಯವಹಾರಗಳಲ್ಲಿ ತುಂಬ ವೆಚ್ಚವಾದರೂ ಕೊನೆಯಲ್ಲಿ ನಿಮಗೇ ಯಶ ದೊರೆಯುವ ಕಾರಣ ಸಂತುಷ್ಟರಾಗುವಿರಿ. ಪ್ರವಾಸ ಸುಖಾವಹ. ಭೆಟ್ಟಿಯಾಗಲಿ ಪತ್ರವ್ಯವಹಾರವಾಗಲಿ ಸಫಲವಾಗುವದು ಸಂಶಯ. ಹಸ್ತದ ಕೊನೆಯ ೨ ಮತ್ತು ಚಿತ್ರೆಯ ೧ ನೆ ಚರಣಗಳಿಗೆ ತೊಂದರೆ ಕಡಿಮೆ. ತಾ. ೨೨, ೨೩, ೨೬, ೨೭ ಅನುಕೂಲ.

ತಾ. ೨೮ ಕ್ಕೆ ಗುರು ೪ ನೆ ಸ್ಥಾನ ಪ್ರವೇಶ ಮಾಡುವ ಕಾರಣ ಆಪ್ತರಿಂದ ವಿರೋಧ, ಕೈಕೆಳಗಿನವರ ತಂಟೆ, ಲಾಭದ ಕೊರತೆ, ಶುಭ ಕಾರ್ಯಗಳಲ್ಲಾದರೂ ತುಂಬ ವೆಚ್ಚ, ಮನಃಕ್ಲೇಶ ಮೊದಲಾದ ಅನಿಷ್ಟಫಲಗಳಾಗಬಹುದು.

ತುಲಾ

ನಿಮ್ಮ ಪ್ರಕೃತಿಗೆ ಒಷ್ಟಿಷ್ಟು ಕ್ಲೇಶವಾಗಬಹುದು. ಆದರೆ ಹೆಂಡತಿ ಮಕ್ಕಳ ಆರೋಗ್ಯ ಸರಿಯಾಗಿರುವದು. ಪ್ರಾಪಂಚಿಕ ಸುಖ ಉತ್ತಮ. ಉದ್ಯೋಗದಲ್ಲಿ ಪ್ರತಿಷ್ಠೆ ಅತಿ ಉನ್ನತಿಗೇರುವದು. ಲಾಭವೂ ಯಥೇಷ್ಟ. ನಿಮ್ಮ ಒಳಗಡವರು ಮಾತ್ರ ಕುಚೇಷ್ಟೆ ಮಾಡುವರು. ವ್ಯಾಪಾರ ಮೊದಲಾದ್ದರಲ್ಲಿ ನಿಮಗೆ ಜಯ. ಪ್ರವಾಸಾದಿ ಕಾರ್ಯಗಳು ಹಿತಾವಹ. ಸ್ವಾತಿಯ ಕೊನೆಯ ೩ ಮತ್ತು ವಿಶಾಖೆಯ ೧ ನೆ ಚರಣಗಳಿಗೆ ಹೆಚ್ಚು ಸುಖ. ತಾ. ೨೨, ೨೩, ೨೪, ೨೫ ಅನುಕೂಲ.

ತಾ. ೨೮ಕ್ಕೆ ೩ ನೆ ಸ್ಥಾನವನ್ನು ಪ್ರವೇಶಿಸುವ ಗುರು ಲಾಭ, ಸ್ತ್ರೀಸುಖ, ಮತ್ತು ಭಾಗ್ಯಕ್ಕೆ ಹಿತಕರ.

ವೃಶ್ಚಿಕ

ನಿಮ್ಮ ಆರೋಗ್ಯ ಅಷ್ಟು ತೃಪ್ತಿಕರವಾಗಿರಲಾರದು. ಉಳಿದವರದು ನೆಟ್ಟಗೆ ಪ್ರಾಪಂಚಿಕ ಸುಖ ಉತ್ತಮ. ಉದ್ಯೋಗದಲ್ಲಿ ಪ್ರತಿಷ್ಠೆ ಮತ್ತು ಲಾಭ ಯಥೇಷ್ಟ. ಆದರೆ ಮಿತ್ರರಿಗೋಸ್ಕರ ನೀವು ತುಂಬ ವೆಚ್ಚಮಾಡುವಿರಿ. ಮಕ್ಕಳ ಉತ್ತರೋತ್ತರಾಭಿವೃದ್ಧಿ. ವ್ಯಾಪಾರ ಮೊದಲಾದ್ದರಲ್ಲಿ ನಿಮಗೇ ಯಶ. ಕೆಲ ಪುಣ್ಯ ಕಾರ್ಯಗಳೂ ನಿಮ್ಮಿಂದಾಗಬಹುದು. ಪ್ರವಾಸಾದಿ ಕಾರ್ಯಗಳು ಬಯಸಿದಂತೆ. ಅನುರಾಧೆಯ ಕೊನೆಯ ೩ ಮತ್ತು ಜ್ಯೇಷ್ಠೆಯ ೧ ನೆ ಚರಣಗಳಿಗೆ ಕಷ್ಟದಿಂದಲೆ ಯಶ. ತಾ. ೨೨, ೨೩, ೨೪, ೨೫ ಅನುಕೂಲ.

ತಾ ೨೮ ಕ್ಕೆ ೨ ನೆ ಸ್ಥಾನಕ್ಕೆ ಗುರು ಬರುವ ಕಾರಣ ಕೌಟುಂಬಿಕ ಸುಖ, ಧನಸಂಗ್ರಹ, ವಾಕ್ಸಿದ್ಧಿ, ಅಧಿಕಾರವೃದ್ಧಿ ಮೊದಲಾದ ಸತ್ಫಲಗಳನ್ನು ನೀವು ನಿರೀಕ್ಷಿಸಬಹುದು.

ಧನು

ಆರೋಗ್ಯ ಚನ್ನಾಗಿದ್ದು ಪ್ರಾಪಂಚಿಕ ಸುಖ ಉತ್ತಮವಾಗಿದೆ. ಮಾತ್ರ ಆಪ್ತ ಮತ್ತು ಆಶ್ರಿತರಿಂದ ತುಂಬ ಕಾಟವನ್ನು ಅನುಭವಿಸಬೇಕಾದೀತು. ಉದ್ಯೋಗದಲ್ಲಿ ಪ್ರತಿಷ್ಠೆ ಲಾಭ ಎರಡೂ ಉತ್ಕೃಷ್ಟ ವ್ಯಾಪಾರ ಮೊದಲಾದವುಗಳಲ್ಲಿ ಸಾಧಾರಣ ಯಶ. ಪತ್ರವ್ಯವಹಾರ ಮತ್ತು ಪ್ರವಾಸ ಭೆಟ್ಟಿಗಿಂತ ಪಾಸಿ. ಮೂಲದ ಕೊನೆಯ ೩ ಮತ್ತು ಪೂರ್ವಾಷಾಢದ ೧ನೆ ಚರಣಗಳಿಗೆ ಸ್ವಲ್ಪ ತೊಂದರೆ ಹೆಚ್ಚು. ತಾ. ೨೪, ೨೫ ೨೬, ೨೭ ಅನುಕೂಲ.

ತಾ ೨೮ಕ್ಕೆ ಗುರು ನಿಮ್ಮ ಜನ್ಮರಾಶಿಯನ್ನು ಪ್ರವೇಶಿಸುವದು ಆರೋಗ್ಯ, ಸ್ತ್ರೀಸುಖ, ಮಕ್ಕಳ ಉತ್ಕರ್ಷ ಮೊದಲಾದ್ದಕ್ಕೆ ಅನುಕೂಲವಾಗಿದೆ.

ಮಕರ

ನಿಮ್ಮ ಆರೋಗ್ಯವನ್ನು ಜತನದಿಂದ ಕಾಪಾಡಿರಿ. ಉದ್ಯೋಗದಲ್ಲಿ ಲಾಭ ವಿಶೇಷವಾಗಿಲ್ಲದಿದ್ದರೂ ಪ್ರತಿಷ್ಠೆ ತುಂಬ ಮಿತ್ರರಲ್ಲಿ ವಿರೋಧ ಹೆಚ್ಚೀತು. ಸ್ಥಿರಾಸ್ತಿಯಲ್ಲಿ ಹಾನಿಯೊದಗುವ ಸಂಭವವುಂಟು. ವ್ಯಾಪಾರ ಮೊದಲಾದ್ದರಲ್ಲಿ ಹೇಳುವಂಥ ಮಾತೇನೂ ಜರಗುವದಿಲ್ಲ. ಭೆಟ್ಟಿ ಸಫಲ. ಪ್ರವಾಸ ಮತ್ತು ಪತ್ರವ್ಯವಹಾರ ಅಷ್ಟೇನೂ ಒಳಿತಲ್ಲ. ಶ್ರವಣದ ಕೊನೆಯ ೩ ಮತ್ತು ಧನಿಷ್ಠೆಯ ೧ ನೆ ಚರಣಗಳಿಗೆ ತೊಂದರೆ ಕಡಿಮೆ ತಾ. ೨೨, ೨೩, ೨೬, ೨೭ ಅನುಕೂಲ.

ತಾ. ೨೮ ಕ್ಕೆ ೧೨ ನೆ ಸ್ಥಾನವನ್ನು ಪ್ರವೇಶಿಸುವ ಗುರು ತುಂಬ ವೆಚ್ಚಕ್ಕೂ ಸ್ವರ್ಗದ್ವೇಷಕ್ಕೂ ಯಾತ್ರಾದಿ ಪುಣ್ಯ ಕೃತ್ಯಗಳು, ದಾಯಾದ್ಯರಿಂದ ತೊಂದರೆ ಮೊದಲಾದ ಫಲಗಳಿಗೂ ಕಾರಣನಾಗ ವನು.

ಕುಂಭ

ಎಲ್ಲರ ಪ್ರಕೃತಿಯೂ ಸೌಖ್ಯ. ಆದರೆ ದಂಪತಿಗಳಲ್ಲಿ ಐಕ್ಯವಿಲ್ಲತೆ ಪ್ರಾಪಂಚಿಕ ಸುಖ ಅಷ್ಟು ಸೊಗಸದು ಸ್ಥಿರಾಸ್ತಿಯಲ್ಲಿ ಸ್ವಲ್ಪ ನಷ್ಟವಾಗಬಹುದು. ಉದ್ಯೋಗದಲ್ಲಿ ಪ್ರತಿಷ್ಠೆ ಮತ್ತು ಲಾಭ ಚನ್ನಾಗಿರುವದು. ಮಿತ್ರಸುಖ ಉತ್ತಮ. ವ್ಯಾಪಾರ ಮೊದಲಾದ್ದರಲ್ಲಿ ಎರಡೂ ಪಕ್ಷಗಳ ಸ್ಥಿತಿ ಇದ್ದಂತೆಯೆ. ಪ್ರವಾಸ ಬೇಡ. ಭೆಟ್ಟಿ ಪತ್ರವ್ಯವಹಾರಗಳಿಗೆ ಅಡ್ಡಿಯಿಲ್ಲ ಶತತಾರೆಯ ಕೊನೆಯ ೩ ಮತ್ತು ಪೂರ್ವಾಭಾದ್ರೆಯ ೧ ನೆ ಚರಣಕ್ಕೆ ತೊಂದರೆ ಕಡಿಮೆ. ತಾ. ೨೪, ೨೫, ೨೮ ಅನುಕೂಲ.

ತಾ. ೨೮ ಕ್ಕೆ ೧೧ ನೆ ಸ್ಥಾನವನ್ನು ಪ್ರವೇಶಿಸುವ ಗುರುವಿನಿಂದ ಲಾಭ, ಮಿತ್ರಸುಖ, ಸ್ತ್ರೀಸುಖ, ಸಂತತಿಯ ಉತ್ಕರ್ಷವೇ ಮೊದಲಾದ ಸತ್ಫಲಗಳುಂಟಾಗುವವು.

ಮೀನ

ಹೆಂಡತಿಯ ಆರೋಗ್ಯದತ್ತ ತುಸು ಲಕ್ಷ್ಯವಿರಲಿ. ಉದ್ಯೋಗದಲ್ಲಿ ಪ್ರತಿಷ್ಠೆ ಮತ್ತು ಲಾಭ ಉತ್ತಮ. ವೆಚ್ಚವೂ ಮಿತಿಯಿಲ್ಲದಷ್ಟು. ಮಿತ್ರರಲ್ಲಿ ಸ್ವಲ್ಪ ವಿರೋಧವೊದಗಬಹುದು. ವ್ಯಾಪಾರ ಮೊದಲಾದ್ದರಲ್ಲಿ ನೀವು ಸ್ವಲ್ಪ ಹಿಂದೆ ಸರಿಯುವುದೇ ಮೇಲು. ಪತ್ರವ್ಯವಹಾರದಿಂದ ಫಲವಿಲ್ಲ. ಪ್ರವಾಸ ಮತ್ತು ಭೆಟ್ಟಿ ಅಡ್ಡಿಯಿಲ್ಲ. ಉತ್ತರಾಭಾದ್ರೆಯ ಕೊನೆಯ ೩ ಮತ್ತು ರೇವತಿಯ ೧ ನೇ ಚರಣಗಳಿಗೆ ಕೈಕೆಳಗಾಗದೆ ಬಾಯಿ ಮೊಸರಿಲ್ಲ. ತಾ. ೨೨, ೨೩, ೨೬, ೨೭ ಅನುಕೂಲ.

ತಾ. ೨೮ ಕ್ಕೆ ಗುರು ೧೦ ನೇ ಸ್ಥಾನಕ್ಕೆ ಬರುವ ಮೂಲಕ ಸತ್ತೆ, ಅಧಿಕಾರ, ಗೃಹಸುಖ, ಸಂಪತ್ತಿ ಮೊದಲಾದವುಗಳಿಗೆ ಹಿತ.

ಗೆಲುವೆ, ಸೋಲೆ?

ಲೇಖಕರು: ವೀರಭದ್ರ ವ್ಯಾಗೇರಿ, ಜಲಂಧರ

...ಎಡೆಬಿಡದ ತುಂಬುಜೀವನ. ಸಂತಸದ ಒಂದು ಸ್ರೋತವೇ ಆಗಿತ್ತು, ಅತ್ಯಂತ ಸುಖದಾಯಕವಾಗಿತ್ತು..... ಶೀಲಳನ್ನು ಮದುವೆಯಾಗಿ ಮನೆಗೆ ಕರೆತಂದ ದಿನವದು. ಅನಂತನು ಕಾಲೇಜಿನಲ್ಲಿ ಪ್ರೊಫೆಸರ ಕೆಲಸಕ್ಕೆ ಸೇರಿದನು. ತದನಂತರ? ಅಷ್ಟೇ ಆನಂದ, ಅಷ್ಟೇ ಸುಖ ಜೀವನವೆ ಸಂಗೀತವಾಯಿತು. ಎಲ್ಲೆ ಇಲ್ಲದಾಯಿತು. ಸ್ಫೂರ್ತಿಮಯವಾಯಿತು.

ಹೆಂಗುಸರಿಗೆ ಬರೀ ಹಂಚಿಕೊಡುವುದು ಮಾತ್ರ ಗೊತ್ತು. ತಮಗೆಂದು ಕೊಂಚವನ್ನೂ ಇಟ್ಟುಕೊಳ್ಳುವುದಿಲ್ಲ ಅವರು. ಗಂಡಸಾದರೋ? ....ಗಂಡಸೇನು ಮಾಡುವನು? ಇದಕ್ಕೆ ಉತ್ತರ ಕೊಡುವುದಕ್ಕಾಗುವುದಿಲ್ಲ. ಉತ್ತರ ಕೊಡುವುದಕ್ಕೆ "ಕೂಡದು" ಎಂಬ ನಿಷೇಧ ಹಾಕಿದ್ದಾರೆ.

ಪ್ರಪಂಚದಲ್ಲೆಲ್ಲ ಸೊಬಗು ಕಂಡು ಬರುತ್ತಿತ್ತು. ಜೀವನದಲ್ಲಿ ಉಲ್ಲಾಸವಿದ್ದಾಗ, ಹಸುರು ಹುಲ್ಲಿನಲ್ಲಿ ಸೌಂದರ್ಯವಿತ್ತು; ಕೊಳಗಳಲ್ಲಿನ ಕಮಲಗಳಲ್ಲಿ ಸೌಂದರ್ಯವಿತ್ತು; ದಕ್ಷಿಣದ ಮಲಯಮಾರುತದಲ್ಲಿ ಸೌಂದರ್ಯವಿತ್ತು; ಬೆಳಗಿನ ಮಂಜು, ಮಧ್ಯಾಹ್ನದ ಬಿಸಿಲು, ಸಂಜೆಯ ಬಿಸಿಲು, ಇರುಳಿನ ಗಾಂಭೀರ್ಯ ಎಲ್ಲವೂ ಬಹು ಮನೋಹರವಾಗಿ ಇರುತ್ತಿತ್ತು... ಆದರೆ ಜೀವನದಲ್ಲಿ ಉಲ್ಲಾಸವಿಲ್ಲವಾಗ, ಅದು ಮಾಧುರ್ಯಹೀನವಾದಾಗ ಹೇಗಿರುತ್ತೆ? ...ದಿನ ಮಾತನ್ನು ಹೇಳತಕ್ಕವರು ಯಾರಿರುತ್ತಾರೆ?...

...ವಲ ಪ್ರಶ್ನೆಯಿದು. ಉತ್ತರ ಕೊಡು...ಯ ಯಾರು?

...ದಿನಂತೆ ಅಂದೂ ಕತ್ತಲು ಬಂದು ...ಯನ್ನು ಎದೆಗಪ್ಪಿಕೊಂಡಿತು. ಆ ಸ್ಪರ್ಶ ...ಕತ್ತಲೆಗೆ ಪ್ರಕಾಶ ಬಂದಂತಿತ್ತು. ಅದೇ ...ಯಕ್ಕೆ ಚಂದ್ರನೂ ಬೆಳಕನ್ನು ಚೆಲ್ಲಿದ.

... "ಈ ದಿನ ಒಳ್ಳೇ ಪ್ರಕಾಶಮಾನದ ರಾತ್ರಿ! ಅದೇನು ಮಾಡುತ್ತಿರುವೆ? ಬಾ ಇಲ್ಲಿ. ಒಳ್ಳೇ ಸುಂದರವಾದ ಬೆಳದಿಂಗಳ ರಾತ್ರಿ! ಹೀಗೆಯೇ ಎಂದೆಂದಿಗೂ ಕುಳಿತುಕೊಳ್ಳೋಣವೆಂದು ಮನಸ್ಸಾಗುತ್ತೆ. ಇಂತಹ ಬೆಳದಿಂಗಳೂ ಎಂದೂ ಸಿಕ್ಕಿದ್ದಿಲ್ಲ. ಓ! ಅದೆಷ್ಟು ಸುಂದರ!"

ಶೀಲ ಬಂದು ಕುಳಿತಳು. ಇಬ್ಬರೂ ಆಕಾಶದ ಸೌಂದರ್ಯವನ್ನು ಅನುಭವಿಸತೊಡಗಿದರು. ಅನಂತವಾದ ಕವಿತೆಯ ಸೂಕ್ಷ್ಮಭಾವನೆಗಳ ಸುಖವನ್ನು ಶೀಲಳು ನಾದೀಸುಲಭ ಕೋಮಲತೆಯಿಂದಾಗಿ ಅನುಭವಿಸತೊಡಗಿದಳು.

ಶೀಲಳು ಭಾವನಾಪರವಶಳಾಗಿದ್ದಳು. ಅನಂತನು ಅವಳ ವಿಷಯವಾಗಿ ಮಾತೆತ್ತಿದ. ಶೀಲಳು ಮಾತ್ರ ಅದೇಕೊ ನಿರುತ್ತರಳಾಗಿದ್ದಳು. ಅನಂತನು "ಶೀಲ, ಆಕಾಶದಲ್ಲಿ ಇಷ್ಟೊಂದು ಪ್ರೇಮವಿದೆ, ಇಷ್ಟೊಂದು ಮಾಧುರ್ಯವಿದೆ, ಇಷ್ಟೊಂದು ಆನಂದವಿದೆ. ಆದರೆ ಈ ನಮ್ಮ ಪೃಥ್ವಿಯ ಮೇಲೆ ಏನೊಂದೂ ಇಲ್ಲ," ಅಂದನು.

ಶೀಲ ಏನೂ ಹೇಳದಿದ್ದಳು. ಅನಂತನ ಕಾವ್ಯರಸದ ಮೇಲೆ ಅವಳ ಅಧಿಕಾರ ಇರಲಿಲ್ಲ.

ಅನಂತನು ತನ್ನ ಮತ್ತು ಶೀಲಳ ಜೀವವು ಹಾಗೆಯೇ ಉಳಿದು ತಮ್ಮ ಸಂಬಂಧವು ಹೇಗೆಯೋ ಸಮಧುರವಾಗಿ ಇದ್ದರೆ ಮತ್ತಾವುದು ತಾನೇ ಅದಕ್ಕಿಂತ ಒಳ್ಳೆಯದೆನಿಸೀತು ಎಂಬುದಾಗಿ ಯೋಚಿಸಿಕೊಂಡನು.

...ಕೊತು ಕೊತು ಶೀಲಳಿಗೆ ಸಾಕಾಯಿತು. ಹೊರಡುವದಕ್ಕೆ ಸಿದ್ಧಳಾದಳು. ಅನಂತನು ತಡೆದ. ಕೊಂಚ ವೇಳೆಯ ನಂತರ ಇಬ್ಬರೂ ಎದ್ದು ಮುನ್ನಡೆದರು. ಅನಂತನು ಹೇಳತೊಡಗಿದ.

"ಶೀಲ, ನಿನ್ನ ಮತ್ತು ನನ್ನ ಜೀವನಗಳು ಈ ನಕ್ಷತ್ರಗಳಂತೆ ಅಗಲಿಕ್ಕಿಲ್ಲವೇ? ಅನಂತ ಕಾಲದ ವರೆಗೂ ನಾವೂ ಈ ನಕ್ಷತ್ರಗಳಂತೆ ಶೋಭಿಸುವೆವು."

ನಾಚಿಕೆಗೊಂಡು ಶೀಲಳು "ಸರಿ, ಸಾಕು ಈ ನಿಮ್ಮ ಮಾತು, ಲೆಕ್ಚರು. ಇನ್ನೂ ಬಹಳ ದಿನಗಳಿವೆ. ಹಿಂದಿನಿಂದ ಮಾತನಾಡಬಹುದು."

ಅನಂತನೆಂದ: "ಶೀಲ, ನನ್ನೀ ಮಾತುಗಳು ನಿನಗೆ ಸರಿಯೆನಿಸವೇ?"

"ಹಾಗೆಂದು ಹೇಳಿದವರಾರು?" ಎಂದೆನ್ನುತ್ತ ಅನಂತನೆಡೆಗೆ ಕುಡಿನೋಟ ಬೀರಿದಳು ಶೀಲ.

ಅನಂತನು ಎಂದೂ ಇರದ ಸುಂದರತೆಯನ್ನು ಕಂಡ-ಶೀಲಳ ಮುಖದಲ್ಲಿ. ಮೆಲ್ಲಗೆ ಸುಳಿ-ಸುಳಿಯಾಗಿ, ತಂಪಾಗಿ ಬೀಸುತ್ತಿರುವ ಗಾಳಿಗೆ ಶೀಲಳ ಮುಂಗುರುಳುಗಳು ಹೊಯ್ದಾಡುತ್ತಿರುವಂತೆಯೇ—ಅನಂತನ ತೋಳ್ತೆಕ್ಕೆಯಲ್ಲಿ ಬಂಧಿತಳಾದಳು ಶೀಲ. ಅಷ್ಟರಲ್ಲಿ ಚಂದ್ರನು ಮರೆಯಾದುದರಿಂದ ಕತ್ತಲಾಗಿ ಅವರಾರಿಗೂ ಕಾಣಿಸದಂತಾದರು. ಅವರು ಬಹಳ ಸಮಯದ ನಂತರ ಮನೆ ತಲುಪಿದರೆಂದು ತೋರುತ್ತದೆ.

× × ×

ಇದ್ದಕ್ಕಿದ್ದ ಹಾಗೆ ಏನೊ ಆಯಿತು. ಪ್ರಪಂಚವೇ ತಿರುಗುವಂತಾದಂತಾಯಿತು. ಅನಂತನ ಕವಿತೆಯು ಕೆಲಸ ಮಾಡಿಯಿತು; ಭಾವದ ಅಲೆ ಮುಳುಗಿತು ನಷ್ಟವಾಗಿ ಜೀವಿಸಬೇಕೆನ್ನುವ ಮೋಹ ಅಡಗಿತು. ಅನಂತನ ಜೀವನದಲ್ಲಿ ಒಂದು ನೂತನ ಪರ್ವ.

ಡಾಕ್ಟರ ಸುರೇಶರು ಒಳಗಿನಿಂದ ಬಂದು, "ಅನಂತ, ಇನ್ನು ಆಶೆಯಿಲ್ಲ. ಸಂಪೂರ್ಣವಾಗಿ ಹುಚ್ಚಿನ ಲಕ್ಷಣಗಳೇ ಕಾಣಬರುತ್ತವೆ, ನನ್ನ ವಿಚಾರದಲ್ಲಿ ಶೀಲಳನ್ನು ಮನೆಯಲ್ಲಿರಿಸುವುದರಿಂದ ಮತ್ತೂ ಕೆಡುವುದು" ಎಂಬುದಾಗಿ ಸುದ್ದಿ ತಿಳಿಸಿದರು.

ಅನಂತನು ದೀರ್ಘವಾದ ನಿಟ್ಟುಸಿರೊಂದನ್ನು ಬಿಟ್ಟನು. "ಹುಚ್ಚಿನ ಲಕ್ಷಣ! ಶೀಲಳಲ್ಲೂ ಹುಚ್ಚಿಯ ಲಕ್ಷಣ.... ಉಪಾಯ, ಉಪಾಯ! ಡಾಕ್ಟರೆ, ಉಪಾಯವೇನು?...." ಮತ್ತೆ ನೀಳವಾದ ನಿಟ್ಟುಸಿರು. ಕೊಂಚ ಹೊತ್ತಾದ ನಂತರ ಕೋಣೆಯಿಂದ ಕೇಳಿ ಬಂತು—ಶೀಲಳ ಚೀರಲು ಧ್ವನಿ.

ಡಾಕ್ಟರು "ಕೇಳಿದಿರಾ?" ಅಂದರು.

ಅನಂತ ಏನು ತಾನೇ ಉತ್ತರ ಕೊಡಬಲ್ಲ!

ಡಾಕ್ಟರು, "ಇನ್ನು ಆಶೆಯಿಲ್ಲ, ಅನಂತ, ರಾಜಪುರಕ್ಕೆ ಕಳಿಸುವುದನ್ನು ಬಿಟ್ಟರೆ ಬೇರೊಂದು ಉಪಾಯವಿಲ್ಲ. ಅಲ್ಲಿಗೆ ಹೋಗಿ ಇರುವುದರಿಂದ ಏನಾದರೂ ಗುಣ ಆದೀತು. ಮನೆಯಲ್ಲಿರಿಸುವುದರಿಂದ ಕೆಡುತ್ತಾದೀತು."

ಕೋಣೆಯಲ್ಲಿ ಪ್ರತಿಧ್ವನಿ ಹೊರಟಿತು. 'ಕೆಡಕು' ಅನಂತನ ಹೃದಯದಲ್ಲಿ ಅದಾರೊ "ಕೆಡಕು" ಎಂದು ಉಸುರಿದಂತಾಯಿತು. ಜೊತೆಗೆ ದೂರದಲ್ಲಿದ್ದ ಕಚೇರಿ ಗಂಟೆ ಬಡಿಯಿತು: ಒಂದು, ಎರಡು, ಮೂರು, ನಾಲ್ಕು ......ಹತ್ತು. ಡಾಕ್ಟರು ಕುರ್ಚಿಯಿಂದೆದ್ದು ನಿಂತರು, "ಓಹ್! ಬಹಳ ರಾತ್ರಿಯಾಯಿತು. ನೀವು ಇವಳ ಹತ್ತಿರವೇ ಇರಿ, ನಾನು ಹೊರಡುತ್ತೇನೆ."

ಡಾಕ್ಟರು ಹೊರಟುಹೋದರು. ಅನಂತನಿಗೆ ಕೇಳಿಸಿತು: ಪ್ರಪಂಚವು ಹಿಂದಿನಿಂದ ಹೇಳುತ್ತೆ—"ಆಶೆಯಿಲ್ಲ." ಅನಂತನ ಜೀವನವು ಸುಂದರವಾಗಿದ್ದಾಗ ಕೇವಲ ಸುಖ ಮತ್ತು ನಗುವಿತ್ತು. ಆದರೆ ಜೀವನದ ಈ ಹೊಸ ಯುಗದಲ್ಲಿ ಪ್ರಪಂಚವೇ ಅನಂತನನ್ನು ನೋಡಿ ನಗುತ್ತಿದೆ. ಜೀವನವೇ ವ್ಯರ್ಥ! ಹಲವು ವರ್ಷಗಳು ಉರುಳಿದುವು, ಶೀಲಳು ಹುಚ್ಚಾಸ್ಪತ್ರಿಯಲ್ಲಿ ಬಿದ್ದಿದ್ದಾಳೆ. ಅನಂತನೇನೊ ಅದೇ ಅನಂತ-ಅದೇ ಕಾಲೇಜಿನಲ್ಲಿ ಪ್ರೊಫೆಸರು.

× × ×

ಆದರಿಲ್ಲಿ ಆಮೂಲಾಗ್ರ ಪರಿವರ್ತನೆ. ಅನಂತನಿಗೆ ಒಂದೆರಡು ಮಕ್ಕಳು. ವಿವಾಹಿತ ಜೀವನ ಊರ್ಮಿಳೆ ಇಂದು ಅನಂತನ ಜೀವನದ ಸಂಗಾತಿ. ಊರ್ಮಿಳೆ ಸುಂದರಳು, ಸುಶಿಕ್ಷಿತಳು ಮತ್ತು ಹೊಸ ಜೆಳಕು ಬೆಡಗಿನವಳು.

ಜೀವನದ ಸುಖವೇನೂ ಹೋಗಲಿಲ್ಲ ಶೀಲ ಹೋದಳು, ಆದರೆ ಅನಂತ ಅನಂತನೇ. ಅವನಿಗೇಕೆ ದುಃಖ? ಗಂಡಸು ದೇವರ ಹಿರಿಮಗ; ಬಯಲ ಬಂಗಾರ. ಅವನಿಗಾಗಿ ನೂರಾರು ಹೆಣ್ಣುಮಕ್ಕಳ ಜೀವನವೇ ಆಹುತಿಯಾಗಬಹುದು. ಗಂಡಸಿಗೇಕೆ ಸುಖ ಬೇಡ?.... ಹೆಂಗುಸಾದರೋ-ಗಂಡಸಿನ ವಿಲಾಸವಸ್ತು. ಗಂಡಸು ಹಣೆಯ ಮೇಲೆ ಅನಂತ ಸುಖದ ರಾಜತಿಲಕವನ್ನು ಹಚ್ಚಿಕೊಂಡು ಬಂದಿದ್ದಾನೆ. ಪ್ರಕೃತಿಯೂ ಹೆಚ್ಚು ಪ್ರೀತಿಸುವುದೂ ಪುರುಷನನ್ನೇ. ಈಶ್ವರನಿಗೂ ಅವನೇ ಬೇಕು. ಹೆಂಗುಸಿನಿಂದೇನು ಪ್ರಯೋಜನ?

ಅನಂತನ ಜೀವನದ ಸುಖ ಮೂರೆಳೆ ಉಳಿತು ಮತ್ತೆ ಚಂದ್ರನ ಬೆಳದಿಂಗಳು, ಆಕಾಶದ ನಕ್ಷತ್ರಗಳು,-ಮಲಯಮಾರುತದ ಸ್ಪರ್ಶ.

"ಊರ್ಮಿಳೆ, ಈ ದಿನ ಒಳ್ಳೆ ಪ್ರಕಾಶಮಾನವಾದ ರಾತ್ರಿ-ಬಹಳ ಚೆನ್ನಾಗಿದೆ. ಇಂತಹ ಒಳ್ಳೇ ಬೆಳದಿಂಗಳು ಮತ್ತೆಲ್ಲಿ?"

ಅನಂತನ ಬಾಯಿಂದ ಮತ್ತೇನೂ ಹೊರಡಲಿಲ್ಲ; ಅದಾರೋ ಅಡ್ಡಗಾಲು ಹಾಕಿದಂತಾಯಿತು. ಅದಾರೋ "ವ್ಯರ್ಥ, ವ್ಯರ್ಥ" ಎಂದು ಹೇಳಿದಂತಾಯಿತು. ಅದೇ ಕ್ಷಣ ಎಲ್ಲವೂ ಗಂಭೀರವಾಯಿತು. ಅಯ್ಯೋ ತೀಸು? ಅನಂತನ ಗಂಟಲು ಕಟ್ಟಿಕೊಂಡು ಬಂತು. ಊರ್ಮಿಳೆ ಕೂಗಿ ಮಾತನಾಡಿಸಿದಳು. ಅನಂತನಿಗೆ ಪ್ರಪಂಚವು ಹಳದಿ-ಹಳದಿಯಾಗಿ ಕಂಡು ಬಂತು. ಹೃದಯದಲ್ಲಿ ಶೀಲಳ ಮೂರ್ತಿ. ಎದೆ ನಡುಗಿತು. ತಲೆಯಲ್ಲಿ ಯಾವುದೋ ಪ್ರವಾಹ ಹರಿದಂತಾಯಿತು. ಅದಾರೋ ಒಳಗೇ ಗರ್ಜನೆ ಮಾಡಿದರು:

"ಗಂಡಸು ವಿಶ್ವಾಸಘಾತುಕ."

ಅನಂತನು ಮೂರ್ಛಾಗತನಾದ. "ಶೀಲ, ಶೀಲ" ಎಂದು ಗಟ್ಟಿಯಾಗಿ ಕೂಗಿಕೊಂಡು ನಿಶ್ಚಲನಾದ. ತಲೆಯಲ್ಲಿ ವಿಕಾರ ಉತ್ಪನ್ನವಾಯಿತು. ಊರ್ಮಿಳೆ ಹೆದರಿದಳು. ಓಡಿ ಹೋಗಿ ಡಾಕ್ಟರರನ್ನು ಕರೆತಂದಳು. ಡಾಕ್ಟರು ಅದೇ ಸುರೇಶಬಾಬು.

ಊರ್ಮಿಳೆ ಹೇಳಿದಳು: "ಶೀಲ, ಶೀಲ .. ಎಂದು ಗಟ್ಟಿಯಾಗಿ ಕೂಗಿ ಧಡಕ್ಕನೆ ಬಿದ್ದುಬಿಟ್ಟರು" ಎಂದು.

ಡಾಕ್ಟರು ನಕ್ಕು, "ಏನೂ ಭಯವಿಲ್ಲ, ಕೇವಲ ಮಾನಸಿಕ ಭಯಕ್ಕಾಗಿ" ಅಂದರು. ಊರ್ಮಿಳೆಗೆ ಏನೊಂದೂ ತಿಳಿಯಲಿಲ್ಲ. ಅವರ ಮುಖ ನೋಡುತ್ತ ನಿಂತಳು. ಕೊಂಚ ಸಮಯದ ನಂತರ ಅನಂತನಿಗೆ ಪ್ರಜ್ಞೆ ಬಂತು.

ಬಹಳ ದಿನಗಳ ನಂತರ ಅಂಚೆ ಶಿಪಾಯಿ ಒಂದು ಪತ್ರ ಕೊಟ್ಟು ಹೋದ. ಅನಂತನು ಪತ್ರವನ್ನು ತೆಗೆದುಕೊಂಡ.

ಶೀಲ ಬರೆದಿದ್ದಾಳೆ:

"ಭಗವಂತನ ಆಶೀರ್ವಾದದಿಂದ ಹೇಗೋ ಕೊಂಚ ಹುಷಾರಾಗಿದೇನೆ; ಪುನಃ ಏನಾಗುತ್ತೆ ಎಂಬುದನ್ನು ಯಾರು ಬಲ್ಲರು? ಗೊತ್ತಾಯಿತು. ತಾವು ಮಾಡಿದ್ದೇ ಸರಿ ಗಂಡುಸು ಮಾಡಬೇಕಾದ್ದನ್ನೇ ಮಾಡಿದ್ದೀರಿ. ಹೆಂಗುಸು ಎಣಿಕೆಗೆ ಬಾರದ ವಸ್ತು. ಪುರುಷನ ಪೂರ್ಣ ಜೀವನವು ಒಬ್ಬ ಹೆಂಗುಸಿಗಾಗಿ ಏತಕ್ಕೆ ಕೆಡಬೇಕು? ತಮಗೊಳ್ಳೆ ಸುಖ. ಆದರೆ ನನಗೆ? ....ನಾನು ಹೆಂಗುಸು, ಘೃಣಿತಳು, ಸಮಾಜ ಪರಿತ್ಯಕ್ತಳು. ......ಆ ಬೆಳದಿಂಗಳ ರಾತ್ರಿ ಜ್ಞಾಪಕಕ್ಕೆ ಬರುತ್ತೆ. ಆಕಾಶದ ನಕ್ಷತ್ರಗಳಂತಹ ಜೀವನ ಬೇಕೆಂದು ಗಂಡಸು ಬಯಸುವನು. ಆದರೆ, ಅದು ಹೇಗಾದೀತು? ತಮ್ಮದೇನು ದೋಷ? ಎಲ್ಲ ನನ್ನದು. ಪುರುಷನಿಗೇ ಗೆಲುವು.

ಇತಿ ತಮ್ಮ,

-ಶೀಲ."

ಅನಂತನ ಮನಸ್ಸಿನಲ್ಲಿ ಎರಡು ಮಾತು ಉಳಿಯಿತು: "ನಕ್ಷತ್ರಗಳಂತಹ ಸಂಬಂಧ,-ಪುರುಷನಿಗೆ ಗೆಲುವು." ಪುರುಷನಿಗೆಂಥ ಗೆಲುವು? ಇದೇನು, ಗೆಲುವೇ ಅಥವಾ ಸೋಲೆ?

ಮಕ್ಕಳಿಗಾಗಿ

ಉದಯ

೧

ಮೂರಣ ಮನೆಯೊಡೆದ್ದು ಲಿಪಿಯು
ಮೋಡಗಳೆಡೆಯಲಿ ಧುಮುಕಿದವು.
ತಾಯಿಯ ಮೊಗವು—ಮಗನವು ಕಾಣಿಕೆ
ಚೆಲ್ಲಿದ ಅಪ್ರುಪಹೊರಳಿದವು

೨

ತಾವರೆ ಮೊಗ್ಗೆಯು, ಇರುಲಿಂದೆದ್ದು
ನಿದ್ದೆಯ ಕಣ್ಣನು ಅರಳಿಸಿತು.
ಸೂರ್ಯನು ಮೂಡಿದನೆನ್ನುತ ಹೂವು
ಸೀರೆಯ ಸರಿಪಡಿಸುತಲಿತ್ತು.

೩

ಹಕ್ಕಿಗಳು ಜತೆ ಸೇರುತ ಬಂದುವು;
ಕೋಗಿಲೆ ನೆಯನು ಹಾಡಿದುವು.
'ಬಾ, ಬಾ' ಎನ್ನುತ ಕರೆಯುವ ಮನೆಗೆ,
ಕೈಹಿಡಿದೆಳೆಯಲು ಹಾರಿದವು.

೪

ಮರಗಳು ಮಾತನ್ನಾಡದೆ ಇದ್ದರು
ಎಲೆಗಳ ಬಾವುಟ ಹಾರಿದುವು
ಫಲಗಳ ತಟ್ಟೆಲಿ ತುಂಬಿಸಿ ಹಿಡಿದು
ಕೈಗಳ ಬಾಗಿಗೆ ಎತ್ತರಿಸಿದುವು.

೫

ನೇಸರ ಬರುವನು, ಬೇಕನು ತಂದನು
ನಿದ್ದೆಯ ತೆಸರನು ಉಡುಗಿದನು.
ಎಂದಾ ಪರುಷದಿ ಇಂದಿನ ಬಾಲನು
ತಾಯಿಯ ತೊಡೆಯಲಿ ಹೊರಳಿದನು.

೬

ಸೂರ್ಯನು ಬರಲು, ಚಂದ್ರನು ತಾನು
ಒಡೆಯನ ಕಾಲಿಗೆ ಕಪ್ಪವ ತೆರಲು
ಸಾಗರದಾಳದಿ ಮುಳುಗಿದನವನು-
ಸೀರಡಿಯಿಂದ ರಕ್ಷವ ತರಲು.

೭

ಸ್ವಾಗತವೀಯಲು ಹೊಳೆಗಳ ನೀರು
ಕುಂಕುಮ ಕಲಡಿ ಕೆಂಪಾಗಿತ್ತು.
ಊರಿನ ಚಲುವೆಯರಾ ಗಡಿಗೆ
ಪಯದಲಿ ತುಂಬಿ ತುಳುಕಲಿತ್ತು.

—ಮ. ಶಾಮಭಟ್ಟ, ಶಿದೂರು.

ಸ ಹ ಕಾ ರ

ರಾಷ್ಟ್ರೀಯ ಸರಕಾರದ ಸ್ಥಾಪನೆಯಾದಂದಿನಿಂದ ಸಹಕಾರದ ಹೆಸರು ಕಾರ್ಯಗಳಲ್ಲೆಲ್ಲ ಸರಕಾರ ತನ್ನ ಸಹಾಯವನ್ನಾಗಿಯೂ ಪಡೆಸಲೇಳಬ ಪ್ರಯತ್ನಗಳು ಮೇಲಿಂದ ಮೇಲೆ ನಡೆಯುತಿವೆ. ಸರಕಾರದವರು ಸಹಕಾರ ಖಾತೆಯು ಸರಕಾರ ಸ್ವತಂತ್ರವ ಪ್ರಯತ್ನ ಆರಂಭಿಸಿದರು ಭಾಷಿಸಿ ಅದಕ್ಕೆ ಕಾಯಿದೆಯು ಮನ್ನಣೆಯನ್ನು ಕೊಟ್ಟಿದ್ದುಂಟು. ಹಿಂದೆ ಹಾಲ ಕೊಡುತ್ತಿದ್ದ ಹಳೆಯ ಕಲವಾಗಿಯೇ ಈ ಸಹಕಾರ ಸಂಘಗಳ ಅವಶ್ಯಕತೆ ಎಂಬ ತಿಳುವಳಿಕೆ ಕೊಂಡ ವ್ಯಕ್ತಿಯ ಸಹಕಾರ ಸಂಘಗಳಿಗೂ ಅವುಗಳ ಹೋಣೆಗಾರರಿಗೂ ಬಹಳ ಪ್ರಾಶಸ್ತ್ಯ ಪರಿಣಾಮ ಆದ ರಿಂತೆಂತಾಗುತ್ತಿತ್ತು. ಸಹಕಾರವೆಂದರೇನೆಂಬುದರ ತಿಳುವಳಿಕೆಯಿಲ್ಲದಿರುವುದೇ ಇದಕ್ಕೆ ದುಷ್ಪರಿಣಾಮಕ್ಕೆ ಕಾರಣವೆಂದು ಹೇಳಬಹುದು. ಇದೇನೂ ವಿಶಿಷ್ಟ ಮಾದರಿಯ ಸಂಸ್ಥೆಯಲ್ಲ ಇಲ್ಲವೆ ಕಾಯಿದೆಯೊಂದ ಅದಕ್ಕೇನೂ ಒಪ್ಪಿಗೆಯು ಮುದ್ರೆ ಬಿದ್ದಿರುವದಿಲ್ಲ. ಸಹಕಾರದ ತಾತ್ಪರ್ಯವೆಂದರೆ ಒಂದೇ ಧ್ಯೇಯಸಾಧನೆಗಾಗಿ ಕೂಡಿ ಕೆಲಸಮಾಡುವದು. ಅನುಭವದಿಂದ ಈ ಕೂಡಿ ಕೆಲಸ ಮಾಡುವದು. ಪರಸ್ಪರ ಕಲ್ಯಾಣಕ್ಕಾಗಿ ಇರಬೇಕಲ್ಲದೆ ಯಾವದೇ ಬಗೆಯ ವಿಶಿಷ್ಟ ಹಿತ ಸಂಬಂಧವನ್ನು ಸಮಾಧಾನಪಡಿಸಲಿಕ್ಕಿರದು. ಸಧ್ಯದ ಸಂಘಗಳಲ್ಲಿ ಈ ಬಗೆಯ ದೃಷ್ಟಿಕೋನವೇ ಇರುವದಿಲ್ಲ. ಉದಾಹರಣೆಯನ್ನು ಹೇಳುವದಾದರೆ ಮೊಲಿಯಿಂದ ಬಟ್ಟೆಯನ್ನು ಮಾಡುವಾಗ ಉದ್ದ ಮತ್ತು ಅಡ್ಡ ಎಳೆಗಳು ಒಂದಕ್ಕೊಂದು ಕೂಡಿಕೊಳ್ಳಬೇಕು. ಅದೇ ರೀತಿಯಾಗಿ ಆರ್ಥಿಕ ಕ್ಷೇತ್ರದಲ್ಲಿಯೂ ಉತ್ಪಾದಕನೂ ಬಳಸುವವನೂ ಒಂದೇ ಧ್ಯೇಯಸಾಧನೆಗಾಗಿ ಸಹಕರಿಸಲಿಕ್ಕೆ ಬೇಕು. ಈ ಸಹಕಾರವು ಶಕ್ಯವಾಗದಿದ್ದರೆ ಯಾವದೇ ಬಗೆಯ ಸುಧಾರಣೆಯ ಕಾರ್ಯವು ಯಶಸ್ವಿಯಾಗಲಾರದೆಂದು ನಾವು ಅನಿಸಿಕೊಳ್ಳದಿಲ್ಲ.

ಕಟ್ಟಡದಲ್ಲಿಯ ಇಟ್ಟಿಂಗಿಗಳಿಗೆ ಗಚ್ಚು ಸಿಮೆಂಟು ಎಷ್ಟು ಉಪಯುಕ್ತವೊ ಅದೇ ರೀತಿ ಆರ್ಥಿಕ ರಚನೆಯಲ್ಲಿ ಸಹಕಾರವು ಇರತಕ್ಕದ್ದು. ಸಂಯೋಜಕ ವಿಜಂಟಿನ ಇಟ್ಟಂಗಿಗಳನ್ನೆಲ್ಲ ಒಂದೆಡೆ ಇಟ್ಟು ಅವುಗಳಿಂದ ಒಂದು ಭದ್ರವಾದ ಕಟ್ಟಡವನ್ನು ಮಾಡುವಂತೆ ಸಾಮಾಜಿಕ ರಚನೆಯನ್ನು ಭದ್ರಗೊಳಿಸಲು ಸಹಕಾರವು ಸಹಾಯಕವಾಗಿ ಪರಿಣಮಿಸುತ್ತದೆ.

ನಮ್ಮ ದೇಹದಲ್ಲಿದ್ದ ವಿವಿಧ ಅವಯವಗಳು ಒಂದೇ ಧ್ಯೇಯಸಾಧನೆಗಾಗಿ ಒಂದಕ್ಕೊಂದು ಕೂಡಿಕೊಂಡು ಕೆಲಸ ಮಾಡುತಿವೆ. ಕಣ್ಣುಗಳು ವಸ್ತುಗಳನ್ನು ನೋಡುತಿದ್ದರೆ, ಕಾಲುಗಳು ಚಲಿಸುತ್ತವೆ, ಅದರಿಂದ ನಾವು ಹೋಗಬೇಕೆಂಬ ಸ್ಥಳಕ್ಕೆ ಹೋಗಿ ಮುಟ್ಟುತ್ತೇವೆ; ಆದರೆ ತದ್ವಿರುದ್ಧವಾಗಿ ಪ್ರತಿಯೊಂದು ಇಂದ್ರಿಯವು ಸಹಕರಿಸಲು ನಿರಾಕರಿಸಿದರೆ ನಾವು ಜಳ್ಳಿನಾಶದಿಂದ ಕೊರಗಬಹುದು. ಅದೇ ರೀತಿಯಾಗಿ ರಾಜಕೀಯ ಕ್ಷೇತ್ರದಲ್ಲಿ ಮತ್ತು ಸಮಾಜದಲ್ಲಿ ಪ್ರತಿಯೊಬ್ಬನು ತನ್ನ ಕರ್ತವ್ಯವನ್ನು ಮಾಡಲಿಕ್ಕೆ ಬೇಕು; ತನ್ನಷ್ಟಕ್ಕೆ ತಾನೇ ಕೂಡಿದರೆ ನಡೆಯದು: ತನ್ನ ನೆರೆಯವನ ಕಾರ್ಯಗಳಿಗೆ ಹೂರಕವಾಗುವಂತೆ ಅವನು ಕೆಲಸ ಮಾಡಬೇಕಾಗುವದು.

ಈ ರೀತಿಯಾಗಿ ಸಹಕಾರದ ಕಾರ್ಯಕ್ಷೇತ್ರಗಳು ಹಲವು ಬಗೆಯಾಗಿರುವವು. ಉದ್ದ ಅಡ್ಡ ಎಳೆ ಕೆಲಸ ಮಾಡುವವು, ಸಿಮೆಂಟ ಮತ್ತು ಇಟ್ಟಂಗಿಗಳು ಕೆಲಸ ಮಾಡುವದು ಮತ್ತು ಕಣ್ಣು ಹಾಗು ಕಾಲು ಕೆಲಸ ಮಾಡುವವು. ಪರಸ್ಪರ ಗಟ್ಟಿ ಹಿಡಿದು, ಒಂದಕ್ಕೊಂದು ಆಶ್ರಯ ಕೊಟ್ಟು ಮತ್ತು ಕೂಡಿ ಕೆಲಸ ಮಾಡಿ ಇವು ಕಾರ್ಯ ಮಾಡುವವು. ಸಾಂಘಿಕ ಸಹಕಾರ ಭಾವನೆಯಿಂದ ಈ ಮೂರೂ ಬಗೆಯ ಕಾರ್ಯಗಳು ನಡೆಯುವವು ಎಂಬುವದನ್ನು ನಾವು ಅಗಾಗ ಕಾಣುತ್ತೇವೆ. ನೇಕಾರನ ಸಹಕಾರದಾಹವೆಯು ನೇಕಾರರಿಗೆ ನೂಲು ಮಾಡುವದಿದ್ದರೆ ನೇಕಾರರು ಸಿದ್ಧಪಡಿಸಿದ ಬಟ್ಟೆಗಳನ್ನು ಉಪಯೋಗಿಸಲಿಕ್ಕೆ ಬೇಕು; ಕಾಗದ ತಯಾರ ಮಾಡುವವರಿಗೆ ಸಹಾಯ ಸಲ್ಲಿಸುವದಿದ್ದರೆ ಅವು ಕೈಯಿಂದ ತಯಾರ ಮಾಡಿದ ಕಾಗದಗಳನ್ನೇ ಉಪಯೋಗಿಸಲಿಕ್ಕೆ ಬೇಕು. ಸಾಮಾನ್ಯವಾಗಿ ಮಾಮೂಲ ಕೆಲಸಗಾರರಿಗೆ ಸರಕಾರವು ಉತ್ತೇಜನ ಕೊಡಬಯಸುವದಾದರೆ ಅವರು ತಯಾರ ಮಾಡಿದ ವಸ್ತುಗಳನ್ನೇ ಸರಕಾರವು ಉಪಯೋಗಿಸಲಿಕ್ಕೆ ಬೇಕಾಗುವದು.

ಬರವೇರಿ ಕುಂಭಗಳನ್ನು, ಗಿರಣಿಗಳ ಯಂತ್ರದ ಅರವೆ ಕುರಿಯಾಗಳನ್ನು ಮತ್ತು ಗಿರಣಿಗಳಲ್ಲಿ ತಯಾರಾದ ಇಲ್ಲಿ ಮೋಜು ಮೊದಲಾದ ಉಪಕರಣಗಳನ್ನು ಬಳಸುವ ಗ್ರಾಮೋದ್ಧಾರ ಮಂಡಳವು ಹೆಚ್ಚಾಗಿ ಗ್ರಾಮವಿನಾಶಕ ಖಾತೆಯು ಸೈ. ಸಧ್ಯದಲ್ಲಿ ಕೇವಲ ಅಜ್ಞಾನ ಮೂಲಕವಿರಬಹುದು, ನಮ್ಮ ಸರಕಾರಿ ಖಾತೆಗಳೆಲ್ಲ ಇದೇ ಪದ್ಧತಿಯಿಂದ ಕೆಲಸ ನಡೆಸುತ್ತವೆ. ಸಹಕಾರತತ್ವದ ಪ್ರಗತಿಯು ಪ್ರಮುಖವಾಗಿ ಕಾಲಾಕಾಲದಲ್ಲಿ ಕೂಗು ಕೇಳಬರುತ್ತಿದ್ದರೂ ಮೇಲೆ ಹೇಳಿದ ಪದ್ಧತಿಯಿಂದಲೆ ಅವು ಕೆಲಸ ನಡೆಸುತ್ತವೆ. ಕೇವಲ ಸರಕಾರಗಳಷ್ಟೆ ಅಲ್ಲ ಸಹಕಾರದಲ್ಲಿ ಆಸ್ಥೆಯುಳ್ಳ ವಿವಿಧ ಸಂಘ ಸಂಸ್ಥೆಗಳು ಮತ್ತು ವ್ಯಕ್ತಿಗಳು ಕೂಡ ಸಹಕಾರ ತತ್ವದ ಈ ವ್ಯಾಪಕಾರ್ಥವನ್ನು ತಿಳಿದುಕೊಂಡು ನಾವು ಯಾವ ತತ್ವವನ್ನು ಪ್ರತಿಪಾದಿಸಲು ಹೊರಟಿರುವರೊ ಅದು ಅಭಿವೃದ್ಧಿ ಹೊಂದುವ ರೀತಿಯಲ್ಲಿ ಕಾರ್ಯ ಮಾಡಬೇಕಲ್ಲದೆ ಜೀವನವನ್ನು ನಡೆಸತಕ್ಕದ್ದು. ಬಾಯಿಂದ ಒಂದು ಹೇಳಿ ತದ್ವಿರುದ್ಧ ಕೃತಿಯನ್ನು ನಾವು ಮಾಡಕೂಡದು. ಪಾದಾವತತ್ವಪ್ರಣಾಲಿಯನ್ನು ಪುರಸ್ಕರಿಸುತಿವೆಂಬುದನ್ನು ನಮ್ಮ ಕೃತ್ಯಗಳೇ ಸ್ಪಷ್ಟಪಡಿಸತಕ್ಕದ್ದು- ಸಹಕಾರವೆಂದರೆ ಕೇವಲ ಒಂದು ಕಾರ್ಯಪದ್ಧತಿಯಲ್ಲ ಅದರೆ ಅದೊಂದು ಬಗೆಯ ಜೀವನರೀತಿಯು. ಆದುದರಿಂದ ಅದರಲ್ಲಿ ಪಾದ್ರಿಯಲ್ಲಿ ಇರತಕ್ಕಷ್ಟು ಆಸ್ಥೆ ಇರಬೇಕಲ್ಲದೆ, ಒಂದೇ ಧ್ಯೇಯಸಾಧನೆಗಾಗಿ ಪರಿಪೂರ್ಣ ರೀತಿಯಿಂದ ಕೆಲಸ ಮಾಡಲಿಕ್ಕೆ ಬೇಕು.

ನಾವು ಎಷ್ಟೇ ದೊಡ್ಡ ಮತ್ತು ಸುಂದರ ವಸ್ತುಗಳನ್ನು ಮಾಡುವದರಲ್ಲಿ ವಿಶೇಷವೇನಿಲ್ಲ. ಆದರೆ ಯಾವ ದೃಷ್ಟಿಕೋನದಿಂದ ನಾವು ಅದನ್ನು ನೋಡುವೆವು ಮತ್ತು ಯಾವ ರೀತಿಯಿಂದ ನಾವು ಅದನ್ನು ಉತ್ಪಾದಿಸುವೆವು. ಎಂಬುದು ಹೆಚ್ಚು ಮಹತ್ವದ್ದಾಗಿದೆ. ಆದುದರಿಂದ ಸಾಧನಸಾಮುಗ್ರಿಗಳಕಡೆಗೆ ನಾವು ಹೆಚ್ಚು ಗಮನ ಕೊಡಬೇಕು. ತೋರಿಕೆಯಲ್ಲಿ ಸತ್ಪರಿಣಾಮಕಾರಿಯೆಂದು ತೋರುವ ವಸ್ತುಗಳನ್ನು ತಯಾರಿಸಿ, ನಿಜವಾದ ತಿರುಳನ್ನೆ ನಾಶ ಮಾಡುವಂಥ ದುರವಸ್ಥೆ ಪ್ರಾಪ್ತವಾಗದಂತೆ ನಾವು ಎಚ್ಚರ ವಹಿಸತಕ್ಕದ್ದು-

ನಮ್ಮ ದೇಶದಲ್ಲಿ ನಮ್ಮ ಸಂಸ್ಕೃತಿಯು ಸಹಕಾರ ತತ್ವದಿಂದ ಕೂಡಿದ್ದಾಗಿದೆಯಲ್ಲದೆ ಅದರಲ್ಲಿ ಸ್ಪರ್ಧೆಗೆ ಸ್ವಲ್ಪವೂ ಅವಕಾಶವಿಲ್ಲ. ವ್ಯಕ್ತಿಗಳ ಪ್ರಯತ್ನಕ್ಕಿಂತ ಸಾಂಘಿಕ ಪ್ರಯತ್ನಗಳಿಗೆ ಹೆಚ್ಚು ಮಹತ್ವ ಕೊಡಲಾಗಿದೆ. ಆದರೆ ದುರ್ದೈವದಿಂದ ಇಂದು ನಾವು ಗೊಂದಲದಲ್ಲಿ ಬಿದ್ದಿರುವೆವು. ಕಾಯಿದೆಯ ಮನ್ನಣೆ ಪಡೆದು ಪ್ರತಿಯೊಂದು ವ್ಯಕ್ತಿಯೂ ಕೆಲಸ ಮಾಡತಕ್ಕದ್ದು ಎಂಬ ಪದ್ಧತಿಯು ಪಾಶ್ಚಾತ್ಯರಿಂದ ನಮ್ಮಲ್ಲಿ ಬಂದಿದೆ. ಸ್ಪರ್ಧೆಯ ಯುಗದಲ್ಲಿ ಇವು ಉಪಯುಕ್ತವೆನಿಸಿರಬಹುದು. ಆದರೆ ಸಹಕಾರವು ಜೀವನದ ಉಸಿರು ಎಂದು ಭಾವಿಸಿದಲ್ಲಿ ಇವು ಅಯಶಸ್ವಿಯಾಗಲಿಕ್ಕೆ ಬೇಕಾಗುವದು. ಸಹಕಾರ ತತ್ವದಲ್ಲಿ ಆಧಾರವಾಗಿರುವ ಜೀವನಮಟ್ಟವು, ಸ್ಪರ್ಧೆಯ ಯುಗದಲ್ಲಿ ಕೆಲ ವಿಶಿಷ್ಟ ಜನರಿಗೆ ಶಕ್ಯವಾಗುವ ಜೀವನಮಟ್ಟಕ್ಕಿಂತ ತೀರ ಸಾದಾ ಮತ್ತು ಸರಳವಾಗಿರುವದು ಸ್ವಾಭಾವಿಕ. ಸಹಕಾರ ಜೀವನದಲ್ಲಿ ಪ್ರತಿಯೊಂದು ವ್ಯಕ್ತಿಗೂ ಉತ್ಪಾದನೆಯಲ್ಲಿ ಯೋಗ್ಯವಾದ ಪಾಲು ದೊರಕೇ ತೀರುವದು. ಆದರೆ ಸ್ಪರ್ಧೆಯ ಆರ್ಥಿಕ ಕ್ಷೇತ್ರದಲ್ಲಿ ಬಲಿಷ್ಠರಾದವರಿಗೇ ಒಳ್ಳೆ ಸಂಗತಿಗಳು ಮೀಸಲಾಗಿ ಉಳಿಯುವವು. ಸಹಕಾರವು ನಾಗರಿಕ ಮತ್ತು ಸಾಮಾಜಿಕ ಜೀವನವನ್ನು ಸುಗಮ ಮಾಡುತಿದ್ದರೆ, ಸ್ಪರ್ಧೆಯು ಕಾಡು ಜೀವನದತ್ತ ನಮ್ಮನ್ನೊಯ್ಯುತ್ತದೆ. ಅಲ್ಲಿಯೂ ಪರರ ಅಕಸ್ತ್ರಗಳನ್ನು ಹೀರಿ ಕೆಲ ಬಲಿಷ್ಠರು ಮಾತ್ರ ಲೋಲಾಡಬಲ್ಲರು.

—ಜೆ. ಸಿ. ಕುಮಾರಪ್ಪಾ

[೧೩ನೆಯ ಪುಟದಿಂದ]

ಸಮಸ್ಯೆಯನ್ನು ಬಿಡಿಯಾಗಿ ತೆಗೆದುಕೊಂಡು ಪಾಪದ ಅದರ ಪರಿಹಾರವಾಗದೆಂಬದನ್ನು ತಿಳಿದುಕೊಳ್ಳಲಿಕ್ಕೆ ಬೇಕು. ಪಠಾವಣಿ, ನಿಯಂತ್ರಣ, ಬಟ್ಟೆ, ಆಯಾತ ಧೋರಣ, ರಾಜಮಾರ್ಗಗಳು ಇವೆಲ್ಲ ಒಕ್ಕಲತನಕ್ಕೆ ಸಂಬದ್ಧವಾಗಿರುವವು ಮತ್ತು ಇವೆಲ್ಲ ಇಡಿಯಾಗಿ ಸುಸಂಬದ್ಧ ರೀತಿಯಲ್ಲಿ ಕಾರ್ಯಕಾರಿಯಾಗದಿದ್ದರೆ ಒಕ್ಕಲತನವು ಎಂದಿಗೂ ಅಭಿವೃದ್ಧಿ ಹೊಂದಲಾರದು.

ವರ್ಧಾ ೧೦-೮-೪೯ ಶಿ. ಫ. ಮು.

ಭಾಷೆಗಳನ್ನು ಕುರಿತು ಕಾಂಗ್ರೆಸ್ಸಿನ ಗೊತ್ತುವಳಿ

ಕಾಂಗ್ರೆಸ್ ಕಾರ್ಯಸಮಿತಿಯು ಭಾಷಾ ಸಮಸ್ಯೆಯನ್ನು ಕುರಿತು ಸ್ವೀಕರಿಸಿದ ಗೊತ್ತುವಳಿಯಲ್ಲಿ ಇಂಗ್ಲೀಷನ್ನು ಹದಿನೈದು ವರ್ಷಗಳ ಅವಧಿಯ ವರೆಗೆ ಇರಗೊಡಿಸಿದ್ದು ತೀರ ಹೆಚ್ಚಾಯಿತೆಂದೂ ಅದು ಪ್ರತಿಗಾಮಿ ಕ್ರಮವೆಂದೂ ಅಕ್ಷೇಪವೆತ್ತಬಹುದೇ ಹೊರತು ಗೊತ್ತುವಳಿಯ ಇತರ ಭಾಗಗಳು ದೇಶದಲ್ಲಿರುವ ಪ್ರತಿಯೊಂದು ಅಲ್ಪಸಂಖ್ಯ ಭಾಷೆಯ ಜನರಿಗೂ ತೃಪ್ತಿಕರವಾಗಿದೆ. ಪ್ರತಿಯೊಂದು ಪ್ರಾಂತಿಕ ಸರಕಾರವೂ ಅದನ್ನು ಪೂರ್ಣವಾಗಿಯೂ ಉದಾರ ಬುದ್ಧಿಯಿಂದಲೂ ಕೃತಿಗಿಳಿಸಲೆಂದು ಹಾರೈಸುತ್ತೇನೆ. ಕಾಗದದಲ್ಲಿ ಧೋರಣೆಯನ್ನು ನಿರೂಪಿಸುವುದಕ್ಕಿಂತಲೂ ನಿಜವಾದ ಆಚರಣೆ ಮತ್ತು ಅಲ್ಪಸಂಖ್ಯರ ಭಾಷೆಗಳಿಗೂ ಪಂಗಡಗಳಿಗೂ ತೋರಿಸುವ ಮರ್ಯಾದೆಯು ಹೆಚ್ಚು ಮಹತ್ವದ್ದು.

ಇಂಗ್ಲೀಷಿಗೆ ಹದಿನೈದು ವರ್ಷಗಳ ಅವಧಿ ಕೊಟ್ಟಿದ್ದರಲ್ಲಿ ಸರಕಾರಿ ನೌಕರಿಗಳಲ್ಲಿಯೂ ಶಾಸನ ಸಭೆಗಳಲ್ಲಿಯೂ ಚುನಾಯಿತ ಸರಕಾರಿ ಅಧಿಕಾರಸ್ಥಾನಗಳಲ್ಲಿಯೂ ಇರುವ ಹಿರಿಯರ ಸ್ಥಾನಗಳನ್ನು ಭದ್ರಗೊಳಿಸುವದೇ ಮೂಲೋದ್ದೇಶವೆಂದು ತೋರುತ್ತದೆ. ನೌಕರಿಗಳಲ್ಲಿರುವ ೪೫ ವರ್ಷ ಮೀರಿದವರಿಗೂ ಶಾಸನ ಸಭೆಗಳಲ್ಲಿರುವ ೬೦ ವಯಸ್ಸು ಮೀರಿದವರೂ ಅಷ್ಟರೊಳಗೇ ನಿವೃತ್ತರಾಗಿರುವ ಕಾರಣ ಅವರು ಈ ಹೊಸ ಭಾಷೆಯಲ್ಲಿ ಪ್ರಭುತ್ವವನ್ನು ಸಂಪಾದಿಸುವ ಹಿಂಸೆಯಿಂದ ಪಾರಾಗುವರು. ಅವರು ತಮಗೆ ಹಲಗಾಲದಿಂದ ರೂಢಿಬಿದ್ದುಹೋದ ಭಾಷೆಯಲ್ಲಿಯೆ ಕೆಲಸ ಸಾಗಿಸಿಕೊಂಡು ಹೋಗಲು ಸಮರ್ಥರಾಗುವರು. ಹೊಸ ವ್ಯವಸ್ಥೆಯ ಹೊರೆಯೆಲ್ಲ ಹೊಸ ಪೀಳಿಗೆಯ ಅಡಳಿತೆಗಾರರ ಮತ್ತು ಶಾಸನಸಭಾಸದರ ಹೆಗಲಮೇಲೆ ಬೀಳುವದು.

ಈ ಗೊತ್ತುವಳಿ ಆಡಳಿತೆಯ ಶಾಖೆಗಷ್ಟೇ ಅನ್ವಯಿಸುತಿದ್ದು, ಶಿಕ್ಷಣರಂಗಕ್ಕೆ ಅದನ್ನು ಅನ್ವಯಿಸುವಪ್ರಯತ್ನವಿಲ್ಲದಿರುವುದೊಂದು ಸುದೈವದ ಸಂಗತಿ. ಆದರೆ ಶಿಕ್ಷಣಜ್ಞರಲ್ಲಿಯೂ ಆಲಸ್ಯಕ್ಕೇನೂ ಬರಗಾಲವಿಲ್ಲ. ಅವರು ತಮ್ಮ ಕ್ಷೇತ್ರದಲ್ಲಿಯೂ ಇಂಥದೇ ವಿನಾಯತಿಯಿರಬೇಕೆಂದು ಅಪೇಕ್ಷಿಸುತ್ತಾರೆ. ಎಲ್ಲೋ ಕೆಲ ವೃದ್ಧ ಅಧ್ಯಾಪಕರನ್ನೂ ಶಿಕ್ಷಕರನ್ನೂ ಮಾತ್ರ ಸ್ವಲ್ಪರಿಯಾಯತಿಯಿಂದ ನೋಡುವ ಮಾತಾಗಿದ್ದರೆ ಅವರ ಬಗ್ಗೆ ಸಹಾನುಭೂತಿ ತೋರುವದು ಕಠಿನವಾಗುತ್ತಿದ್ದಿಲ್ಲ. ಆದರೆ ಅವರು ತಮ್ಮ ಅಪರಿವರ್ತನ ಬುದ್ಧಿಯನ್ನು ಶಾಶ್ವತಗೊಳಿಸಿ, ಮುಂದಿನ ಪೀಳಿಗೆಯ ಮೇಲೆಯೂ ವಿದೇಶಿ ಭಾಷೆಯನ್ನೇ ಹೇರಬೇಕೆನ್ನುತ್ತಾರೆ. ಇದರಿಂದ ಉಂಟಾದ ಪರಿಸ್ಥಿತಿ ತೀರ ಭಿನ್ನವೂ ಗಂಭೀರವೂ ಆಗಿದೆ.

ವರ್ಧಾ ಕಿ. ಘ. ಮ.
೧೧-೮-೪೯

ಚರಕ ಜಯಂತಿಯ ಸಂದೇಶ

ನಿಮ್ಮ ಬಟ್ಟೆಯನ್ನು ನೀವೇ ಮಾಡಿಕೊಳ್ಳಿರಿ

ಚರಕ ಸಂಘದವರು ಮಾಡಿದ ವಿಸ್ಮಯಜನಕ ರಚನಾತ್ಮಕ ಕಾರ್ಯ ಅಖಿಲ ಭಾರತದಲ್ಲಿ ಪ್ರಸಿದ್ಧವಾಗಿದೆ. ಅದನ್ನು ವರ್ಣಿಸುತ್ತ ಕೂಡ್ರುವದು ಅನವಶ್ಯ. ಜನರು ಅದನ್ನು ಇನ್ನಷ್ಟು ಬೆಳೆಸುವ ಅವಶ್ಯಕತೆಯನ್ನು ಮನಗಂಡು ಆ ಕಾರ್ಯಕ್ರಮವನ್ನು ತಮ್ಮದೇ ಆಗಿಸುವ ಪ್ರಯತ್ನ ಮಾಡುವರೆಂದು ಆಶಿಸುತ್ತೇನೆ. ಚರಕ ಸಂಘದ ಕಾರ್ಯಕ್ರಮದ ಮೂಲಕ ಅವರು ದೇಶದ ಜಟಿಲ ಸಮಸ್ಯೆಗಳನ್ನು ಬಿಡಿಸಬಲ್ಲರು. ತನ್ನ ಇತಿಹಾಸದಲ್ಲೆ ಇಂದಿನಂಥ ವಸ್ತ್ರಾಭಾವವನ್ನು ಭಾರತದ ಅನುಭವಿಸಿರಲಿಕ್ಕಿಲ್ಲ. ಅದಕ್ಕೆ ಇಂದಿನ ಸ್ಥಿತಿಗತಿಗಳಲ್ಲಿರುವ ಒಂದೇ ಉಪಾಯವೆಂದರೆ ಪ್ರತಿಯೊಬ್ಬನೂ ತನಗೆ ಬೇಕಾದ ಬಟ್ಟೆಯಲ್ಲಿ ಆದಷ್ಟು ಅಂಶವನ್ನು ತಾನೇ ಉತ್ಪಾದಿಸಿಕೊಳ್ಳುವುದು. ಇದು ಚರಕದಿಂದ ಮಾತ್ರವೇ ಸಾಧ್ಯ. ಇದರಲ್ಲಿ ಚರಕ ಸಂಘ ಜನತೆಗೆ ಮಾರ್ಗದರ್ಶನ ಮಾಡಬಲ್ಲದು. ಜನರಿಂದ ಸಹಕಾರ ದೊರೆತರೆ ಸಂಘವು ಈ ಚಟುವಟಿಕೆಯನ್ನು ಬೆಳೆಸುವಲ್ಲಿ ತನ್ನ ಮೇಲೆ ಬಿದ್ದ ಭಾರವನ್ನು ಸರಿಯಾಗಿ ನಿರ್ವಹಿಸಬಲ್ಲದೆಂದು ನಂಬಿದ್ದೇನೆ.

೩೧.೭.೪೯ —ವಲ್ಲಭಭಾಯಿ ಪಟೇಲ

ವ್ಯಾಪಾರ ಪ್ರಪಂಚ

ಮುಂಬಯಿ ಶೇರಪೇಟೆ

	ರು. ೧೯
ಮುಂಬಯಿ ಡಾಯಿಂಗ್	೧೦೭೦-೦-೦
ಕೋಹಿನೂರು	೨೬೬-೮-೦
ಸ್ವದೇಶಿ	೨೪೯-೦-೦
ಗೋಕಾಕ	೨೫೧-೮-೦
ಸೆಂಚುರಿ	೨೨೦-೦-೦
ಸಿಂಪ್ಲೆಕ್ಸ	೧೭೬-೦-೦
ಟಾಟಾ ಸ್ಟೀಲ ಡೆಫರ್ಡ	೧೩೪೫-೦-೦
ಇಂಡಿಯನ್ ಅಯರ್ನ್	೨೫-೬-೦
ಅಸೋ. ಸಿಮೆಂಟ್ಸ	೧೪೬-೪-೦
ಸೆಂಟ್ರಲ ಬ್ಯಾಂಕ್	೭೯-೦-೦
ಇಂಪೀರಿಯಲ್ (ಪೂರ್ಣ)	೧೬೩೫-೦-೦

ಚಿನ್ನ ಬೆಳ್ಳಿ

	ರು. ೧೮
ತಯಾರಿ ಬೆಳ್ಳಿ	೧೬೧-೦-೦
ತಯಾರಿ ಚಿನ್ನ	೧೧೪-೮-೦
ಸಾವರಿನ	೭೪-೦-೦

ಅರಳೆ

ಸೆಪ್ಟೆಂಬರ(ಅನಧಿಕೃತ)	೬೨೫.೦.೦

ಎಣ್ಣೆಕಾಳು

ಶೇಂಗಾ	೨೧೨-೮-೦
ಔಡ್ಲ ಎಣ್ಣೆ	೧೮-೮-೦

ಸಾಂಗಲಿ ಪೇಟೆ

	ರು. ೧೭
ಅರಿಸಿಣ(ಹೇರು)	೧೧೦.೧೦
ಮೆಣಸಿನಕಾಯಿ(ಹೇರು)	೧೨೫.೧೦
ಶೇಂಗಾ(ಖಂಡಿ)	೧೫೫.೦
ಬೆಲ್ಲ(ಹೇರು)	೫೦.

ಶಿವಮೊಗ್ಗೆ ಅಡಿಕೆ ಪೇಟೆ

	ರು. ೧೯
ತೀರ್ಥಹಳ್ಳಿ ದೇಶಾವರ ಕೆಡಿಹಸನ್ ಹಸ	೩೦-
,, ,,	೨೮-
ಕೊಪ್ಪ-ಶೃಂಗೇರಿ ಕಡಿ ಹಸನ	೨೯-
,, ಹಸ	೨೭..
ರಾಮಚಂದ್ರಾಪುರ	೨೬-೩೧
ಅಸ್ವಾವರ	೨೦-೨೭
ರಾಜಾ ಅಲವು	೨೭-೩೦
ಪೆಟಿನ್	೩೦-೩೫
ನುಲಿ	೨೮-೩೧
ಬೆಟ್ಟವಂತಿ	೧೯-೨೦
ಬೆಟ್ಟ	೧೬-೧೮

ಹುಬ್ಬಳ್ಳಿ

(ಎ. ಪ್ರೊ. ಮಾರ್ಕೆಟ ಕಮಿಟಿ ಹುಬ್ಬಳ್ಳಿ)

ರು. ೧೮

ಜಹೊ. ಹತ್ತಿ (ನಗಕ್ಕೆ) ವ್ಯಾಪಾರ ನಡೆಯಲಿಲ್ಲ.

ಅಕ್ಲಂಡ ಹತ್ತಿ ,, ,,		,,
ಜೀನ್ ಅರಳೆ ,, ,,		,,
ಡಬಲ್ ರೋಲ್ ಅರಳೆ ,,		,,
ಕುಸುಬಿ (ಬ. ಮಣಕ್ಕೆ) ೧೫-೧೫		೦೧೬-೮-೦
ಅಗಸಿ (ಚೀಲಕ್ಕೆ)	೪೨.೦.೦	೪೪.೦.೦
ಔಡಲ ,,	೩೬.೦.೦	೩೭.೦.೦
ಜ. ಹೆಸರು ,,	--	೪೪-೦-೦
ಕರಿ ಎಳ್ಳು ,,		೬೪.೦.೦
ಬಿಳಿ ಎಳ್ಳು ,,	೭೮.೦.೦	೮೦-೦-೦
ಕಡಲೆ ,,	೫೨.೦.೦	೫೩-೦-೦
ಉದ್ದು ,,	೩೯.೦.೦	೪೨-೦-೦
ಜ. ತೊಗರಿ ,,	೨೮.೦.೦	೩೦-೦-೦
ಹುರಳಿ ,,	೩೨.೦.೦	೩೪-೦-೦
ಕೆಂ. ಅಲಸಂದಿ ,,	೫೧.೦.೦	೫೪.೦-೦
ಬಿ. ಅಲಸಂದಿ ,,	--	೫೬-೦-೦
ಬೆಲ್ಲ (ಹೇರಿಗೆ ಆ ಮಣ)	೬೪.೦.೦	೬೮.೦-೦
ಶೇಂಗಾ (ಹೇರು)	೪೮.೦.೦	೫೦-೦-೦
ಶೇಂಗಾ ಕಾಳು	೮೦-೦.೦	೮೬-೦-೦

● ರಾಜಸ್ಥಾನದ ಮುಖ್ಯಮಂತ್ರಿ ಪಂ. ಹಿರಾಲಾಲ ಶಾಸ್ತ್ರಿಗಳು ದೊಡ್ಡದೊಂದು ನೇಗಿಲನ್ನು ಹೋಲಿಸಿಕೊಂಡು ತಮಗೆ ಬೇಕಾದ ಧಾನ್ಯವನ್ನು ತಾವೇ ಬೆಳೆಸುವ ಪ್ರತಿಜ್ಞೆ ಮಾಡಿದರು. ಗಾಲೂಟ ಎಂಬಲ್ಲಿ ರೈತ ಪರಿಷತ್ತನ್ನು ಉದ್ಘಾಟಿಸ ಬಂದಿದ್ದ ಅವರಿಗೆ ಬೆಳ್ಳಿಯ ಮಟ್ಟ ನೇಗಿಲನ್ನು ರೈತರು ಅರ್ಪಿಸಿದಾಗ ಅವರು ಇದಕ್ಕಿಂತ ಮರದ ನೇಗಿಲು ಉಪಯುಕ್ತವಾಗಿತ್ತೆಂದರು. ಆಗ ರೈತರು ದೊಡ್ಡ ಮರದ ನೇಗಿಲನ್ನೇ ತಂದು ಅವರ ಮುಂದಿಟ್ಟರು. ಸಂತುಷ್ಟರಾದ ಮುಖ್ಯಮಂತ್ರಿಗಳು ಮೇಲಿನಂತೆ ನುಡಿದರು. ಪಿ. ಟಿ. ಐ.


ಕರ್ನಾಟಕದ ಪೂರ್ವೇತಿಹಾಸದ ಮೇಲೆ ಬೆಳಕು

(೨ನೆಯ ಪುಟದಿಂದ)

ಹೇಳಿದ ವ ಆಯಾ ಗಂಗರಾಜರ ಹೆಸರುಗಳೂ ಬಿರುದುಗಳೂ ಅವರ ಪರಸ್ಪರ ಸಂಬಂಧವೂ ಪರಿವಿಡಿಯೂ ನೇರಾಗಿರಬೇಕೆಂಬಲ್ಲಿ ಸಂಶಯಕ್ಕೆ ಎಡೆಯಿಲ್ಲ.

ನಾಡು ಅಲಕ್ತ್ಮ ಮೂಡೇವಿಗೆ ಮಾತ್ರ ಇದೆ, ಅಳ ... ಎಂದೂ ಕಲಿವಲ್ಲಭ ಎಂದೂ ಕೋಶಗಳಿಂದ ತಿಳಿಯುತ್ತದೆ. ಅಂಥ ಅಸಾಧಾರಣವಾದ ಹೆಸರನ್ನು ಯಾವ ಹೆಣ್ಣುಮಕ್ಕಳಿಗೂ ಇಕ್ಕಲಾರರು.

೪ ನೆಯ ಭಾಗದಲ್ಲಿ ನೊಳಂಬರನ್ನು ಕುರಿತು ಪ್ರಸ್ತಾಪಿಸಿದೆ. ಅವರ ವಿಷಯವನ್ನು ಬಹಳ ಸಂಕ್ಷೇಪವಾಗಿ ರೈಸರ ಗ್ರಂಥದಲ್ಲಿ



" ಗಂಗರ ಆಳಿತ್ವಗಳ ಮಟ್ಟಿಗೆ, ದುರ್ವಿನೀತನ ಮುನ್ನಿನವರನ್ನು ತತ್ಕಾಲಕ್ಕೆ ಬತ್ತಟ್ಟಿಗಿಟ್ಟು ಹೇಳುವುದಾದರೆ, ಅದೇ ಹುಂಬಜ್ಜದ ಶಾಸನದಲ್ಲಿ "ತನ್ನ ತನೊಜೆಯ ಪುತ್ರನಂ ಪ್ರತಿಷ್ಠಿಸಿ ಜಯಸಿಂಹ ವಲ್ಲಭನನ್ವಯ ರಾಜ್ಯದೊಳುರ್ವ್ವಿ(=ಊರ್ವಿ)ಯೊಳ್ ವಿಗುರ್ವಿಸಿದಪಿದೇನಗುಬೋರ್ ನಿಜದೋರ್ಬಳದುನ್ನತಿ ದುರ್ವಿನೀತನಾ" ಅಂದರೆ ಗಂಗರಾಜನಾದ ದುರ್ವಿನೀತನು ತನ್ನ ಮಗಳ ಮಗನಾದ ಜಯಸಿಂಹ ವಲ್ಲಭನನ್ನು (ಅಂದರೆ ಬಾದಾಮಿಯ ಚಲುಕ್ಯ ಜಯಸಿಂಹನನ್ನು) ಆತನ ವಂಶದ ರಾಜ್ಯದಲ್ಲಿ (ಪುನಃ) ಪ್ರತಿಷ್ಠಿಸಿದನು ಎಂಬಲ್ಲಿಂದ ದುರ್ವಿನೀತನು ಚಲುಕ್ಯ ಜಯಸಿಂಹನ ಮಾತಾಮಹನೆಂದೂ, ಆ ಜಯಸಿಂಹನ ಮುಂಚಿನಿಂದಲೂ ಆತನ ಹಿರಿಯರು ಅಳರಸರಾಗಿದ್ದರೆಂದೂ ಸ್ಪಷ್ಟವಾಗುವುದರಿಂದ, ಇದನ್ನು ಒಪ್ಪಿದರೆ, ಆ ಜಯಸಿಂಹನ ಮಗನ ಮಗನಾದ ಚಲುಕ್ಯ I ಪುಲಿಕೇಶಿಯ ಕಾಲ ಕ್ರಿ. ಶ. ಸು. ೫೫೦ ಎಂದು ಸಾಕಷ್ಟು ಕಂಡಿತವಿರುವ ಕಾರಣ, ಅವನ ಪಿತಾಮಹನ ಮಾತಾಮಹನಾದ ಗಂಗ ದುರ್ವಿನೀತನ ಆಳಿತ್ವ, ನಾನು ನಿರ್ಣಯಿಸಿರುವಂತೆ, ಕ್ರಿ. ಶ. ೫ ನೆಯ ಶತಮಾನದ ನಡುಭಾಗದಿಂದ ಪ್ರಾರಂಭಿಸಬೇಕಲ್ಲದೆ, ಇವರು ನಿಶ್ಚಯಿಸಿರುವಂತೆ, ಕ್ರಿ. ಶ. ೬ ನೆಯ ಶತಮಾನದ ಮಧ್ಯದಲ್ಲಿ ಪ್ರಾರಂಭಿಸದು. ಆದರೆ ಹುಂಬಜ್ಜದ ಶಾಸನದಲ್ಲಿ ಹೇಳಿರುವ ದುರ್ವಿನೀತ- ಜಯಸಿಂಹರೊಳಗಣ ವಾವಿಯನ್ನು ನಾನು ಒಪ್ಪುತ್ತೇನೆ, ಇವರು ಒಪ್ಪುವುದಿಲ್ಲ (ಪು. ೧೪೧).

ದುರ್ವಿನೀತನ ನಲ್ಲಾಲದ ತಾಮ್ರಶಾಸನದಲ್ಲಿ ಆತನನ್ನು "ನಿಜವೈಮಾತ್ರೇಯಾನುಜ ಭುಜದ್ವಯಾತಿಗಾಢೋಪಗೂಢಾಂಸ ಭುಜಬಲ ಪರಾಕ್ರಮೇನಾಕ್ರಮ್ಯ ಕೃತಕೇಶಕಚಗ್ರಹಾಂ ರಾಜ್ಯಲಕ್ಷ್ಮೀಂ ಸ್ವೋರಃಸ್ಥಲೇ ವಿಪುಲೇ ನಿತ್ಯ ಸುಖನಿವಾಸಿನೀಂ ಕೃತವತಾ" ಎಂದಿರುವುದರಿಂದ, ಆತನು ತನ್ನ ಮಲತಾಯಿ ಮಗನ ತೋಳುಗಳು ಬಿಗಿಯಾಗಿ ತಬ್ಬಿಕೊಂಡಿರುವ ರಾಜ್ಯಲಕ್ಷ್ಮಿಯನ್ನು ಸೆಳೆತಂದು ತನ್ನ ವಕ್ಷಃಸ್ಥಲದಲ್ಲಿ ನಿಲಿಸಿಕೊಂಡನೆಂದು ವ್ಯಕ್ತವಾಗುತ್ತದೆ. ಹಾಗಾದರೆ ಅವರಿಬ್ಬರ ತಂದೆಯಾದ ಅವಿನೀತನು ಕಾಲವಾಗುತ್ತಲೆ ದುರ್ವಿನೀತನ ಮಲತಮ್ಮನು ಪಟ್ಟಕ್ಕೆ ಬಂದು ಕೆಲವರ್ಷವಾದರೂ ಆಳುತ್ತಿರಬೇಕು. ಆತ ಏವ ಈ ಪುಸ್ತಕದಲ್ಲಿ ಕೊಟ್ಟಿರುವ ಗಂಗರ ವಂಶವೃಕ್ಷದಲ್ಲಿ (೧೧೫ ನೆಯ ಪುಟದ ಎದುರಿಗೆ) ದುರ್ವಿನೀತನ ಮಲತಮ್ಮನು, ರಾಜ್ಯವಾಳಲಿಲ್ಲ ಎಂಬ ಇವರ ಅಭಿಪ್ರಾಯವನ್ನು ಒಪ್ಪಲಾಗುವುದಿಲ್ಲ.

ಜ್ಯೇಷ್ಠಾದೇವಿ ಎಂದರೆ ಹಿರಿಯ ರಾಣಿ (=ಮಹಿಷಿ) ಎಂದೇ ಅರ್ಥವಲ್ಲದೆ, ಅದು ದುರ್ವಿನೀತನ ತಾಯಿಯ ಅಂಕಿತನಾಮವಲ್ಲ. (ಪು. ೧೫೬). ಏಕೆಂದರೆ ಜ್ಯೇಷ್ಠಾದೇವಿ ಎಂಬ ಅಂಕಿತ

(Mysore and Coorg from Inscriptions ೧೯೦೯) ಕಂಡ ಬಳಿಕ ಅದಕ್ಕಿಂತ ಶಾನೆ ವಿವರವಾಗಿ ನಾನು ಕಂಡುದು ಈ ಗ್ರಂಥದಲ್ಲಿ ತಾನೆ. ೫ ನೆಯ ಭಾಗದಲ್ಲಿ ಸಂಕ್ಷೇಪವಾಗಿ ಅದರೂ ಈಗ ತಿಳಿದುಬಂದಷ್ಟರ ಮಟ್ಟಿಗೆ ಬಾಣರನ್ನು ಕುರಿತೂ ಹೇಳಿದೆ.


ಈ ವಿಮರ್ಶೆಯಲ್ಲಿ ಈ ಗ್ರಂಥದ ರಚಕರ ಕೆಲಕೆಲವು ನಿರ್ಣಯಗಳನ್ನು ನಾನು ಒಪ್ಪಲಾಗುವುದಿಲ್ಲ ಎಂದಿರುವೆ ಮಾತ್ರಕ್ಕೆ ಅವು ಸರಿಯಲ್ಲ, ನನ್ನವೇ ಸರಿ ಎಂದು ನಾನು ಸಾಧಿಸುತ್ತೇನೆಂದು ಇವರಾಗಲಿ ವಾಚಕರಾಗಲಿ ಸರ್ವಥಾ ಭಾವಿಸಬಾರದು. ಏಕೆಂದರೆ ಮೊದಲಿನಿಂದಲೆ ನಮ್ಮ ದಾರಿಗಳು ಕವಲೊಡೆದ ಕಾರಣ, ಸಾಹಜಿಕವಾಗಿ ಅವರ ಮುಟ್ಟುಗಡೆ ಬೇರೆ ನನ್ನ ಮುಟ್ಟುಗಡೆ ಬೇರೆಯಾದುವು. ಇಂಥಾ ಭಿನ್ನಾಭಿಪ್ರಾಯಗಳ ನಿರ್ಗಲನದ ಅಥವಾ ಪರಸ್ಪರ ತುಲನದ ಭಾರ ಯಾವ ಭವಿಷ್ಯದಮೇಲಿದೆಯೊ ಅದರ ಸದಸದ್ವಿವೇಚನದಲ್ಲಿ ಪ್ರಾಯಶಃ ಅವರ ನಿರ್ಧಾರಗಳು ಒಪ್ಪಾಗಿ ನನ್ನವು ತಪ್ಪಾಗಬಹುದು, ಯಾರು ಬಲ್ಲರಿ? ಆದರೆ ನನ್ನ ಬಳಿಗೆ ವಿಮರ್ಶೆಗೆ ಬಂದ ಗ್ರಂಥವನ್ನು ಇತರರ ದೃಷ್ಟಿಯಿಂದಲ್ಲ, ನನ್ನ ದೃಷ್ಟಿಯಿಂದ ತಾನೆ ವಿಮರ್ಶಿಸಬೇಕಾದಲ್ಲಿ, ನನ್ನ ದೃಷ್ಟಿಗೆ ಒಪ್ಪದುದನ್ನು ಒಪ್ಪಲಾಗುವುದಿಲ್ಲ ಎಂದಿರುತ್ತೇನೆ. ಅದರಿಂದ ಇದೊಂದು ಸಾಮಾನ್ಯ ಗ್ರಂಥವೆಂದು ಯಾರೂ ತಿಳಕೊಳ್ಳಬಾರದು. ಇದು ಉತ್ಕೃಷ್ಟವಾದ ಗ್ರಂಥ. ಫ್ಲೀಟರ Kanarese Dynasties ಎಂಬ ಗ್ರಂಥವನ್ನು ೫೦ ಕ್ಕೂ ಹೆಚ್ಚು ವರ್ಷಗಳ ಹಿಂದೆ ಮುಂಬಯಿ ಸರಕಾರವು ಕನ್ನಡಿಸಿ ಪ್ರಕಟಿಸಿದ ಬಳಿಕ ಇಂಥಾ ಗ್ರಂಥ ಕರ್ನಾಟಕದಲ್ಲಿ ಹುಟ್ಟಿಲ್ಲ. ಈ ಗ್ರಂಥವಾದರೊ ಆ ನಡುವೆ ದೊರೆತ ಆಯಾ ಅರಸುಮನೆತನಗಳ ಅನೇಕ ಶಾಸನಗಳೇ ಮೊದಲಾದವುಗಳ ಬೆಂಬಲದಿಂದ ಆ ಗ್ರಂಥಕ್ಕಿಂತ ಎಷ್ಟೋ ಮುಂದುವರಿದದೆ. ಇಷ್ಟು ಉತ್ತಮವೂ ಪ್ರಶಸ್ತವೂ ಆದ ಗ್ರಂಥವನ್ನು ಕರ್ನಾಟಕದ ಇತಿಹಾಸಕ್ಕೇ ಅಲ್ಲ, ಕರ್ನಾಟಕ ಭಾಷೆಗೂ ಒದಗಿಸಿರುವ ಬಗ್ಗೆ ಈ ಗ್ರಂಥಕರ್ತರಿಬ್ಬರನ್ನೂ ಪುನಃ ಪುನಃ ಅಭಿನಂದಿಸುತ್ತೇನೆ, ಕನ್ನಡಿಗರು ಈ ಗ್ರಂಥವನ್ನು ಓದಬೇಕೆಂದು ಒತ್ತಿ ಹೇಳುತ್ತೇನೆ, ಹಾಗೂ ಕುತೂಹಲದಿಂದ ಇದರ ಮುಂದಿನ ಸಂಪುಟದ ಹಾದಿನೋಡುತ್ತೇನೆ.

೨

The Karnataka Historical Review VII, 1948

ಈ ಇಂಗ್ಲೀಷು ಐತಿಹಾಸಿಕ ಪತ್ರಿಕೆಯ ಸಂಪುಟದಲ್ಲಿ ಪ್ರಾಚೀನ ಲಿಪಿಶಾಸ್ತ್ರದ ಇಲಾಖೆಯ ಈಗ ನಿವೃತ್ತ ಮೇಲಧಿಕಾರಿಯಾದ ಶ್ರೀ ಕೆ. ವಿ. ಸುಬ್ರಹ್ಮಣ್ಯ ಅಯ್ಯರರು ಧಾರವಾಡದ ಕರ್ನಾಟಕ ಸಂಶೋಧಕ ಮಂಡಲದ ಆಶ್ರಯದಲ್ಲಿ ಮಾಡಿದ ೨ ಭಾಷಣಗಳು ಪ್ರಕಟವಾಗಿವೆ. ಅವಲ್ಲಿ ಮೊದಲನೆಯ "ಐತಿಹಾಸಿಕ ಸಂಶೋಧನೆಯ ರೀತಿ" ಎಂಬ ಭಾಷಣವಾದರೊ ಬಹಳ ಉತ್ತಮವಾಗಿದೆ. ಹೊಸತಾಗಿ ಮನೆಗೆ ಬಂದ ಸೊಸೆಗೆ ಮನೆವಾರ್ತೆಯಲ್ಲಿ ನುರಿತ ಅಕ್ಕರೆಯ ಅತ್ತೆ ಒಂದರ ಹಿಂದೆ ಒಂದು ಮನೆಗೆಲಸವನ್ನು ಕಲಿಸಿಕೊಡುವಂತಿದೆ. ಅದನ್ನು ಓದಿ ಅರಗಿಸಿಕೊಂಡು ಸಂಶೋಧನದಲ್ಲಿ ಅದಕ್ಕಂತೆ ನಡಕೊಂಡರೆ, ಅದರಲ್ಲಿ ಆಸ್ಥೆಯುಳ್ಳ ಅಭ್ಯಾಸಿಗಳು ಮುಂದೆ ಗಟ್ಟಿಗರಾಗಬೇಕು. ೨ ನೆಯ "ರಾಷ್ಟ್ರಕೂಟರ ಇತಿಹಾಸದ ಕೆಲವು ರಹಸ್ಯಗಳು" ಎಂಬ ಭಾಷಣದಲ್ಲಿ ಆ ಅರಸರನ್ನು ಕುರಿತು ಕೆಲವು ಪ್ರಶ್ನೆಗಳನ್ನು ಎತ್ತಿಕೊಂಡು ಅವನ್ನು ಯಥಾಶಕ್ತಿಯಾಗಿ ಹಾಗೂ ಮನಮೆಚ್ಚಾಗಿ ವಿಶದೀಕರಿಸಿದೆ. ಅದನ್ನು ಸವಿಸ್ತರವಾಗಿ ವಿಮರ್ಶಿಸಲಿಕ್ಕೆ ಈಗಲೇ ಉದ್ದ ಬೆಳೆದ ಈ ಲೇಖದಲ್ಲಿ ಎಡೆಯೂ ಇಲ್ಲ, ಹಾಗೂ ಹೋಳಿಗೆಯ ರುಚಿಯನ್ನು ಮೆದ್ದಲ್ಲದೆ ಕೇಳಿ ತಿಳಕೊಳ್ಳಲೂ ಸಲ್ಲ. ಇವೆರಡೂ ಲಾಭಪ್ರದವಾದ ಭಾಷಣಗಳನ್ನು ಯಾವ ಸಂಶೋಧನಕಾರನೂ ಕನ್ನಡ ನಾಡಿನ ಇತಿಹಾಸಕಾರನೂ ಓದಬೇಕು. ಈ ಭಾಷಣಗಳಿಂದ ಕರ್ನಾಟಕದ ಸಂಶೋಧನಕ್ಕೂ ಇತಿಹಾಸಕ್ಕೂ ಮಾಡಿರುವ ಅನರ್ಘ್ಯವಾದ ಉಪಕಾರದ ಬಗ್ಗೆ ಶ್ರೀ ಅಯ್ಯರರನ್ನು ಮನಸಾರೆ ಅಭಿನಂದಿಸುತ್ತೇನೆ.

—ಗೋವಿಂದ ಪೈ (ಮಂಜೇಶ್ವರ)



ಹೊಸ ನೇಗಿಲು: ಜೋಡು ನೇಗಿಲುಗಳನ್ನು ಸೇರಿಸಿ ಹಿಂದೀ ಕೃಷಿ ಸಂಶೋಧನ ಖಾತೆಯವರು ನಿರ್ಮಿಸಿದ ಈ ನೇಗಿಲು ಇಮ್ಮಡಿ ಕೆಲಸ ಮಾಡುತ್ತದೆ.

● ಮಧ್ಯಪ್ರಾಂತ ಮತ್ತು ವರ್ಹಾಡದ ಹಿಂದಿನ ಮುಖ್ಯ ಮಂತ್ರಿಗಳಾಗಿದ್ದ ಡಾ. ಎನ್. ಬಿ. ಖರೆ ಇವರು ಹಿಂದೂ ಮಹಾಸಭಾ ಪಕ್ಷವನ್ನು ಸೇರುತ್ತ ಆ ಪಕ್ಷದ ತತ್ವಪ್ರಣಾಲಿಯು ತಮಗೆ ಒಪ್ಪಿಗೆಯಾಗುತಿರುವುದರಿಂದ ಅದನ್ನು ಸೇರುತಿರುವುದಾಗಿ ಸಾರಿದ್ದಾರೆ.

● ನಾಗಪುರದಲ್ಲಿ ಅಝಾದಿ ಎಂಬ ಹಿಂದೀ ಸಾಪ್ತಾಹಿಕದ ಸಂಪಾದಕರು ಒಂದು ಸಾವಿರ ರೂಪಾಯಿಗಳ ಜಾಮೀನ ಕೊಡಬೇಕೆಂದು ಪ್ರಾಂತೀಯ ಸರಕಾರದವರು ವಿಧಿಸಿದ ಆಜ್ಞೆಯನ್ನು ಹಾಯಕೋರ್ಟಿನವರು ರದ್ದುಪಡಿಸಿರುವರು. ಕೂಲಿಕಾರರ ಬಗ್ಗೆ ಸರಕಾರದವರು ವಹಿಸಿದ ಧೋರಣವು ಶುದ್ಧ ದಬ್ಬಾಳಿಕೆಯದಾಗಿದೆ ಎಂಬ ಲೇಖನದ ಬಗ್ಗೆ ಈ ಜಾಮೀನು ಕೇಳಲಾಗಿದ್ದಿತು.

ಈ ಪತ್ರಿಕೆಯನ್ನು ಹುಬ್ಬಳ್ಳಿ ಸಂಯುಕ್ತ ಕರ್ನಾಟಕ ಮುದ್ರಣಾಲಯದಲ್ಲಿ "ಲೋಕಶಿಕ್ಷಣ ಟ್ರಸ್ಟಿನ" ಪರವಾಗಿ ಹ. ರಾ. ಪುರೋಹಿತರು ಮುದ್ರಿಸಿ ಪ್ರಕಟಿಸಿದರು.